ಅಧ್ಯಾಯ - ೧೪

## ಸಂಸ್ಕೃತಿ

ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳನ್ನು ಪರಿಗಣಿಸಿದರೆ ಗುಲಬರ್ಗಾ ಜಿಲ್ಲೆ ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆ ಹೊಂದಿದೆಯೆಂದು ಹೇಳಬಹುದು. ರಾಷ್ಟ್ರಕೂಟರ ಕಾಲದಲ್ಲೇ ಪ್ರಾಕೃತ, ಸಂಸ್ಕೃತ ಸಾಹಿತ್ಯದೊಂದಿಗೆ ಕನ್ನಡ ಸಾಹಿತ್ಯಕ್ಕೂ ಸಾಕಷ್ಟು ಪ್ರೋತ್ಸಾಹ ದೊರೆಯಿತು. ನಂತರ ಆಯಾ ಕಾಲದ ಸಾಹಿತ್ಯಿಕ ಬೆಳವಣಿಗೆಗಳು ಜಿಲ್ಲೆಯಲ್ಲಿ ಮುಂದುವರೆದವು. ವೀರಶೈವ ವಚನಕಾರ ಪರಂಪರೆ ಕಲ್ಯಾಣನಾಡಿನ ಈ ಭಾಗದಲ್ಲೂ ಕಾಣಿಸಿಕೊಂಡಿದ್ದು ಇಂದಿಗೂ ಶೈವ ಪರವಾದ ಮಠಮಾನ್ಯಗಳು ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮ ಕಾಣಿಕೆಗಳನ್ನು ನೀಡುತ್ತಿವೆ. ಕನ್ನಡದ ಪ್ರಥಮ ಕಾವ್ಯ 'ಕವಿರಾಜ ಮಾರ್ಗ' ರಚಿತವಾಗಿದ್ದು ಈ ಜಿಲ್ಲೆಯಲ್ಲಿ. ನ್ಯಾಯ ಶಾಸ್ತ್ರದಲ್ಲಿ ಆಕರ ಗ್ರಂಥವಾದ ಮಿತಾಕ್ಷರದ ಕೃತಿಕಾರ ವಿಜ್ಞಾನೇಶ್ವರ ಈ ಜಿಲ್ಲೆಯವನು. ಮಧ್ವಾಚಾರ್ಯರ ಗ್ರಂಥಗಳಿಗೆ ಟೀಕೆ ಬರೆದ ಜಯತೀರ್ಥಾಚಾರ್ಯರು ಮಳಖೇಡದಲ್ಲಿ ದೇಹಾವಸಾನ ಮಾಡಿದರು. ಕನ್ನಡ ಸಾಹಿತ್ಯದೊಂದಿಗೆ ಉರ್ದು, ಮರಾಠಿ ಹಾಗೂ ಹಿಂದಿ ಸಾಹಿತ್ಯ ಕೃಷಿಯೂ ಜಿಲ್ಲೆಯಲ್ಲಿ ಗಮನಾರ್ಹವಾಗಿ ಆಗಿವೆ. ಖ್ವಾಜಾ ಬಂದೇ ನವಾಜರು ಸ್ವತಃ ಹಲವಾರು ಗ್ರಂಥಗಳನ್ನು ರಚಿಸಿದ್ದು ಆ ಪರಂಪರೆ ಇಂದಿಗೂ ಮುಂದುವರಿದಿದೆ.

ಚಿತ್ರಕಲೆಯ ಕ್ಷೇತ್ರದಲ್ಲಿಯಂತು ಗುಲಬರ್ಗಾ ಇಡೀ ರಾಜ್ಯದ ಗಮನ ಸೆಳೆದಿದೆ. ಸ್ನಾತಕೋತ್ತರ ಮಟ್ಟದಲ್ಲಿ ಚಿತ್ರಕಲೆ ಕಲಿಯಲು ದಕ್ಷಿಣ ಭಾರತದಲ್ಲೇ ಪ್ರಥಮವಾಗಿ ಅವಕಾಶವಾದುದು ಇಲ್ಲಿಯ ವಿಶ್ವವಿದ್ಯಾಲಯದಲ್ಲಿ. ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ಎಸ್. ಎಂ. ಪಂಡಿತರ ತವರೂರು ಗುಲಬರ್ಗಾ. ಪತ್ರಿಕೋದ್ಯಮದಲ್ಲಿಯೂ ಜಿಲ್ಲೆಗೆ ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಮುದ್ರಣ ಹಾಗೂ ಪ್ರಕಟಣಾ ಕ್ಷೇತ್ರಗಳಲ್ಲೂ ಜಿಲ್ಲೆ ಹಿಂದೆ ಬಿದ್ದಿಲ್ಲ.

ಕಳೆದ ೩-೪ ದಶಕಗಳಲ್ಲಿ ರಂಗಭೂಮಿಯೂ ಕೂಡ ಗಮನಾರ್ಹವಾಗಿ ಬೆಳೆದಿದೆ. ನಾಟಕ ತಂಡಗಳು ಉದಯವಾಗಿ ನಿರಂತರವಾಗಿ ನಾಟಕ ಪ್ರಯೋಗಗಳು ರಂಗ ಮಂದಿರಗಳಲ್ಲಿ ನಡೆಯುತ್ತಿವೆ. ಸಂಗೀತ ಕ್ಷೇತ್ರವು ಕನಿಷ್ಟ ೩೦ ವರ್ಷಗಳ ಹಾದಿಯನ್ನು ಪ್ರವಹಿಸಿದೆ. ರಾಜ್ಯ ಮಟ್ಟದಲ್ಲಿ ಮಾನ್ಯತೆ ಪಡೆದಿರುವ ಹಲವಾರು ಪ್ರಬುದ್ಧ ಸಂಗೀತಗಾರರಿದ್ದಾರೆ. ಗಜಲ್, ಶಾಹರಿ, ಮುಶಾಯೆರ ಇತ್ಯಾದಿ ಉರ್ದು ಕವಿತೆ ಹಾಡುವ ದೊಡ್ಡ ತಂಡವೇ ಜಿಲ್ಲೆಯಲ್ಲಿದೆ. ನೃತ್ಯದಲ್ಲಿ ಭರತನಾಟ್ಯ ಶೈಲಿ ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯನ್ನು ಪ್ರವೇಶಿಸಿದ್ದರೂ ಆಶಾದಾಯಕವಾಗಿ ಬೆಳೆಯುತ್ತಿದೆ.

ಜನಪದ ಕಲೆಗಳು ವೈವಿಧ್ಯಮಯವಾಗಿ ಜಿಲ್ಲೆಯಾದ್ಯಂತ ಜೀವಂತವಿರುವುದಲ್ಲದೆ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳು ವ್ಯವಸ್ಥಿತವಾಗಿ ಜನಪದದ ಬಹುಮುಖಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ಉಳಿದಂತೆ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳಲ್ಲಿ ವಿವಿಧ ಅರಸು ಮನೆತನಗಳಿಂದ ರಚಿತವಾದ ಧಾರ್ಮಿಕ ಮಂದಿರಗಳಲ್ಲಿಯ ವಾಸ್ತುಶಿಲ್ಪ ಹಾಗೂ ಬಿಡಿ ಶಿಲ್ಪಗಳು ಅಸಂಖ್ಯಾತವಾಗಿ ಜಿಲ್ಲೆಯಾದ್ಯಂತ ಚದುರಿ ಹೋಗಿವೆ.

ಜಿಲ್ಲೆಯು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ್ದರೂ ವ್ಯಾಪಕವಾದ ಸರ್ವೇಕ್ಷಣೆ ಆಗದೇ ಇರುವುದು, ವ್ಯವಸ್ಥಿತವಾಗಿ ಅಧ್ಯಯನವಾಗದಿರುವುದು, ಸಾಂಸ್ಕೃತಿಕವಾಗಿ ಕಾಣಿಕೆನೀಡುತ್ತಿರುವ ವ್ಯಕ್ತಿಗಳನ್ನಾಗಲೀ ಸಂಘ ಸಂಸ್ಥೆಗಳನ್ನಾಗಲೀ ಗುರುತಿಸದೇ ಇರುವುದು; ಮುಖ್ಯವಾಗಿ ಗುಲಬರ್ಗಾವು ಸೇರಿದಂತೆ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ರಾಜ್ಯ ಮಟ್ಟದ ಪತ್ರಿಕೆಗಳು ಇಲ್ಲದಿರುವುದು ಇಲ್ಲಿಯ ಸಾಂಸ್ಕೃತಿಕ ಪ್ರತಿಭೆಗಳನ್ನು, ಅವರ ಕಾಣಿಕೆಗಳನ್ನು ಹೊರ ಪ್ರಪಂಚಕ್ಕೆ ತೆರೆದಿಡಲು ಸಾಧ್ಯವಾಗಿಲ್ಲ. ವಿಶಾಲ ಕರ್ನಾಟಕವಾದ ಮೇಲೆ ಹಾಗೂ ಆಕಾಶವಾಣಿ, ದೂರದರ್ಶನ ಮತ್ತು ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಜಿಲ್ಲೆಗೆ ಹೊರಗಿನಿಂದ ಅನೇಕ ಪ್ರತಿಭಾವಂತರು ಬಂದಿದ್ದು ಅವರಲ್ಲಿ ಕೆಲವರು ಇಲ್ಲಿಯೇ ನೆಲೆಸುವಂತಾಯಿತು. ಅಂತೆಯೇ ಈ ಜಿಲ್ಲೆಯಲ್ಲಿ ಹುಟ್ಟಿದ ಹಲವಾರು ಪ್ರತಿಭಾಶಾಲಿಗಳು ಹೊರ ಊರು, ರಾಜ್ಯಗಳಲ್ಲಿ ಕ್ರಿಯಾಶೀಲರಾಗಿರುವುದುಂಟು.

ಸಂಗೀತ ಕ್ಷೇತ್ರದಲ್ಲಿ ಸಿದ್ದರಾಮ ಜಂಬಲದಿನ್ನಿ, ನಾಟಕ ಕ್ಷೇತ್ರದಲ್ಲಿ ಗರುಡ ಸದಾಶಿವರಾಯರು ಹಾಗೂ ಗಿರಡ್ಡಿ ಗೋವಿಂದರಾಜ, ಜನಪದ ಸಂಶೋಧನೆಯಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ; ನೃತ್ಯದಲ್ಲಿ ಶುಭಾಂಗಿ, ಶಿಲ್ಪದಲ್ಲಿ ಧನಂಜಯ ಶಿಲ್ಪಿ ಮುಂತಾದವರು ರಾಜ್ಯದ ಇತರ ಜಿಲ್ಲೆಗಳಿಂದ ಬಂದು ಇಲ್ಲಿಯ ಆಯಾ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ತಿರುವು ನೀಡಿದವರು. ಸಾಹಿತ್ಯ ಕ್ಷೇತ್ರದಲ್ಲಿಯಂತೂ ಹೊರಗಿನಿಂದ ಬಂದ ಜಯತೀರ್ಥ ರಾಜ ಪುರೋಹಿತರಿಂದ ಹಿಡಿದು ತವಗ ಭೀಮಸೇನ ರಾವ್, ವಸಂತ ಕುಷ್ಟಗಿ, ಎಸ್. ಆರ್. ಗುಂಜಾಳ, ಸರಿತ ಕುಸುಮಾಕರ ದೇಸಾಯಿ, ಸಂಗಮೇಶ ಸವದತ್ತಿ ಮಠ, ಎ. ಕೆ. ರಾಮೇಶ್ವರ ಮುಂತಾದ ಅನೇಕರನ್ನು ಹೆಸರಿಸಬಹುದು.

ಅಂತೆಯೇ ಜಿಲ್ಲೆಯಿಂದ ಹೊರಹೋಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಗಣನೀಯ ಕಾಣಿಕೆ ನೀಡಿದವರಲ್ಲಿ ಆಧ್ಯಾತ್ಮಿಕ ಕ್ಷೇತ್ರದ ವರದಹಳ್ಳಿ ಶ್ರೀಧರಸ್ವಾಮಿಗಳು, ಇತಿಹಾಸ ಸಂಶೋಧಕ ಹಾಗೂ ಬರಹಗಾರರಾದ ಸೇತುಮಾಧವರಾವ್ ಪಗಡಿ, ಸೀತಾರಾಮ ಜಾಗೀರ್‌ದಾರ್, ಎಸ್. ಶಿವಾನಂದ್, ಚಿತ್ರಕಲೆ ಕ್ಷೇತ್ರದ ಎಸ್. ಎಂ. ಪಂಡಿತ್, ನಾಟಕ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಚಂದ್ರಕಾಂತ್ ಕುಸನೂರು, ಸಿನಿಮಾ ಕ್ಷೇತ್ರದಲ್ಲಿ ವೈಶಾಲಿ ಕಾಸರವಳ್ಳಿ, ಭಾವಗೀತೆಯಲ್ಲಿ ಹೆಸರಾಂತ ಶ್ಯಾಮಲಾ ಜಾಗೀರ್‌ದಾರ್ ಮುಂತಾದ ಅನೇಕರು ಜಿಲ್ಲೆಯ ಗಡಿದಾಟಿದ ಪ್ರತಿಭಾವಂತರು. ವಿ. ವಿ. ಯ ಕುಲಪತಿಗಳಾಗಿ ಕೆಲವೇ ವರ್ಷಗಳು ಇಲ್ಲಿದ್ದರೂ ಹಾ. ಮಾ. ನಾಯಕರು, ವಿ. ವಿ. ಯ ಕನ್ನಡ ವಿಭಾಗವನ್ನು ಅಧ್ಯಯನ ಸಂಸ್ಥೆಯ ಮಟ್ಟಕ್ಕೆ ಏರಿಸಿದ್ದಲ್ಲದೆ ಜಿಲ್ಲೆಯ ಹಲವಾರು ಸಂಘ ಸಂಸ್ಥೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿದ್ದು, ಜಿಲ್ಲೆಯಲ್ಲಿ ಒಬ್ಬರಂತೆಯೇ ಆಗಿದ್ದರು.

ಇದಲ್ಲದೆ ಜಿಲ್ಲೆಯಲ್ಲಿಯೇ ಹುಟ್ಟಿ ಬೆಳೆದ, ಆಯಾ ಕ್ಷೇತ್ರದಲ್ಲಿ ಅರ್ಪಿಸಿಕೊಂಡ ನೂರಾರು ಕ್ರಿಯಾಶೀಲರನ್ನು ಕಾಣಬಹುದು. ಸಾಂಸ್ಕೃತಿಕ ವಲಯದಲ್ಲಿ ಈ ಎಲ್ಲರನ್ನು ಒಂದೆಯಾಗಿ ಭಾವಿಸಿ ಮುಂದಿನ ಉಪ ಅಧ್ಯಾಯಗಳಲ್ಲಿ ನೋಡಲಾಗಿದೆ.

## ಸಾಹಿತ್ಯ

ಗುಲಬರ್ಗಾ ಜಿಲ್ಲೆ ಇತಿಹಾಸದ ಆರಂಭ ಕಾಲದಿಂದಲೂ ಹಲವಾರು ರಾಜ ಮನೆತನಗಳಿಗೆ ನೆಲೆವೀಡಾಗಿತ್ತು. ಹಾಗೂ ಈ ರಾಜರುಗಳು ಪಂಡಿತ ವರ್ಗಗಳಿಗೆ ಉದಾರವಾಗಿ ನೆರವು ನೀಡಿದ್ದರು. ಜಿಲ್ಲೆಯ ಇಂದಿನ ಮಳಖೇಡವು ಇತಿಹಾಸ ಪ್ರಸಿದ್ಧ ಮಾನ್ಯಖೇಟವೆಂದು ಗುರುತಿಸಲಾಗಿದ್ದು ಇದು ರಾಷ್ಟ್ರಕೂಟರ ಹಾಗೂ ನಂತರದ ಕಲ್ಯಾಣಿ ಚಾಳುಕ್ಯರ ರಾಜಧಾನಿಯಾಗಿತ್ತೆಂದು ತಿಳಿಯಲಾಗಿದೆ. ಈ ರಾಜಮನೆತನಗಳ ಸಾಮ್ರಾಜ್ಯವು ವಿಸ್ತಾರವಾಗಿದ್ದು ಅವರ ಅವಧಿಯಲ್ಲಿ ಹಲವಾರು ಪಂಡಿತರ ಹೆಸರು ಹಾಗೂ ಅವರ ಕಾವ್ಯಗಳು ದೊರೆಯುತ್ತದೆಯಾದರೂ ಅವರು ಇದ್ದ ಅಥವಾ ಕಾವ್ಯ

ರಚಿಸಿದ ಸ್ಥಳಗಳು ನಿಖರವಾಗಿ ದೊರೆಯುವುದಿಲ್ಲ. ಅವರುಗಳಲ್ಲಿ ಕೆಲವರಾದರು ರಾಜಧಾನಿಯಲ್ಲಿ ಆಶ್ರಯ ಪಡೆದಿದ್ದರೆಂದು ಭಾವಿಸಬಹುದಾಗಿದೆ. ಅಲ್ಲದೆ ಈ ಚಕ್ರವರ್ತಿಗಳ ಮಾಂಡಳಿಕರೂ ಹಲವಾರು ಸೃಜನಶೀಲ ಕವಿ, ಸಾಹಿತಿ, ಪಂಡಿತರಿಗೆ ಆಶ್ರಯ ನೀಡಿದ್ದು, ಪ್ರಾರಂಭ ಕಾಲದ ಸಾಹಿತ್ಯ ಪರಂಪರೆಯ ಔನತ್ಯವನ್ನು ಕಾಣುವಂತಾಯಿತು. ಮುಂದಿನ ಕಾಲದಲ್ಲಿ ಶರಣರ ವಚನ ಚಳವಳಿ ಈ ಭಾಗದಲ್ಲೂ ತೀವ್ರವಾಗಿ ಕಾಣಿಸಿಕೊಂಡಿತು. ಆದ್ದರಿಂದ ಈ ಪ್ರದೇಶವನ್ನು ಕಲ್ಯಾಣನಾಡೆಂದು ಸಹ ಗುರುತಿಸಲಾಗುವುದು. ನಂತರ ಮಹಮ್ಮದ್ದೀಯರ ಆಳ್ವಿಕೆಯಲ್ಲಿ ಉರ್ದುವಿಗೆ ಪ್ರೋತ್ಸಾಹ ದೊರೆತು ಆ ಭಾಷೆಯಲ್ಲೂ ಸಾಕಷ್ಟು ಕೃತಿ ರಚನೆ ನಡೆಯಿತು. ಮತ್ತೆ ಸ್ವಾತಂತ್ರ್ಯಾ ನಂತರ ಕನ್ನಡ ಸಾಹಿತ್ಯ ಬೆಳಗುವಂತಾಗಿ ನವೋದಯ ನವ್ಯ ಹಾಗೂ ಬಂಡಾಯದನಿಯ ಸಾಹಿತ್ಯಗಳು ಎಲ್ಲ ಪ್ರಕಾರಗಳಲ್ಲೂ ರಚನೆಯಾದವು. ಮುಂದೆ ಈ ಅಂಶಗಳನ್ನು ಸಂಕ್ಷಿಪ್ತವಾಗಿ ನೋಡಲಾಗಿದೆ.

**ಶಾಸನ ಕವಿಗಳು**

ಜಿಲ್ಲೆಯ ಅನೇಕ ಶಾಸನಗಳು ಕಾವ್ಯಾತ್ಮಕವಾಗಿದ್ದು 'ಅತಿಶಕ್ವರಿ' ಯಂಥಹ ಅಪರೂಪದ ಛಂದೋ ಪ್ರಕಾರಗಳಲ್ಲದೆ ಖ್ಯಾತ ಕರ್ನಾಟಕ ವೃತ್ತಗಳು, ಕಂದ ಪದ್ಯಗಳು ಸಹ ಕಾಣಿಸಿಗುತ್ತವೆ. ಏವೂರು, ಹೆಮ್ಮಡಿಗೆ ಶಾಸನಗಳು ಪುಟ್ಟ ಚಂಪೂ ಕಾವ್ಯದಂತೆ ಇವೆ. ಹಲವಾರು ಕಡೆಗಳಲ್ಲಿ ಗದ್ಯವೂ ಕಾವ್ಯ ಶೈಲಿಯಲ್ಲಿರುವುದು ಕಾಣಬಹುದು. ಅಡಕಿ, ಏವೂರು, ಆಳಂದ ಹುಣಸಿ ಹಡಗಲಿ, ಸೇಡಂ, ಕಾಳಿಗೆ ಹರಸೂರು, ನಿಂಬರಿಗೆ, ಮತ್ತೂರು ಇತ್ಯಾದಿ ಹತ್ತಾರು ಶಾಸನಗಳಲ್ಲಿ ಛಂದೋ ಬದ್ಧವಾದ ರಚನೆಯನ್ನು ಕಾಣಬಹುದು. ಹಲವಾರು ಶಾಸನ ಕವಿಗಳಿಗೆ ಬಿರದು-ಬಾವಲಿಗಳೂ ಇವೆ. ಇಂಗಳಗಿ (೧೯೦೫)ಯ ನಾಗಾರ್ಜುನ ಪಂಡಿತರಿಗೆ 'ವಾಗ್ವಧೂ ನಂದನ' ಎಂದೂ ಬೋಧನ(೧೧೪೩)ದ ಮಾಧವ ಕವಿಗೆ 'ಅವಧಾನ ನಿಧಾನ' 'ವಾಕ್ರೀಧವ' ಎಂದೂ ಕರೆದಿದೆ. ಇವರಲ್ಲದೆ 'ವಿರೇಶ ಮೂರ್ಧ್ನಿಕವಿ' (ಇಟ್ಟಿಗೆ ೧೧೦೮) 'ಶ್ರೀಮತ್ ಕುಳಕರ್ಣಿ ಕುನಿಗೆ ಭೈರವಂ ನಾಮಣನ ಬರೆಪಂ' (ಮತ್ತೂರು ೧೧೨೪) ಈ 'ಶಾಸನಮಂ ಬಿನಗೈದ ಬಿಂನಾಣ, ಸರಸ್ವತಿ ಗಣಮಿತ್ರಂ.... ಕಾಳೋಜ' (ಗೊಬ್ಬೂರು ೧೧೯೬) 'ಬರೆವರ ರುದ್ರಂ ಚಂಗದೇವಯ್ಯಂ ಬರೆದಂ' (ಕೆಂಬಾವಿ ೧೦೫೪), ಪಂಡಿತ ಮಲ್ಲಯ್ಯನ ಬರೆಪಂ (ಹಾವಿನಾಳ ೧೯೦೭) ಎಂಬ ಹೆಸರುಗಳೂ ದೊರೆಯುತ್ತವೆ. ಏವೂರ ೧೦೭೭ರ ಶಾಸನದಲ್ಲಿ ಬರೆದಾತನ ಹೆಸರಿಲ್ಲವಾದರೂ 'ಕವಿಗಚಮೂಪ' ಎಂಬಾತನ ಬಹುಮುಖ ಪ್ರತಿಭೆಯನ್ನು ಕಾವ್ಯ ಶಕ್ತಿಯನ್ನು ವರ್ಣಿಸುವುದರಿಂದ ಆತನೇ ಶಾಸನ ಬರೆದಾತನಿರಬಹುದೆಂದು ಊಹಿಸಲಾಗಿದೆ. ಅಂತೆಯೇ ಹುಣಸಗಿಯ ೧೧೨೦ರ ಶಾಸನದಲ್ಲಿ 'ಚತುರ ಕವೀಶ್ವರ ಲಲಾಟ ಪಟ್ಟಂ ಭಟ್ಟಂ' ಎಂದು ಹೇಳಿ 'ಆದಿತ್ಯ ಭಟ್ಟ' ನೆಂದು ಅದೇ ಊರ ಇನ್ನೊಂದು ಶಾಸನದಲ್ಲಿ ಕರೆದಿರುವುದರಿಂದ ಮೊದಲ ಶಾಸನ ಈತನೇ ಬರೆದಿರಬಹುದು. ಈ ಎಲ್ಲ ಶಾಸನ ಕವಿಗಳು ಬೇರೆ ಸ್ವತಂತ್ರವಾದ ಕಾವ್ಯ ಇತ್ಯಾದಿಗಳು ಬರೆದ ವಿಷಯ ತಿಳಿದುಬರುವುದಿಲ್ಲ.

**ಅಪಭ್ರಂಶ ಸಾಹಿತ್ಯ**

ರಾಷ್ಟ್ರಕೂಟರ ಕಾಲದಲ್ಲಿ ಸಂಸ್ಕೃತ ಸಾಹಿತ್ಯ ರಚನೆ ವಿಪುಲವಾಗಿ ಆಯಿತಾದರೂ ಅಪಭ್ರಂಶ ಸಾಹಿತ್ಯ ಇನ್ನೂ ಅಸ್ತಿತ್ವದಲ್ಲಿತ್ತು. ದ್ರುವರಾಜನ (೭೮೦) ಆಸ್ಥಾನದಲ್ಲಿದ್ದ ಸ್ವಯಂಭೂ ಎಂಬಾತ ರಾಮಾಯಣ ಕಥಾನಕಗಳ ಪದ್ಮ ಚರಿತ, ಮಹಾಭಾರತ ಕಥೆಯ ಹರಿವಂಶ ಪುರಾಣ ಹಾಗೂ ನಾಗಕುಮಾರ ಚರಿತೆಗಳನ್ನು ಅಪಭ್ರಂಶದಲ್ಲಿ ರಚಿಸಿದ್ದಾನೆ. ತನ್ನ ಹೆಸರಿನಲ್ಲಿ ಸ್ವಯಂಭೂ ಛಂದಸ್ಸನ್ನು ಬರೆದಿದ್ದಾನೆ. ಆತನ ಕಾವ್ಯಗಳು ಅಪೂರ್ಣವಾಗಿದ್ದು, ಆತನ ಮಗ ತ್ರಿಭುವನ ಸ್ವಯಂಭೂ ಪೂರ್ತಿ ಗೊಳಿಸಿದ. ಇನ್ನೊಬ್ಬ ಅಪಭ್ರಂಶದ ಪ್ರಮುಖ ಕವಿ ಎಂದರೆ ಪುಷ್ಪದಂತ. ಈತ ಮೂರನೇ ಕೃಷ್ಣನ ಆಸ್ಥಾನದಲ್ಲಿ ಮಳಖೇಡದಲ್ಲಿಯೇ ಇದ್ದಾತ. ಬೇರಾವುದೋ ರಾಜಸ್ಥಾನದಲ್ಲಿದ್ದು, ಅಲ್ಲಿ ರಚಿಸಿದ ಕಾವ್ಯಕ್ಕೆ ಪುರಸ್ಕಾರ ಸಿಗದೆ ಮನನೊಂದು ಮಳಖೇಡಕ್ಕೆ ಬಂದು ಮೂರನೇ ಕೃಷ್ಣನ ಮಂತ್ರಿ ಹಾಗೂ ಸಾಹಿತ್ಯಜನಾಶ್ರಯನಾಗಿದ್ದ ಭರತನ, ನಂತರ ಆತನ ಮಗ ನನ್ನನ ಆಶ್ರಯದಲ್ಲಿದ್ದವನು. ಇಲ್ಲಿ ತ್ರಿಶಷ್ಟಿ ಪುರುಷ ಗುಣಾಲಂಕಾರ ಅಥವಾ ಮಹಾಪುರಾಣ, ನಾಗಕುಮಾರ ಚರಿತೆ, ಹಾಗೂ ಯಶೋಧರ ಚರಿತೆ ರಚಿಸಿದ. ಮಹಾಪುರಾಣದಲ್ಲಿ ಮೂರು ಸಂಧಿಗಳಿದ್ದು ಪ್ರಥಮ ಚಕ್ರವರ್ತಿ, ಭರತನ ಜೀವನ ಸಾಧನೆಗಳನ್ನು ಚಿತ್ರಿಸಿದ್ದಾನೆ. ಮಳಖೇಡ ನಗರದ, ಯೋಧರ, ಜನಸಾಮಾನ್ಯರ ಕುರಿತು ಅನೇಕ ವಿವರಗಳು ಈತನ ಕಾವ್ಯಗಳಲ್ಲಿ ದೊರೆಯುತ್ತವೆ. ಪರಮಾರ ಸೀಯಕ ಮಳಖೇಡದ ಮೇಲೆ ಧಾಳಿಮಾಡಿ ಇಡೀ

ರಾಜಧಾನಿ ಸೂರೆ ಮಾಡಿದ್ದು. ರಾಜಾಶ್ರಯ ತಪ್ಪಿದ ಪುಷ್ಪದಂತ ಈ ಧಾಳಿಯ ವರ್ಣನೆಯನ್ನು ಪ್ರಾಸಂಗಿಕವಾಗಿ ಕಾವ್ಯವೊಂದರಲ್ಲಿ ಮಾಡಿ ತಾನು ಆಶ್ರಯರಹಿತನಾದೆನೆಂದು ಅಳಲು ತೋಡಿಕೊಂಡಿದ್ದಾನೆ.

## ಸಂಸ್ಕೃತ ಸಾಹಿತ್ಯ

ರಾಷ್ಟ್ರಕೂಟರು ಹಾಗೂ ಕಲ್ಯಾಣಿ ಚಾಳುಕ್ಯರು ಜಿಲ್ಲೆಯ ಮಳಖೇಡದಲ್ಲಿ ಆಡಳಿತ ನಡೆಸಿದ ಅವಧಿಯನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. (ರಾಷ್ಟ್ರಕೂಟ ಒಂದನೇ ಅಮೋಘ ವರ್ಷನಿಂದ - ಸು. ೮೧೪ ರಿಂದ ಹಿಡಿದು ಕಲ್ಯಾಣಿ ಚಾಳುಕ್ಯರ ಎರಡನೇ ಜಯಸಿಂಹ - ೧೦೪೬ರ ವರೆಗೆ) ಅಂತೆಯೇ ಈ ಅವಧಿಯಲ್ಲೂ ಪ್ರಮುಖ ಕವಿಗಳು ಹಾಗೂ ಕೃತಿಗಳ ಹೆಸರು ದೊರೆಯುತ್ತದೆಯಾದರೂ ಇವರುಗಳೆಲ್ಲ ಜಿಲ್ಲೆಯ ಪರಧಿಯಲ್ಲಿ - ರಾಜಧಾನಿಯಾದ ಮಳಖೇಡದಲ್ಲಿ - ಇದ್ದಿರಬಹುದೆಂದು ಭಾವಿಸಲಾಗಿದೆ.

ಸಂಸ್ಕೃತದಲ್ಲಿ ಉಪಲಬ್ದವಿರುವ ಚಂಪು ಕಾವ್ಯಗಳಲ್ಲಿ ಪ್ರಥಮವೆನಿಸಿರುವ 'ನಳಚಂಪು'ವಿನ ಕರ್ತೃ ತ್ರಿವಿಕ್ರಮ ಮೂರನೇ ಇಂದ್ರನ ಆಶ್ರಯದಲ್ಲಿ (೯೧೫) ಇದ್ದಾತ. ಇದಕ್ಕೂ ಮೊದಲೇ ಒಂದನೇ ಅಮೋಘ ವರ್ಷ ನೃಪತುಂಗ 'ಪ್ರಶ್ನೋತ್ತರ ರತ್ನಮಾಲಿಕಾ' ರಚಿಸಿದ್ದಾಗಿ ತಿಳಿದು ಬರುತ್ತದೆ. 'ಗಣಿತಸಾರ ಸಂಗ್ರಹ'ದ ಮಹಾವೀರಾಚಾರ್ಯನು ನೃಪತುಂಗನ ಆಶ್ರಿತ. ಮೂರನೇ ಕೃಷ್ಣನ ಆಶ್ರಿತ ಹಲಾಯುಧ 'ಹಲಾಯುಧ ಕೋಶ', 'ಕವಿರಹಸ್ಯ', 'ಮೃತ ಸಂಜೀವಿನಿ' ರಚಿಸಿದ್ದಾನೆ. ಇವನ ಮತ್ತೊಬ್ಬ ಆಶ್ರಿತ ಸೋಮದೇವ ಸೂರಿಯು, 'ಯಶಸ್ತಿಲಕ ಚಂಪು', 'ನೀತಿ ವಾಕ್ಯಾಮೃತ' ಗಳಲ್ಲದೆ ಇನ್ನೂ ಮೂರು ಗ್ರಂಥ ರಚಿಸಿರುವುದಾಗಿ ತಿಳಿದು ಬರುತ್ತದೆ.

ಜೈನ ಆಗಮ ಕ್ಷೇತ್ರದಲ್ಲಿ ಹೆಸರಾಂತ 'ಷಟ್ಖಂಡಾಗಮ'ದ ಮೇಲಿನ ಭಾಷ್ಯಗಳು ರಾಷ್ಟ್ರಕೂಟರ ಕಾಲದಲ್ಲಿ ರಚಿತವಾದವು. ಇವು ಪ್ರಾಕೃತ ಮಿಶ್ರ ಸಂಸ್ಕೃತ ಅಥವಾ ಸಮ ಸಂಸ್ಕೃತ ಭಾಷೆಯಲ್ಲಿವೆ. ಗುರು ಶಿಷ್ಯರುಗಳಾಗಿದ್ದ ವೀರಸೇನ - ಜೀನಸೇನರು 'ಧವಳಾ ಮತ್ತು ಜಯಧವಳಾ' ಎಂಬ ಒಂದು ಲಕ್ಷ ಶ್ಲೋಕ ಪ್ರಮಾಣದ ಬೃಹದ್ ಭಾಷ್ಯಗಳ ರಚನೆ ಮಾಡಿದರು. ಕಾವ್ಯ-ಪುರಾಣಗಳೆರಡೂ ಆಗಿರುವ 'ಮಹಾ ಪುರಾಣ'ವನ್ನು ಜಿನಸೇನರು ಬರೆದಿದ್ದು, ಅದು ಅಪೂರ್ಣವಾಗಿದ್ದು ಉಳಿದ ಭಾಗವಾದ 'ಉತ್ತರ ಪುರಾಣ'ವನ್ನು ಜಿನಸೇನರ ಶಿಷ್ಯ ಗುಣಭದ್ರ ಬರೆದು ಮುಗಿಸಿದ. ಈ ಕಾವ್ಯವೇ ಪಂಪನ ಕನ್ನಡದ ಆದಿಪುರಾಣಕ್ಕೆ ಮೂಲ. ಜಿನಸೇನರ ಮತ್ತೊಂದು ಮಹತ್ವದ ಕೃತಿಯೆಂದರೆ, 'ಪಾರ್ಶ್ವಾಭ್ಯುದಯ' ಇದು ಏಕಕಾಲಕ್ಕೆ ಪಾರ್ಶ್ವನಾಥನ ಜೀವನ ಚರಿತ್ರೆಯನ್ನು ಕಾಳಿದಾಸನ ಇಡೀ ಮೇಘದೂತ ಕಾವ್ಯದ ಪ್ರತಿ ಪಾದದ ಸಮಸ್ಯಾ ಪೂರ್ತಿಯನ್ನು ಒದಗಿಸುವ ಕೌಶಲ್ಯಪೂರ್ಣ ಕೃತಿಯಾಗಿದೆ ಎಂದು ಕೆ. ಕೃಷ್ಣಮೂರ್ತಿಗಳು ತಿಳಿಸುತ್ತಾರೆ. ಗುಣಭದ್ರನು 'ಆತ್ಮಾನು ಶಾಸನ' ಎಂಬ ಆಧ್ಯಾತ್ಮ ಗ್ರಂಥ ಸಹ ರಚಿಸಿದ್ದಾನೆ.

'ಸಮಯ ಸಾರ', 'ಪ್ರವಚನ ಸಾರ', 'ದ್ವಾದಶಾನು ಪ್ರಕಾಶ' ಗಳ ಕರ್ತೃ ಕುಂದಕುಂದಾಚಾರ್ಯ, ಸಂಸ್ಕೃತದಲ್ಲಿ 'ವರ್ಧಮಾನ ಪುರಾಣ' ಬರೆದ ಅಸಗ, 'ಛಂದೋನುಶಾಸನ' ಬರೆದ ಜಯಕೀರ್ತಿ, 'ಅಷ್ಟ ಸಾಹಸ್ರಿ' ರಚಿಸಿದ ವಿದ್ಯಾನಂದರಲ್ಲದೆ ಮಾಣಿಕ್ಯನಂದಿ, ಪ್ರಭಾಚಂದ್ರ, ಮುಂತಾದ ಕವಿಗಳು ರಾಷ್ಟ್ರಕೂಟರ ಕಾಲದವರು.

ಕಲ್ಯಾಣಿ ಚಾಳುಕ್ಯರ ಜಯಸಿಂಹನ ಆಸ್ಥಾನದಲ್ಲಿ ಸಂಸ್ಕೃತ ಲೇಖಕರಲ್ಲಿ ಪ್ರಮುಖನಾದ ವಾದಿರಾಜ ಕವಿಯಿದ್ದು, ಈತ 'ಯಶೋಧರ ಚರಿತ', 'ಪಾರ್ಶ್ವನಾಥ ಚರಿತ', 'ನ್ಯಾಯವಿನಿಶ್ಚಯ ಟೀಕಾ', 'ಪ್ರಮಾಣ ನಿರ್ಣಯ' ಇತ್ಯಾದಿ ಗ್ರಂಥ ರಚಿಸಿದಾತ.

ಎರಡನೇ ನಾಗವರ್ಮನು ಜಯಸಿಂಹನ ಆಸ್ಥಾನದಲ್ಲಿ ಕಟಕೋಪಾಧ್ಯಾಯನಾಗಿದ್ದು ಸಂಸ್ಕೃತ ಕೋಶ ಗ್ರಂಥ ರಚಿಸಿದಂತೆ ತಿಳಿದು ಬರುತ್ತದೆ. ಕಲ್ಯಾಣಿ ಚಾಳುಕ್ಯರು ಕಲ್ಯಾಣಕ್ಕೆ ರಾಜಧಾನಿ ಬದಲಿಸಿದ ಮೇಲೆ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ವಿಜ್ಞಾನೇಶ್ವರನು ಮೂಲತ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ ಮರ್ತೂರಿನವನು. ಯಜ್ಞವಲ್ಕ ಸ್ಮೃತಿಗೆ ವ್ಯಾಖ್ಯಾನ ಬರೆದ ಈತನ 'ಮಿತಾಕ್ಷರ' ನ್ಯಾಯಶಾಸ್ತ್ರದಲ್ಲಿ ಇಡೀ ರಾಷ್ಟ್ರಕ್ಕೆ ಪ್ರಮಾಣ ಗ್ರಂಥವಾಗಿದೆ.

ದ್ವೈತ ಸಿದ್ಧಾಂತಕ್ಕೆ ಜಿಲ್ಲೆ ಒಂದು ಮುಖ್ಯ ಕೇಂದ್ರವಾಗಿತ್ತು. ಖ್ಯಾತ ರಾಘವೇಂದ್ರಸ್ವಾಮಿಯ ವೃಂದಾವನ ಜಿಲ್ಲೆಗೆ ಸಮೀಪದಲ್ಲಿ ಮಂತ್ರಾಲಯದಲ್ಲಿದೆ. ಸ್ವಾಮಿಗಳ ನೇರ ಶಿಷ್ಯರಲ್ಲಿ ಒಬ್ಬರಾದ ಮಾಧವತೀರ್ಥರ ವೃಂದಾವನ ಅಫಜಲಪುರ

ತಾಲೂಕಿನ ಮಣ್ಣೂರಿನಲ್ಲಿದ್ದರೆ ಇನ್ನೊಬ್ಬ ಶಿಷ್ಯ ಅಕ್ಷೋಭ್ಯತೀರ್ಥರು ಮಳಖೇಡದಲ್ಲಿ ವೃಂದಾವನಸ್ಥರಾದರು. ರಾಘವೇಂದ್ರ ಸ್ವಾಮಿಯವರ ಗ್ರಂಥಗಳಿಗೆಲ್ಲಾ ಟೀಕೆ ಬರೆದ ಜಯತೀರ್ಥಾಚಾರ್ಯರು ಮಳಖೇಡದಲ್ಲಿ ಸಮಾಧಿಸ್ತರಾದರು. ಇವರಲ್ಲದೆ ವೇದೇಶತೀರ್ಥ (ಮಣ್ಣೂರು) : ರಾಮಚಂದ್ರ ತೀರ್ಥ (ಯರಗೋಳ), ರಘುನಾಥತೀರ್ಥ (ಮಳಖೇಡ) ಮತ್ತು ಸತ್ಯ ಪರಾಕ್ರಮ ತೀರ್ಥ (ಚಿತ್ತಾಪುರ) ಇವರುಗಳೂ ಸಂಸ್ಕೃತ ವಿದ್ವಾಂಸರಾಗಿದ್ದು ಗ್ರಂಥ ರಚನೆ ಮಾಡಿದ್ದಾರೆ. ಟೀಕಾಚಾರ್ಯರೆಂದೇ ಪ್ರಸಿದ್ಧರಾದ ಜಯತೀರ್ಥರು (೧೩೮೮) ತತ್ವಪ್ರಕಾಶ, ನ್ಯಾಯಸುಧ ಪ್ರಮೇಯ ದೀಪಿಕಾ, ನ್ಯಾಯ ಕಲ್ಪತರು, ನ್ಯಾಯ ದೀಪಿಕೆ, ನ್ಯಾಯ ವಿವರಣ, ತತ್ವ ವಿವೇಕ, ತತ್ವ ಸಂಖ್ಯಾಯನ, ಉಪಾದಿ ಖಂಡನ, ಮಾಯಾವಾದ ಖಂಡನ, ತತ್ವ ನಿರ್ಣಯ, ಸತ್  ಪ್ರಸನ್ನ ಭಾಷ್ಯ, ಈಶಾವಾಸ್ಯ ಭಾಷ್ಯ, ರಘುಭಾಷ್ಯ ಇತ್ಯಾದಿಗಳಲ್ಲದೆ ಸ್ವಂತ ಕೃತಿಗಳಾಗಿ ಪ್ರಮಾಣ ಪದ್ಧತಿ, ವಾದಾವಳಿ, ಷಟ್ ಪರಧಾರ ಸ್ತೋತ್ರ, ಪದ್ಯ ಮೂಲ ಹಾಗೂ ಆದ್ಯತಾಮೃತ ತರಂಗಿಣಿಗಳನ್ನು ರಚಿಸಿದ್ದಾರೆ. ಮಾಧವ ತೀರ್ಥರು ಋಗ್, ಯಜುರ್ ಹಾಗೂ ಸಾಮವೇದಗಳಿಗೆ ವ್ಯಾಖ್ಯಾನವನ್ನು, ಅಕ್ಷೋಭ್ಯ ತೀರ್ಥರು ಮಧ್ವಮತ ಸಾರ ಸಂಗ್ರಹವನ್ನು, ರಾಮಚಂದ್ರ ತೀರ್ಥರು ಆಚಾರ್ಯರ ಹಲವಾರು ಗ್ರಂಥಗಳಿಗೆ ಟಿಪ್ಪಣಿಯನ್ನು, ರಘುನಾಥ ತೀರ್ಥರು ಭಾಗವತಕ್ಕೆ ವ್ಯಾಖ್ಯಾನವನ್ನು ರಚಿಸಿದ್ದಾರೆ.

ಮತ್ತೆ ಸಂಸ್ಕೃತಕ್ಕೆ ಮಹತ್ವ ಬಂದುದು ಸುರಪುರದ ಅರಸರ ಕಾಲದಲ್ಲಿ. ಮುಮ್ಮಡಿ ರಾಮನಾಯಕ (೧೭೫೨-೭೪)ನ ಆಸ್ಥಾನದಲ್ಲಿ ಶ್ರೀನಿವಾಸಚಾರ್ಯ ಹಾಗೂ ಅಣ್ಣಯ್ಯಾಚಾರ್ಯರೆಂಬ ಸಂಸ್ಕೃತ ಪಂಡಿತರಿದ್ದು, ಶ್ರೀನಿವಾಸಚಾರ್ಯರು ವೇದಾಂತ ಗ್ರಂಥಗಳಾದ ತತ್ವಮಾರ್ತಂಡ, ನಯದ್ಯುಮಣಿ, ಹರಿಗುಣ, ಮಣಿದರ್ಪಣ, ಭೇದ ದರ್ಪಣ, ದೇವತಾ ಪ್ರಸಾದ ದರ್ಪಣ ಇತ್ಯಾದಿಯಾಗಿ ಇಪ್ಪತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ವಿಶಿಷ್ಟಾದ್ವೈತದಲ್ಲಿ ಹಲವಾರು ಭಾಷ್ಯಗಳನ್ನು ರಚಿಸಿರುವ ನಿಗಮಾಂತ ದೇಶಿಕಾಚಾರ್ಯರು, ಶ್ರೀನಿವಾಸಾಚಾರ್ಯರ ಬಳಿ ತಮ್ಮ ಗ್ರಂಥಗಳನ್ನು ಪರಿಷ್ಕರಿಸಿಕೊಂಡರೆಂದು ಪ್ರತೀತಿ ಇದೆ. ಅಣ್ಣಯ್ಯಾಚಾರ್ಯರ ಕೃತಿಗಳ ವಿವರ ತಿಳಿದು ಬರುವುದಿಲ್ಲ. ಆದರೆ ಅವರ ಮಗ ಕಿರೀಟಿ ವೆಂಕಟಾಚಾರ್ಯರು ಇಮ್ಮಡಿ ವೆಂಕಟಪ್ಪ ನಾಯಕನ (೧೭೭೩-೧೮೦೨) ಆಸ್ಥಾನದಲ್ಲಿದ್ದವರು. ಇವರು ಗಜ ಸೂತ್ರಾರ್ಥವಾದಮ್ ಎಂಬ ವ್ಯಾಕರಣ ಗ್ರಂಥ, ಶೃಂಗಾರ ತರಂಗಿಣಿ ಎಂಬ ನಾಟಕ(?), ಅಚಲಾತ್ಮಜ ಪರಿಣಯ ಭಾವಶತಕಂ ಎಂಬ ಅಲಂಕಾರ ಗ್ರಂಥವನ್ನು, ಸಿದ್ಧಾಂತ ಚಿಂತಾಮಣಿ ಎಂಬ ವೇದಾಂತ ಗ್ರಂಥ, ಝುಂಜಾಮಾರುತ್ ಎಂಬ ನ್ಯಾಯಶಾಸ್ತ್ರ ಕುರಿತ ಗ್ರಂಥ ಇತ್ಯಾದಿ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ. ಅವರಿಗೆ ಸರ್ವತಂತ್ರ ಸ್ವತಂತ್ರ, ಕವಿ, ಕಾರ್ತಿಕಾಲಂಕಾರ, ವಾಗೀಶ್ವರ, ಶ್ಲೇಷಾತ್ಮಕ ಚಕ್ರವರ್ತಿ, ಪ್ರತಿ ಪ್ರಬಂಧ ಪರಮೇಶ್ವರ ಇತ್ಯಾದಿ ಬಿರುದುಗಳು ಇದ್ದವು. ಕಾರಣಾಂತರದಿಂದ ಸುರಪುರ ತೊರೆದು ಪುಣೆಯ ನಾನಾ ಫಡನವಿಸನಲ್ಲಿ ನೆಲೆನಿಂತು ಪಂಡಿತರನ್ನು ವಾದದಲ್ಲಿ ಸೋಲಿಸಿ 'ಕಿರೀಟ' ಧಾರಣೆ ಮಾಡಿದ್ದರು. ಕೃಷ್ಣಪ್ಪ ನಾಯಕ (೧೮೨೭-೪೨)ನ ಕಾಲದಲ್ಲಿ ಕೊಂಡಾಪುರದ ವರದಾಚಾರ್ಯರು ಮತ್ತು ಹಯಗ್ರೀವಾಚಾರ್ಯರು ಹಯಗ್ರೀವ ಚಂದ್ರಿಕ ಎಂಬ ವ್ಯಾಕರಣ ಗ್ರಂಥವನ್ನೂ, ಅಷ್ಟಾವಧಾನಿ ವೆಂಕಯ್ಯ ಶಾಸ್ತ್ರಿಗಳು ಯುಧಿಷ್ಠರಾಶ್ವಮೇಧ ಎಂಬ ಚಂಪೂ ಗ್ರಂಥವನ್ನೂ, ನರಸಿಂಹ ಶಾಸ್ತ್ರಿಗಳು ಆರ್ಯರಾಮಾಯಣವನ್ನು, ಪುರುಷಾಕಾರಿ ಕೇಶವಯ್ಯ ದಶರಥ ನಂದನ ಚರಿತ್ರೆಯನ್ನು ತೆಲುಗಿನಲ್ಲೂ ವೆಂಕಟೇಶ ಮಹಾತ್ಮೆ ಕನ್ನಡದಲ್ಲೂ ರಚಿಸಿದ್ದಾರೆ. ಈ ಕಾಲದ ಹೆಬ್ಬಾಳ ರಾಮಶಾಸ್ತ್ರಿ ಅವರು ಜ್ಯೋತಿಷ್ಯ ಶಾಸ್ತ್ರ ನಿಪುಣರಾಗಿದ್ದು, ಅವರ ವಂಶಜರು ಇಂದಿಗೂ 'ಸುರಪುರದ ಪಂಚಾಂಗ'ವನ್ನು ಪ್ರಕಟಿಸುತ್ತಿದ್ದಾರೆ. ಈ ಶತಮಾನದ ಆದಿಯಲ್ಲಿದ್ದ ಸುರಪುರದ ಆನಂದದಾಸರಿಗೆ ಸಂಸ್ಕೃತ ವಾಙ್ಮಯದ ಆಳವಾದ ಪರಿಚಯವಿದ್ದು ಕನ್ನಡದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ.

ಶಹಪುರದ ಸಗರ ಕೃಷ್ಣಾಚಾರ್ ಮತ್ತು ರಾಮಾಚಾರ್ ಸಹೋದರರು ಸಂಸ್ಕೃತ ವಾಙ್ಮಯದ ಅಧ್ಯಯನ ಮಾಡಿದ್ದಾರೆ. ರಾಮಾಚಾರ್ ಅವರು ಚಂದ್ರಲಾಂಬ ದೇವತೆಯನ್ನು ಕುರಿತು ಅಷ್ಟಕ, ಸುಪ್ರಭಾತ ಹಾಗೂ ಸ್ತೋತ್ರಗಳನ್ನು, ರಾಮ, ನರಸಿಂಹ ಕುರಿತ ಅಷ್ಟಕಗಳನ್ನು ಅಲ್ಲದೆ ಸಂಸ್ಕೃತದಲ್ಲಿ ಹಲವಾರು ಲೇಖನಗಳನ್ನು ರಚಿಸಿದ್ದಾರೆ. ಹರಿಶ್ಚಂದ್ರ ರೇಣಾಪುರ್‌ಕರ್ ಅವರು ಬಹು ಭಾಷಾ ಕೋವಿದರಾಗಿದ್ದು, ಸಂಸ್ಕೃತ ಪ್ರಾಧ್ಯಾಪಕರು ಆಗಿದ್ದರು, ಇವರು 'ಕಾವ್ಯೋನ್ಮೇಶ' ಎಂಬ ಸಂಕೀರ್ಣ ಕೃತಿಯಲ್ಲದೆ ಸುಮಾರು ಐವತ್ತು ಐತಿಹಾಸಿಕ ಕಾವ್ಯಗಳನ್ನು ಬರೆದಿದ್ದಾರೆ. ವಾದಿರಾಜಾಚಾರ್ಯ ಅಗ್ನಿಹೋತ್ರಿ ಅವರು ನ್ಯಾಯಶಾಸ್ತ್ರ ಎಂಬ ಮಾಧ್ವಮತ ಗ್ರಂಥ ಹಾಗೂ ಪ್ರಮಾಣ ಪದ್ಧತಿ, ಪ್ರಮೇಯ ಪದ್ಧತಿ ಎಂಬ ವೇದಾಂತ ಗ್ರಂಥಗಳನ್ನು ರಚಿಸಿದ್ದಾರೆ. ಸುರಪುರದ ಪೆರುಮಾಳ್ ಗುಂಡಾಚಾರ್ ಅವರು ಶಿವಸ್ತೋತ್ರಗಳಲ್ಲದೆ ಸಣ್ಣ

ಕಥೆಗಳನ್ನು ಬರೆದಿದ್ದಾರೆ. ಸುರೇಶ್ ಹೆರೂರ್ ಅವರು "ವೆಂಕಟಾಧ್ವರಿಯ ವಿಶ್ವಗುಣಾದರ್ಶ ಚಂಪು - ಒಂದು ಅಧ್ಯಯನ" ಹಾಗೂ ಪಿ. ಬಿ. ಸಂಕಪ್ಪನವರ ಅವರು 'ಕರೆಗಂಡ ಚರಿವು - ಒಂದು ಪ್ರಾಕೃತ ಕಾವ್ಯ' ದ ಬಗ್ಗೆ ಪ್ರೌಢ ಅಧ್ಯಯನ ಮಾಡಿದ್ದಾರೆ.

ಜಿಲ್ಲೆಯಲ್ಲಿ ಹಲವಾರು ಖಾಸಗಿ ಸಂಸ್ಕೃತ ಪಾಠ ಶಾಲೆಗಳಿವೆ. ಮೂರ್ತಿ ಮೋಹನ ಭಟ್, ಅಣ್ಣಂಭಟ್ ಜೋಶಿ ಅವರು 'ಗಂಗೋತ್ರಿ ವೇದ ಪಾಠಶಾಲೆ'ಯನ್ನು ನಡೆಸುತ್ತಿದ್ದು, ಪಾಠ, ಪ್ರವಚನ ಹಾಗೂ ಪೌರೋಹಿತ್ಯ ಕಲಿಸುತ್ತಿದ್ದಾರೆ. ಸುಮಾರು ೨೦೦ ಬಾಲಕರು ಈ ಪ್ರಯೋಜನವನ್ನು ಪಡೆದಿದ್ದಾರೆ. ಶ್ರೀನಿವಾಸಾಚಾರ್ಯ ಸರಡಗಿ ಅವರು 'ಗಾಯಿತ್ರಿ ಸಂಸ್ಕೃತ ಪಾಠಶಾಲೆ' ನಡೆಸುತ್ತಿದ್ದು, ಸರ್ಕಾರದ ನೆರವೂ ಇದೆ. ಮುರಳೀಧರ ರಾವ್ ಹೆರೂರ್ ಅವರು 'ಜ್ಞಾನ ಜ್ಯೋತಿ ಶಿಕ್ಷಣ ಸಂಸ್ಥೆ' ಎಂಬ ಸಂಸ್ಕೃತ ಪಾಠಶಾಲೆ ನಡೆಸುತ್ತಿದ್ದಾರೆ. ಸಗರದ (ಶಹಪುರ) ರಾಮಾಚಾರ್ ಅವರು ಒಂದು ಸಂಸ್ಕೃತ ಶಾಲೆ ನಡೆಸುತ್ತಿದ್ದಾರೆ. ಇವಲ್ಲದೆ ಮಣ್ಣೂರು, ಸುರಪುರಗಳಲ್ಲೂ ಖಾಸಗಿ ಸಂಸ್ಕೃತ ಪಾಠ ಶಾಲೆಗಳು ಇರುವಂತೆ ತಿಳಿದು ಬರುತ್ತದೆ. ೧೯೮೦ರ ವಿಶ್ವ ಹಿಂದು ಪರಿಷತ್ತಿನ ಜಿಲ್ಲಾ ಸಮ್ಮೇಳನ ಗುಲಬರ್ಗಾದಲ್ಲಿ ನಡೆದಿದ್ದು, ಅದರಲ್ಲಿ ಸಂಸ್ಕೃತ ಸಮ್ಮೇಳನವೊಂದು ಯಾದಗಿರಿಯ ಗುರುಸಿದ್ದ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. 'ಸಂಸ್ಕೃತ ಅಧ್ಯಯನ ಮಂಡಲ' ವೊಂದು ೧೯೯೧ರಲ್ಲಿ ಗುಲಬರ್ಗಾದಲ್ಲಿ ಆರಂಭವಾಯಿತು. ಈ ಸಂಸ್ಥೆಯ ವತಿಯಿಂದ ಫೆಬ್ರವರಿ ೧೯೯೩ರಲ್ಲಿ ಗುಲಬರ್ಗಾದಲ್ಲಿ ಸಂಸ್ಕೃತ ಸಮ್ಮೇಳನವೊಂದು ನಡೆದು ಹದಿಮೂರು ಮಂದಿ ವಿದ್ವಾಂಸರನ್ನು ಸನ್ಮಾನಿಸಲಾಯಿತು. 'ಸಂಸ್ಕೃತ ಗೃಹಂ' ಎಂಬ ಹೆಸರಿನಲ್ಲಿ ಮನೆಯಲ್ಲಿ ಆಡು ಭಾಷೆಯೆಂಬಂತೆ ಸಂಸ್ಕೃತ ಮಾತನಾಡುವ ಕಲೆಯನ್ನು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕಲಿಸಿಕೊಡಲಾಗಿದೆ. 'ಸಂಸ್ಕೃತ ವಿಜ್ಞಾನಂ' ಎಂಬ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕ ಪ್ರದರ್ಶನ ಸಹ ಈ ಸಂಸ್ಥೆ ಏರ್ಪಡಿಸಿತ್ತು.

### ಕನ್ನಡ ಸಾಹಿತ್ಯ

**ಪ್ರಾರಂಭಕಾಲ** : ರಾಷ್ಟ್ರಕೂಟರು ಪ್ರಾಕೃತ - ಸಂಸ್ಕೃತ ಸಾಹಿತ್ಯಕ್ಕೆ ನೀಡಿದಷ್ಟೇ ಪ್ರೋತ್ಸಾಹ ಕನ್ನಡ ಸಾಹಿತ್ಯ ರಚನೆಗೂ ನೀಡಿದ್ದು ಕನ್ನಡ ಸಾಹಿತ್ಯ-ವಿಶೇಷವಾಗಿ ಚಂಪು ಸಾಹಿತ್ಯ ರಚನೆಯಾಗುವಂತಾಯಿತು. ಲಭ್ಯವಿರುವ ಪೂರ್ಣಪ್ರಮಾಣದ ಮೊದಲ ಕನ್ನಡದ ಕೃತಿಯಾದ 'ಕವಿರಾಜ ಮಾರ್ಗ' ಹಾಗೂ ಮೊದಲ ಕಾವ್ಯವಾದ ಪಂಪನ ಕೃತಿಗಳಲ್ಲಿ ತಮಗಿಂತ ಹಿಂದೆ ಕಾವ್ಯ ರಚನೆ ಮಾಡಿದ ಹಲವಾರು ಲೇಖಕರ ಹಾಗೂ ಕೃತಿಗಳ ಹೆಸರುಗಳು ದೊರೆತಿದ್ದು ಅವರಲ್ಲಿ ಕೆಲವರಾದರೂ ರಾಷ್ಟ್ರಕೂಟರ ರಾಜಧಾನಿಯ ಪರಿಸರದಲ್ಲಿ ಇದ್ದಿರಬಹುದು. ಕವಿರಾಜಮಾರ್ಗ (೮೫೦ ಕ್ರಿ. ಶ.) ದಂಡಿಯ ಸಂಸ್ಕೃತ ಕಾವ್ಯದರ್ಶ ಆಧಾರದ ಮೇಲೆ ರಚಿತವಾಗಿರುವ ಲಕ್ಷಣ ಗ್ರಂಥವಾದರೂ ಇದರಲ್ಲಿ ಕನ್ನಡ, ನಾಡು, ನುಡಿ, ಸಾಹಿತ್ಯ, ಜನಜೀವನ ಇತ್ಯಾದಿ ಮಹತ್ವ ಸಂಗತಿಗಳು ದೊರೆಯುತ್ತವೆ. ಈ ಕೃತಿಯನ್ನು ರಾಷ್ಟ್ರಕೂಟ ಅರಸನಾದ ನೃಪತುಂಗನೇ ರಚಿಸಿದ್ದೆಂದು ಇದುವರೆಗೆ ಭಾವಿಸಲಾಗಿತ್ತು. ಆದರೆ ಆತನ ಆಸ್ಥಾನದಲ್ಲಿದ್ದ ಶ್ರೀವಿಜಯನೆಂಬಾತ ರಚಿಸಿದ್ದನೆಂದು ತಿಳಿದು ಬರುತ್ತದೆ. ಇದಾದ ನೂರು ವರ್ಷಗಳ ನಂತರ ಮೂರನೇ ಕೃಷ್ಣನ ಆಸ್ಥಾನದಲ್ಲೇ ಇದ್ದಿರಬಹುದಾದ ಪೊನ್ನ ೯೫೦ರ ಸುಮಾರಿಗೆ ಶಾಂತಿ ಪುರಾಣ, ಜಿನಾಕ್ಷರ ಮಾಲೆ, ಭುವನೈಕ ರಾಮಾಭ್ಯುದಯ ಹಾಗೂ ಗತ ಪ್ರತ್ಯಾಗತಗಳನ್ನು ರಚಿಸಿದ್ದು ಕೊನೆಯ ಮೂರು ಕೃತಿಗಳು ಲಭ್ಯವಿಲ್ಲ. ಗತ ಪ್ರತ್ಯಾಗತವು ಸಂಸ್ಕೃತ ಭಾಷೆಯಲ್ಲಿರಬಹುದೆಂದೂ ಹಾಗೂ ಭುವನೈಕರಾಮಾಭ್ಯುದಯವು ಒಂದು ಲೌಕಿಕ ಕಾವ್ಯವಾಗಿರಬಹುದೆಂದೂ ವಿದ್ವಾಂಸರ ಅಭಿಪ್ರಾಯ. ಗದ್ಯ ಪ್ರಧಾನವಾದ ಚಂಪೂ ಶೈಲಿಯಲ್ಲಿ 'ಪಂಚತಂತ್ರ' ರಚಿಸಿದ ದುರ್ಗಸಿಂಹ (೧೦೩೦) ಮೂಲತ ಸೈಯಡಿ (ಧಾರವಾಡ ಜಿಲ್ಲೆಯ ಸವಡಿ) ಯವನಾದರೂ ಚಾಳುಕ್ಯ ಜಯಸಿಂಹನ ಆಸ್ಥಾನದಲ್ಲಿದ್ದಾತ. ಇನ್ನೊಬ್ಬ ಕವಿ ಚಂದ್ರರಾಜ (೧೦೪೦) ಸಹ ಇಲ್ಲಿಯೇ ಆಶ್ರಿತನಾಗಿದ್ದು ಚಂಪು ಶಾಸ್ತ್ರ ಗ್ರಂಥವಾದ 'ಮದನ ತಿಲಕದ' ಕರ್ತೃ.

ಜಿಲ್ಲೆಯವನೆಂದು ಹೇಳಬಹುದಾದ ಮುಂದಿನ ಪ್ರಮುಖ ಕವಿಯೆಂದರೆ ಜೈಮಿನಿ ಭಾರತದ ಲಕ್ಷ್ಮೀಶ. ಈತನ ಕಾಲ, ದೇಶ ಹಾಗೂ ಮತ ಸಂಪ್ರದಾಯಗಳು ಸಾಕಷ್ಟು ಚರ್ಚೆಗೆ ಒಳಪಟ್ಟಿವೆ. ಕವಿಯ ಕಾಲ ಹನ್ನೆರಡರಿಂದ ಹದಿನೇಳನೇ ಶತಮಾನದವರೆಗೆ ತೂಗುಯ್ಯಾಲೆಯಲ್ಲಿದೆ. ತನ್ನ ಇಡೀ ಕಾವ್ಯದಲ್ಲಿ 'ದೇವನೂರು' ಎಂದು ಬಳಸದೇ ದೇವಪುರವೆಂದೇ ಹಲವಾರು ಬಾರಿ ಹೇಳಿರುವುದು. ಛಾಯಾ ಭಗವತಿಯನ್ನು ಪ್ರಸ್ತಾಪಿಸಿರುವುದು. ಈ ಪ್ರದೇಶದಲ್ಲಷ್ಟೆ ಬೆಳೆಯುವ

ಅಸತೀ ಪುಷ್ಪವನ್ನು ಉದಾಹರಿಸುವುದು ಇತ್ಯಾದಿ ಹಲವಾರು ಕಾರಣಗಳಿಂದ ಲಕ್ಷ್ಮೀಶನ ಊರು ಸುರಪುರದ ಬಳಿಯ ದೇವಪುರವೆಂದೇ ವಿದ್ವಾಂಸರ ಅಭಿಪ್ರಾಯ. ಪ್ರಾಚೀನ ಕವಿಗಳಲ್ಲಿ ಮತ್ತೊಬ್ಬ ಮುಖ್ಯವಾದವನೆಂದರೆ ಕವಿ ನಾಗರಾಜ, ಈತ ಅಫಜಲಪುರದ ಮಾಸಿವಾಳದವನು. ಈತ ಸಗರನಾಡಿನ ವರ್ತಕರ ಕೋರಿಕೆಯ ಮೇರೆಗೆ ಕ್ರಿ. ಶ. ೧೩೩೧ರಲ್ಲಿ 'ಪುಣ್ಯಾಸ್ರವ' ಎಂಬ ಚಂಪೂ ಗ್ರಂಥವನ್ನು ರಚಿಸಿದ್ದಾಗಿ ತಿಳಿಸುತ್ತಾನೆ. ಅನೇಕ ಜೈನ ಧಾರ್ಮಿಕ ಕಥೆಗಳಿಂದ ಕೂಡಿದ ಈ ಕೃತಿಯಲ್ಲಿ ಲಲಿತಕಲೆ ಹಾಗೂ ಹಲವಾರು ಸಾಮಾಜಿಕ ಸಂಗತಿಗಳೂ ತಿಳಿದು ಬರುತ್ತವೆ.

**ವಚನಕಾರರು** : ಹನ್ನೊಂದನೆಯ ಶತಮಾನದ ಅಂತ್ಯದಲ್ಲಿಯೇ ಕಂಡುಬರುವ ವಚನಕಾರ ಚಳವಳಿ ಗುಲಬರ್ಗಾ ಜಿಲ್ಲೆಯಿಂದಲೇ ಆರಂಭಗೊಂಡಂತೆ ಕಂಡುಬರುತ್ತದೆ. ಬಸವ ಪೂರ್ವ ಯುಗದಲ್ಲೇ ವಚನಗಳ ಆದ್ಯನೆಂದು ಕರೆಯಲಾಗಿರುವ ಜೇಡರ ದಾಸಿಮಯ್ಯ (೧೦೪೦) ಸುರಪುರ ತಾಲೂಕಿನ ಮುದನೂರಿನಾತ ರಾಮನಾಥ ಎಂಬ ಅಂಕಿತದಿಂದ ಈತ ರಚಿಸಿದ ಸುಮಾರು ನೂರೈವತ್ತು ವಚನಗಳು ದೊರೆಯುತ್ತವೆ. ಆಧ್ಯಾತ್ಮಿಕ ವಿಚಾರವನ್ನು ವಿಡಂಬನಾತ್ಮಕವಾಗಿ ಭೋದಿಸುವ ಈತನ ವಚನಗಳಲ್ಲಿ ಸಾಹಿತ್ಯಕ ಮೌಲ್ಯವೂ ಸೇರಿವೆ. ಬಸವ ಪೂರ್ವ ಯುಗದ ಉಳಿದ ಶರಣರೆಂದರೆ ಚಿಮ್ಮಲಿಗೆಯ ಚಂದಿಮರಸ, ಕೆಂಭಾವಿ ಭೋಗಣ್ಣ ಅವರುಗಳು, ಕೆಂಭಾವಿ ಭೋಗಣ್ಣ 'ನಿಜಮರು ಭೋಗನಾಥ' ಎಂಬ ಅಂಕಿತದಲ್ಲಿ ಬರೆದ ಇಪ್ಪತ್ತೆರಡು ವಚನಗಳು ಲಭ್ಯ ಇರುವವು.

ಬಸವ ಸಮಕಾಲೀನ ಹಾಗೂ ನಂತರ ಕಾಲದ ಅನೇಕ ಶಿವಶರಣರ ಹೆಸರುಗಳು ಸಗರನಾಡೂ ಸೇರಿದಂತೆ ಜಿಲ್ಲೆಯಾದ್ಯಂತ ದೊರೆಯುತ್ತವೆ. ಆದರೆ ಈ ಎಲ್ಲ ಶಿರಶರಣರೂ ವಚನ ಅಥವಾ ಬೇರಾವುದೇ ಬರವಣಿಗೆ ಮಾಡಿದಂತಾಗಲೀ ಅಥವಾ ಅವು ಉಪಲಭ್ಯವಿದೆಯೆಂದಾಗಲೀ ಹೇಳಲು ಸಾಧ್ಯವಿಲ್ಲ. ಸಗರ ನಾಡಿನ ಪ್ರದೇಶದಲ್ಲೇ ಬಸವ ಸಮಕಾಲೀನರಲ್ಲಿ ಸಗರದ ಬ್ರಹ್ಮಯ್ಯ, ನಾಚಯ್ಯ, ನೆಲ್ಲಿಗೆ ಶಾಂತಯ್ಯ, ಓಲೆಯ ಶಾಂತಯ್ಯ, ಉಂಡುಪವಾಸಿ ಬಳಸಿ ಬ್ರಹ್ಮಚಾರಿಗಳು ಮುಂತಾದವರನ್ನು ಉದಾಹರಿಸಬಹುದು.

ಬಸವೋತ್ತರ ಕಾಲದ (ಸು. ೧೧೭೦-೧೯೦೦) ಸುಮಾರು ಏಳನೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಐವತ್ತಕ್ಕೂ ಹೆಚ್ಚು ಶಿವಶರಣರು ಕಂಡುಬರುತ್ತಾರೆ. ಕೋಳಕೂರಿನ ಸೊಪ್ಪೆಯ ಶಿದ್ದ ಬಸವ, ಎಳಿಗೆಯ ನೂಲಕಾಯದ ಬಿಟ್ಟಾಭಕ್ತ, ಕಾಲನಿಯ ಜಾನಪ್ಪ, ದಿಗ್ಗಾವೆಯ ಸಂಗನ ಬಸವಣ್ಣ, ಜಾವಳ ಕೋಟೆಯ ಶರಣಾರ್ತಿ ಕಲ್ಲಿ ಶೆಟ್ಟಿ, ಮಾವನೂರಿನ ಆರಂಭ ಕಾಯಕದ ಮಾಯಿದೇವ ಅವರುಗಳನ್ನು ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖಿಸಲಾಗಿದೆ. ಈ ಹಿಂದೆ ಹೆಸರಿಸಿದ ಆದ್ಯರಾಗಿ ಎಲ್ಲಾ ಶಿವಶರಣರು ಸಗರ ನಾಡಿನವರು.

ಶಾಸನೋಕ್ತ ಕೋಲಶಾಂತಯ್ಯ ಅಥವಾ ನಲವಿಗೆಯ ಸಾತಯ್ಯ ಚಿತ್ರಿತ ಜಂಗಮನಿಗೆ ಜೀವ ಬರಿಸಿದ ಸ್ವಾರಸ್ಯಕರವಾದ ಪವಾಡದ ಕಥೆಯಿದ್ದು ಈತ ಭೀಮೇಶ್ವರ ಲಿಂಗ ನಿರಂಗ ಸಂಗ ಎಂಬ ಅಂಕಿತದಲ್ಲಿ ರಚಿಸಿದ ನೂರು ವಚನಗಳು ಪ್ರಕಟವಾಗಿವೆ. ಅಂತೆಯೇ ಜೇವರಗಿಯ ಷಣ್ಮುಖ ಶಿವಯೋಗಿಗಳ ಎಳುನೂರಕ್ಕೂ ಹೆಚ್ಚು ವಚನಗಳು ಬೆಳಕು ಕಂಡಿವೆ. ಕಾಲಜ್ಞಾನ ಸಾಹಿತ್ಯವೂ ಒಂದು ಪ್ರಮುಖ ಪ್ರಕಾರವಾಗಿದ್ದು ಕೊಡೇಕಲ್ಲ ಬಸವಣ್ಣ ಹಾಗೂ ತಿಂಥಣಿಯ ಮೌನೇಶ್ವರರು ರಚಿಸಿದ ನೂರಾರು ತ್ರಿಪದಿಗಳು ದೊರೆಯುತ್ತವೆ. ಇವರಿಬ್ಬರ ವಚನಗಳು ಸಾಕಷ್ಟು ಪ್ರಸಿದ್ಧವಾಗಿದ್ದು ಜನಪದಗೀತೆಯಂತೆ ಜನಪದರ ಹಾಡು ಗಬ್ಬವಾಗಿದ್ದು ಇವರಿಬ್ಬರ ತತ್ವಗಳು ಹಾಗೂ ಐಕ್ಯಗೊಂಡಿರುವ ಸ್ಥಳದಲ್ಲಿರುವ ಸಮಾಧಿಮಂದಿರಗಳು ಹಿಂದು ಮುಸ್ಲಿಂ ಎರಡೂ ಜನಾಂಗಗಳಿಗೆ ಪವಿತ್ರ ಸ್ಥಳಗಳಂತಿವೆ. ಕಡಕೋಳ ಮಡಿವಾಳಪ್ಪ, ಆಳಂದದಲ್ಲಿ ಜನಿಸಿದ ಏಕಾಂತದ ರಾಮಯ್ಯ, ಯಾದಗಿರಿ ಬಳಿಯ ಎಲೇರಿಯ ಎಲೇಶ್ವರ ಕೇತಯ್ಯ, ಮಾರುಡಿಗೆಯ ನಾಚಯ್ಯ, ಗೊಬ್ಬೂರಿನ ಬಿಬ್ಬಿ ಬಾಚಯ್ಯ, ಚಿತ್ತಾಪುರದ ಡಕ್ಕೆಯ ಮಾರಯ್ಯ, ಸೊನ್ನದ ಸಿದ್ಧಲಿಂಗಯತಿ, ಯಾದಗಿರಿಯ ಬಲಚಕ್ರದ ಕೊಡಲೂರು ಬಸಲಿಂಗಪ್ಪ, ರಾಮಪುರದ ಬಿಕ್ಕಪ್ಪ, ಖೈನೂರ ಕೃಷ್ಣಪ್ಪ, ಕಡ್ಡೆವಾಡ ಸಿದ್ಧಪ್ಪ, ಎಮ್ಮಡಗಿ ಪ್ರಭುದೇವ, ನಿಂಬರಗಿಯ ನಾರಾಯಣ, ಐನೂಲಿ ಕರಿಬಸವಾರ್ಯ, ಕೋಲಕುಂದಿ ಬಾಪಣ್ಣ, ತಳವಾರ ಗೇರಿ ಬಸವನ ಗೌಡ, ಧಂಗಾಪುರ ಬಸವಣ್ಣೆಪ್ಪ, ಮಹಾಗಾಂವದ ಗುರುಲಿಂಗಸಿದ್ಧ, ದೇಗಾವಿ ಗುಂಡಪ್ಪ, ಗುಲಬರ್ಗಾದ ಅಂಬಾದಾಸ, ರಸ್ತಾಪುರ ಭೀಮಕವಿ, ಅಂಬಲಗಿ ಜಗದೇವಪ್ಪ, ಹೀರಾಪುರ ಚೆನ್ನಬಸವೇಶ್ವರ ಸ್ವಾಮಿ, ವಡಿಗೇರ ಭೀಮಶ್ಯಾ, ಕೌಲಗಿ ಆನಂದರಾಯರು ಮತ್ತು ಗುರುವರೇಣ್ಯ ಶರಣ, ದೇವಿಕೇರಿ ರೇವಯ್ಯ, ಅಮ್ಮಾಪುರದ ಹನುಮಂತ, ಕಾರ್‌ಭಾಸಗಿಯ ರೇವಣ್ಣ ಸಿದ್ದಯ್ಯ ಸ್ವಾಮಿ

ಮತ್ತು ಸಿದ್ಧರಾಮ ಶಿವಯೋಗಿ, ನರೋಣದ ಕಾಶಿನಾಥ, ಬೇನೂರ ಭಗವಾನ್‌ಸಿಂಗ್, ರಾಜೋಳದ ಮುರಗೇಂದ್ರಸ್ವಾಮೀ, ನರೋಣದ ಬಂಡಪ್ಪ ಹಾಗೂ ಚಂದ್ರಮಪ್ಪ, ಸಿರಗಾಪುರದ ಬಂಡೆಪ್ಪ, ಬೀಮನಹಳ್ಳಿ ಕೊಟ್ರಪ್ಪಶಾಸ್ತ್ರಿ, ಕೌಳೂರು ಸಿದ್ಧರಾಮ ಶಿವಯೋಗಿ, ಬಿಜಾಸ್ಪುರದ ಮಲ್ಲಿಕಾರ್ಜುನ ಶಾಸ್ತ್ರಿ, ಚಂದ್ರಶಾ, ಜಂಬಗಿ ಶರಣ, ಬೆಡಜುರಗಿ ಬಕ್ಕಾರಿ, ಸಲ್ಗರದ ಸಿದ್ರಾಮಪ್ಪ, ಜಾಲಿಬೆಂಚಿ ರಾಮಯ್ಯ, ಕೊನಾಪುರ ರಾಮಪ್ಪ, ಕಮಲಾಪುರ ಮಲ್ಲಿಕಾರ್ಜುನ, ಸಲ್ಗರದ ಸಂಗಯ್ಯ ಮತ್ತು ಲಕ್ಷ್ಮಣ, ಧಂಗಾಪುರ ಶಿವಶರಣಪ್ಪ, ಡಿಕ್ಸಂಗಿ ಚೆನ್ನಯ್ಯ, ಬಳೂರಗಿ ದುಂಡಲಿಂಗಪ್ಪ, ಕರಲಗಿ ಶರಣಪ್ಪ, ನಿಂಬೋಳಿ ತಿಪ್ಪಣ್ಣ ಮಾಸ್ತರ ಇವರಲ್ಲದೆ ಅಮ್ಮಾಪುರದ ಹನುಮ ಆಲ್ದಾಳಯಂಕಪ್ಪ ಮುಂತಾದ ಅನುಭಾವಿ ಕವಿಗಳನ್ನು ಗುರುತಿಸಬಹುದು. ಶಿವಶರಣೆಯರಲ್ಲಿ ದಾಸಿಮಯ್ಯನ ಮಡದಿ ದುಗ್ಗಳೆ, ಹೆರೂರ ತಿಲಕವ್ವೆ, ಎಡೆಮಠದ ನಾಗದೇವನ ಸತಿ ಮಸಣಮ್ಮ, ಬಿದನೂರ ಗಂಗಮ್ಮ ಯನಗಂಟಿ ವೀರಮ್ಮ ಮೊದಲಾದವರನ್ನು ಉದಾಹರಿಸಬಹುದು.

ಜಿಲ್ಲೆಯಲ್ಲಿ ಕನ್ನಡ ಹಾಗೂ ಉರ್ದು ಎರಡೂ ಭಾಷೆಗಳಲ್ಲಿ ಜನಪದ ಗೀತೆಯ ಶೈಲಿಯಲ್ಲಿ ತತ್ವ ಪದ ಇತ್ಯಾದಿ ರಚಿಸಿದ ಮುಸ್ಲಿಂ ಕವಿಗಳಿದ್ದು ಅವರುಗಳನ್ನು ಇಲ್ಲಿಯೇ ಹೆಸರಿಸಬಹುದು. (ಉರ್ದು ಸಾಹಿತ್ಯವನ್ನು ಬೇರೆಯಾಗಿಯೇ ಪರಿಶೀಲಿಸಿದೆ) ಪ್ರಥಮ ಮುಸ್ಲಿಂ ತತ್ವಪದಕಾರರಾದ ಚಿನ್ನೂರು ಜಲಾಲ ಸಾಹೇಬರು (೧೭೮೦-೧೮೫೦) ಕಡಕೋಳ ಮಡಿವಾಳಪ್ಪನವರಿಂದ ಪ್ರಭಾವಿತರಾಗಿ ಹಲವಾರು ತತ್ವಪದಗಳನ್ನು ರಚಿಸಿದ್ದಾರಾದರೂ ಕೆಲವಷ್ಟೆ ಲಭ್ಯವಿರುವುದು. ಶಹಾಪುರದ ಗೂಗಲ್ಲು ಪರದಯ್ಯ (೧೭೮೦) ಹಾಗೂ ರಾಮಾಪುರದ ಬೊಕ್ಕಪ್ಪ ಹಸನ್ ಸಾಹೇಬರು ಅಲ್ಲದೆ ಸೈಯದ್ ಶಹಾ ಅಮೀರುಲ್ ಹುಸೇನಿ (೧೮೫೦) ಅವರ ಮೊಮ್ಮಗ ಜೇನೂರಿನ ಖಾಕಿ ಪೀರರು ಕಾಳಗಿ ಮಶಾಕ ಸಾಹೇಬರು (೧೮೮೭-೧೯೪೭) ದೇಗಾಂವಿಯ ಹಜರತ್ ಸಾಹೇಬರು (೧೮೯೭-೧೯೮೦) ಕೋಕುಂದಿಯ ಬಾವಣ್ಣ ಮುರಗೇಂದ್ರ ಸ್ವಾಮಿಗಳು (೧೮೦೫-೧೯೭೯) ರಾಬೂಟ ವೀರಸ್ವಾಮಿಗಳು ನರೋಣದ ಹೈದರಲಿ (೧೮೭೭-೧೯೩೭) ಹಾಗೂ ಸಾಯಿಬಣ್ಣ (೧೯೦೫-೭೦), ಸಾವಳಗಿ ಮಹಮ್ಮದ್ (೧೯೦೬) ಕೋನಾಪುರದ ರಾಮಪ್ಪ (೧೯೧೦) ಮಹಾಗಾಂವದ ಮೀರಾ ಸಾಹೇಬ (೧೯೧೭-೮೩) ನಿಂಬೊಳಿ ತಿಪ್ಪಣ್ಣ ಮಾಸ್ತರ್ (೧೯೨೨) ಕದಂಬ ಅನಂತಯ್ಯ (೧೯೪೬) ಮುಂತಾದವರನ್ನು ಹೆಸರಿಸಬಹುದು. ಸಾವಳಗಿಯ ಮಹಮದ್ 'ಸಿದ್ಧ ಶಿವಯೋಗಿ ಶಿವಲಿಂಗೇಶ್ವರ' ಎಂದೂ ಮೀರಾ ಸಾಹೇಬರು 'ಪಂಚಾಕ್ಷರಿ' ಎಂದೂ ಅಂಕಿತ ಇರಿಸಿ ನೂರಾರು ತತ್ವ ಪದಗಳನ್ನು ರಚಿಸಿದ್ದಾರೆ. ಅನೇಕರ ವಚನಗಳಲ್ಲಿ ಕನ್ನಡ - ಉರ್ದು ಭಾಷೆಗಳು ಮಧುರವಾಗಿ ಮಿಶ್ರವಾಗಿರುವ ಹೊಸ ಶೈಲಿಯೊಂದು ಕಾಣಬಹುದು. ಇವರ ರಚನೆಗಳು, ತತ್ವ ಪದಗಳು ಅಧ್ಯಾತ್ಮವಾದರೂ ಗೀಗೀ, ಲಾವಣಿ, ಇತ್ಯಾದಿ ಜನಪದ ರೂಪದಲ್ಲಿ ಇವೆ. ಹಲವಾರು ಕವಿಗಳು ಶಿಷ್ಟರೂಪದ ರಚನೆಯನ್ನೂ ಮಾಡಿದ್ದಾರೆ. ಈ ಎಲ್ಲರ ರಚನೆಗಳ ಪ್ರಕಟಣೆ ಹಾಗೂ ಅಧ್ಯಯನ ಈಚೆಗೆ ನಡೆಯುತ್ತಿದೆಯಾದರೂ ಅಪ್ರಕಟಿತ ಸಾಹಿತ್ಯ ಅಧಿಕವಾಗಿದೆ. ಮುಖ್ಯವಾಗಿ ಈ ಪ್ರದೇಶದಲ್ಲಿ ರಾಜಕೀಯ ಕಾರಣದಿಂದಾಗಿ ಉರ್ದು ಭಾಷೆಯೇ ಬಳಕೆಯಲ್ಲಿದ್ದರೂ ಮಧ್ಯಯುಗ ಹಾಗೂ ಅನಂತರವೂ ಕನ್ನಡ ಭಾಷೆ ಮತ್ತು ಸಾಹಿತ್ಯಗಳು ಅಳಿಯದಂತೆ ಈ ಅನುಭಾವಿ ಕವಿಗಳು ಸಂರಕ್ಷಿಸಿದರು. ಇವರ ಹೆಸರಿನೊಂದಿಗೆ ಇರುವ ಊರಿನಿಂದಾಗಿ ಇವರನ್ನು ಗುಲಬರ್ಗಾ ಜಿಲ್ಲೆಯರೆಂದು ಗುರುತಿಸಲಾಗಿದೆಯಾದರೂ ಇವರ ಕಾರ್ಯಕ್ಷೇತ್ರ ಇನ್ನೂ ವಿಶಾಲವಾದುದು.

ಜಿಲ್ಲೆಯಲ್ಲಿ ಕಳೆದ ಶತಮಾನದ ಅಂತ್ಯದಲ್ಲಿಯೂ ಶಿಷ್ಟ ಕಾವ್ಯ ರಚನೆಯಾಗುತ್ತಿತ್ತು. ಜೇವರ್ಗಿಯ ಮಾವನೂರಿನ ಚೆನ್ನಕವಿ (೧೮೪೦) ಸಾವಿರಕ್ಕೂ ಹೆಚ್ಚು ಭಾಮಿನಿ ಷಟ್ಪದಿಗಳಲ್ಲಿ ಶರಣ ಬಸವೇಶ್ವರ ಪುರಾಣ ರಚಿಸಿದ್ದರೆ, ಗುರುಲಿಂಗ ಸಿದ್ಧಕವಿ ಇದೇ ಕಾವ್ಯವನ್ನು ೧೩೦೦ ವಾರ್ಧಕ ಷಟ್ಪದಿಯಲ್ಲಿ ರಚಿಸಿದರು.

**ಹೊಸಗನ್ನಡ ಸಾಹಿತ್ಯ** : ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯನ್ನು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಆರಂಭಗೊಂಡ ೧೯೩೨ನೇ ವರ್ಷದಿಂದ ಗುರುತಿಸಲಾಗಿದೆ. ಅಲ್ಲಿಂದ ಮುಂದೆ ರಾಜ್ಯ ಪುನರ್ ಘಟನೆಯವರೆಗೆ (೧೯೫೬) ಆರಂಭ ಕಾಲವೆಂದೂ ೧೯೭೩ರಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡುವವರೆಗಿನ ಅವಧಿಯನ್ನು ಪ್ರಯೋಗಾವಸ್ಥೆಯ ಕಾಲವೆಂದೂ ಆ ನಂತರದ ಕಾಲವನ್ನು ವಿಸ್ತಾರ ಕಾಲವೆಂದೂ ಗುರುತಿಸಲಾಗಿದೆ. ಡಿ. ಕೆ. ಭೀಮಸೇನ ರಾಯರು ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೂ, ವಿ.ಕೆ. ಗೋಕಾಕರು ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಇಂಗ್ಲೀಷ್ ಸಂಸ್ಥೆಯ ಮುಖ್ಯಸ್ಥರಾಗಿಯೂ ಬಂದದ್ದು ಒಟ್ಟು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕನ್ನಡ ಸಾಹಿತ್ಯ ವಾತಾವರಣ ಮೂಡುವಂತಾಯಿತು.

ಮೊದಲ ಕಾಲ ಘಟ್ಟದಲ್ಲಿ ಜಿಲ್ಲೆಯ ಪ್ರದೇಶದಲ್ಲಿ ಕನ್ನಡವು ಉರ್ದು ಹಾಗೂ ಮರಾಠಿ ಎರಡೂ ಭಾಷೆಯೊಂದಿಗೆ ಸೆಣಸಬೇಕಾಯಿತು. ಸಾಹಿತ್ಯ ರಚನೆಗಿಂತ ಕನ್ನಡ ಪರ ಪ್ರಚಾರ, ಸಂಘಟನೆ, ನಾಟಕಾಭಿನಯ ಇತ್ಯಾದಿಗಳು ಅವಶ್ಯವಿದ್ದು ಆ ಕಾರ್ಯ ತವಗ ಭೀಮಸೇನರಾವ್, ಹೇರೂರು ದತ್ತಾತ್ರೆಯರಾವ್ ಮೊದಲಾದವರಿಂದ ನೆರವೇರಿತು. (ಸಂಘ, ಸಂಸ್ಥೆಗಳ ಬಗ್ಗೆ ಮುಂದೆ ಹೇಳಿದೆ) ಇವರೊಂದಿಗೆ ಶ್ರೀಪತಿ ಸರನಾಡ, ಜಯರಾವ್ ಜರ್ಕುಂಟಿ, ದತ್ತಾತ್ರೇಯರಾವ್ ಅವರಾದಿ, ದತ್ತರಾಜು, ವಸಂತ ಕುಷ್ಟಗಿ, ರೇವಣ್ಣ ಸಿದ್ಧಯ್ಯ ರುದ್ರಸ್ವಾಮಿ ಮಠ, ಶಶಿಕಲಾ ಮೌಲ್ದಿ, ಮಂದಾಕಿನಿ, ಸಿದ್ದಯ್ಯ ಪುರಾಣಿಕ್ (ಕಾವ್ಯಾನಂದ) ಪ್ರಭುಲಿಂಗಯ್ಯ, ಬಸವ ಲಿಂಗಯ್ಯ, ಭೀಮಪ್ಪ ಸುರಪುರ ಮುಂತಾದವರು ತವಗ ಅವರ ನೇತೃತ್ವದಲ್ಲಿ ಕತೆ, ಕವಿತೆ, ವಿಮರ್ಶೆ, ಬರೆಯತೊಡಗಿದರು. ಸುರಪುರದಲ್ಲಿ ಗುರುಚಾರ್ಯ ಬಂಡಿ, ಬತೋರೇಶ ಕಿಂಕರ ಅವರುಗಳು ಕನ್ನಡ ನಾಟಕ ರಚಿಸಿ, ಆಡಿಸಿದರು. ರಂಗಂಪೇಟೆಯ ಬುದ್ಧಿವಂತ ಶೆಟ್ಟರು 'ಬೃಂದಾವನ' ಎಂಬ ಕವಿತಾ ಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿದರು. ಶಹಪುರದ ಸಗರ ಕೃಷ್ಣಾಚಾರ್ ಅವರು ಗದ್ಯ-ಪದ್ಯಗಳಲ್ಲಿ ಸೃಜನಾತ್ಮಕವಾಗಿ ರಚಿಸಿತೊಡಗಿದರು. ಕಪಟರಾಳ ಕೃಷ್ಣರಾವ್ ಅವರ ಕನ್ನಡ ಸೇವೆ ವಿಶಿಷ್ಟವಾದುದು. ಜಿಲ್ಲೆಯ ಇತಿಹಾಸ, ಸಂಸ್ಕೃತಿ, ಸಾಹಿತ್ಯ ಕುರಿತು ಹಲವಾರು ಸಂಶೋಧನಾ ಲೇಖನಗಳನ್ನು ಬರೆದರು. ಅವುಗಳಲ್ಲಿ ಅನೇಕವು ಇಂದಿಗೂ ಪ್ರಕಟವಾದಂತೆ ಕಂಡುಬರುವುದಿಲ್ಲ. ಅವರ ಲೇಖನ ಸಂಗ್ರಹವಾದ 'ಕರ್ನಾಟಕ ಸಂಸ್ಕೃತಿಯ ಸಂಶೋಧನೆ' 'ಲಾಕುಳ ಶೈವರ ಇತಿಹಾಸ' ಹಾಗೂ 'ಸುರಪುರ ಸಂಸ್ಥಾನ ಇತಿಹಾಸ' (೧೯೭೭) ಇತ್ಯಾದಿಗಳು ಪ್ರಕಟವಾಗಿವೆ. ಅವರ ಲೇಖನಗಳಿಂದ ಜಿಲ್ಲೆಯ ಒಳ-ಹೊರಗೆ ಜಿಲ್ಲೆಯ ಬಗ್ಗೆ ಅರಿವು ಮೂಡಿಸುವಂತಾಯಿತು.

ತವಗ ಭೀಮಸೇನರಾಯರು ೧೯೩೨ರಲ್ಲಿಯೇ ಪ್ರಾಥಮಿಕ ತರಗತಿಗಳಿಗೆ ಕನ್ನಡ ವಾಚನಗಳನ್ನು, ಇತಿಹಾಸವನ್ನು ಕುರಿತು ಪುಸ್ತಕಗಳನ್ನು ಹಲವಾರು ಕವಿತೆಗಳನ್ನು, ಜಿಲ್ಲೆಯ ಸಂಸ್ಕೃತಿಯನ್ನು ಕುರಿತು ನಲವತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ವಸಂತ ಕುಷ್ಟಗಿ ಅವರು 'ಭಾವದೀಪ್ತಿ' 'ಹೊಸ ಹೆಜ್ಜೆ' ಕವನ ಸಂಕಲನಗಳನ್ನು ಜಗನ್ನಾಥ ದಾಸರ ಹಾಗೂ ಮುಂಡರಗಿ ಭೀಮರಾಯರ ಚರಿತ್ರೆಯನ್ನು ಮೋಹನದಾಸರು ಮತ್ತು ಅವರ ಕೃತಿಗಳು, ಅಜ್ಜಿ ಹೇಳಿದ್ದು ಮೊಮ್ಮಗಳು ಬರೆದ್ದು, ರಾಘವೇಂದ್ರ ಮಹಿಮೆ, ಕನಕದಾಸರ ಗೀತೆ, ಕಾವ್ಯಶ್ರೀ, ಐದ್ಹತ್ತು ಇತ್ಯಾದಿ ಸಂಪಾದಿತ ಕೃತಿಗಳನ್ನು ಹೊರ ತಂದಿದ್ದಾರೆ. 'ಭಕ್ತಿಗೋಪುರ', 'ದಾಸ ಸಾಹಿತ್ಯದ ಹಾದಿಯಲ್ಲಿ' ಇವುಗಳು ವಿಮರ್ಶಾ ಗ್ರಂಥಗಳು. ಇವರ 'ಗ್ರಾಮೋದ್ಧಾರ' ನಾಟಕಕ್ಕೆ ಹೈದರಾಬಾದ್ ರಾಜ್ಯ ಸರ್ಕಾರದ ಬಹುಮಾನ ದೊರೆತಿದೆ. ಸಗರ ಕೃಷ್ಣಾಚಾರ್ ಅವರು 'ಅಮೃತ ಬಿಂದು' 'ತೋರಣ' ಎಂಬ ಕವನ ಸಂಕಲನ 'ಸಗರನಾಡು' ಎಂಬ ಸಂದರ್ಶನ ಗ್ರಂಥ, 'ಆದರ್ಶ' ಎಂಬ ಕಥಾ ಸಂಗ್ರಹ, 'ಜೀವನ ಸಂಸಾರ' ಎಂಬ ನಾಟಕ 'ನನ್ನ ನಾ ಕಂಡೆ' ಎಂಬ ಆತ್ಮಚರಿತ್ರೆ ಪ್ರಕಟಿಸಿದ್ದು ಇನ್ನೂ ಹನ್ನೆರಡಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದು ಅವು ಪ್ರಕಟವಾಗಬೇಕಾಗಿದೆ. ಇದೇ ವೇಳೆಗೆ ನಿಜಗುಣರ ಬಗ್ಗೆ ಬರೆದ ಷಡಕ್ಷರಯ್ಯ ಪಲ್ಲಾಪುರ ಮಠ ಕನ್ನಡ ಪರ ಜನರನ್ನು ಸಂಘಟಿಸಿದ ದತ್ತಾತ್ರೆಯರಾವ್ ಹೇರೂರ್, ಚರಬಸವ ತಾತಾನವರ ಚರಿತ್ರೆ ಇತ್ಯಾದಿ ಕೃತಿಗಳನ್ನು ಬರೆದ ಯಾದಗಿರಿಯ ಗುರುಸಿದ್ಧ ಶಾಸ್ತ್ರಿಗಳು, ಶಿವಗುಂಡೇಶ್ವರ ಪುರಾಣ ಇತ್ಯಾದಿ ನಾಲ್ಕೈದು ಪುರಾಣ, ಹದಿನೈದು ನಾಟಕ ರಚಿಸಿದ ಚೌದಾಪುರ ಹಿರೇಮಠದ ಶಾಂತವೀರ ಮಹಾಸ್ವಾಮಿಗಳು, ಹರಿಕಥಾಮೃತ ಸಾರ ಪ್ರವೇಶಿಕೆ, ಶ್ರೀ ಚಂದ್ರಲಾ ದರ್ಶನಗಳ ಕರ್ತೃ ಆರ್. ಎಚ್. ಕುಲಕರ್ಣಿ ಮೊದಲಾದವರು ಕ್ರಿಯಾಶೀಲರಾಗಿದ್ದರು. ಶರಣಯ್ಯ ಅವರು ೧೯೩೭ರಲ್ಲಿ ಬರೆದ 'ಬಸವ ಭೂಮಿ' ಕವಿತಾ ಸಂಗ್ರಹ ಈವರೆಗೆ ೪೧ ಸಲ ಪುನರ್ ಮುದ್ರಿತವಾಗಿ ೫೦,೦೦೦ ಗಳಷ್ಟು ಪ್ರತಿಗಳು ಬಿಕರಿಯಾಗಿವೆ.

ವಿಶಾಲ ಕರ್ನಾಟಕವಾದಂತೆ ಜಿಲ್ಲೆಯಾದ್ಯಂತ ಮೂಡಿದ ಏಕತಾ ಮನೋಭಾವ ಹಾಗೂ ಕನ್ನಡ ನಾಡು-ನುಡಿಗಳ ಅಭಿಮಾನ, ಸರ್ಕಾರ ಹಾಗೂ ಸಂಘ ಸಂಸ್ಥೆಗಳ ಪ್ರೋತ್ಸಾಹ ಇತ್ಯಾದಿಗಳಿಂದ ಬರಹಗಾರರ ಸಂಖ್ಯೆ ಹೆಚ್ಚಾಯಿತು. ಈ ಹಂತದ ಬರಹಗಾರರಲ್ಲಿ ಗದ್ಯ, ಪದ್ಯ, ಸಂಶೋಧನೆ, ನಾಟಕ, ಮಕ್ಕಳ ಸಾಹಿತ್ಯ, ಇತ್ಯಾದಿ ಹಲವಾರು ಪ್ರಕಾರಗಳಲ್ಲಿ ಅಭಿವ್ಯಕ್ತಿಸಿದ ಎ.ಕೆ. ರಾಮೇಶ್ವರ, ಎಸ್.ಎಸ್. ಅಲಗೂರು, ಕಿರಣಗಿ ಮೋಹನ್ ಚಂದ್, ಕುಲಕರ್ಣಿ ಗೋವಿಂದರಾವ್, ಏವೂರು ಲಕ್ಷ್ಮೀಕಾಂತ ಕುಲಕರ್ಣಿ, ಕಂಟೆಪ್ಪ ಮಾಸ್ತರ ಕೂಡ್ಲಿ, ಕೃಷ್ಣಮಾಚಾರ್ಯ, ಜಿ. ಎಂ. ಗೌರ, ನರಸಿಂಹ ಗುಪ್ತ, ಅನ್ನದಾನಿ ಗೌಡ ಬಿ. ಪಾಟೀಲ, ಪಿ. ಜೆ. ಪುರಾಣಿಕ ಶಿವಲಿಂಗಯ್ಯ, ವಿ. ಪುರಾಣಿಕ, ಗುಂಡಾಚಾರ್ಯ ಪೆರುಮಾಳ, ಪ್ರಭುಲಿಂಗಯ್ಯ, ವಿ. ಮಲ್ಲಾಪುರ, ಮುದ್ದಣ್ಣ ಕೆಂಭಾವಿ, ಶಿವರುದ್ರಪ್ಪ ಮೇಳಕುಂದಿ, ಶಿವಶರಣ ಜಾವಳಿ ಪಾಟೀಲ,

ಸರ್ನಾಡ್ ಶ್ರೀಪತಿರಾವ್ ಆನಂದರಾವ್, ಬಿ. ಎಂ. ಸಿದ್ಧವೀರಯ್ಯ, ಭೀಮಪ್ಪ ರಾಮಪ್ಪ ಸುರಪುರ, ಬಸವನಾಥ ಸೂಗೂರು ಮಠ್, ಹಗರಟಗಿ ವೀರಸುಂಗಪ್ಪ ಭೀಮಪ್ಪ, ಕೆ. ಹಳ್ಳಿ ಬಂಡೆಪ್ಪ, ಹಿರೇಮಠ, ವಿ. ಹೆಳ್ಳೂರ ಗೋಪಾಲರಾವ್, ಹೆಜಿಬ ಮುಂತಾದ ಅನೇಕರನ್ನು ಹೆಸರಿಸಬಹುದು. ಜಿಲ್ಲೆಯ ಕ್ರೀಯಾ ಶೀಲ ಬರಹಗಾರರಾಗಿದ್ದು, ಕಾರಣಾಂತರದಿಂದ ಹೊರಜಿಲ್ಲೆಗೆ ಹೋದ ಪ್ರಮುಖರಲ್ಲಿ ನಾಟಕ, ಕಥೆ, ಕಾದಂಬರಿ ರಚಿಸಿದ ಚಿತ್ರಕಲಾವಿದರೂ ಆದ ಚಂದ್ರಕಾಂತ ಕುಸನೂರ, ಸಂಶೋಧಕ, ಇತಿಹಾಸ ತಜ್ಞರಾದ ಸೀತಾರಾಮ ಜಾಗೀರ್‌ದಾರ,ಸಾಹಿತ್ಯ ಕವಿ-ಕಾವ್ಯ ವಿಮರ್ಶೆ ಜೀವನ ಚರಿತ್ರೆ ಇತ್ಯಾದಿ ರಚಿಸಿ ವಾರಣಾಸಿಯ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಮುಖ್ಯಸ್ಥರಾಗಿ ನೇಮಕವಾದ ಶಿವಾನಂದ ವಿರಕ್ತಮಠ, ಉರ್ದು ಕವಿ ಡಾ. ಮುದ್ದಣ್ಣ ಮಂಜಾರ ಮುಂತಾದವರು ಪ್ರಮುಖರು.

ಪ್ರಾರಂಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಆರಂಭ ನಂತರ ಗುಲಬರ್ಗಾದಲ್ಲಿ ಪ್ರತ್ಯೇಕವಾದ ವಿಶ್ವವಿದ್ಯಾಲಯ ಬಂದಿದ್ದು, ನೆರೆ ಜಿಲ್ಲೆಯ ಕವಿ-ಕಲಾವಿದರಲ್ಲಿ ಅನೇಕರು ಇಲ್ಲಿ ನೆಲಸುವಂತಾಯಿತು. ಜಿಲ್ಲೆಯನ್ನು ಕುರಿತಂತೆ ಹಲವಾರು ಸಂಶೋಧನೆಗಳು ಆರಂಭಗೊಂಡವು. ಪುನರ್ ರಚಿತ ಅಕಾಡಮಿಗಳು ರಾಜಧಾನಿಯಿಂದ ಹೊರಗೆ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಕಾರ್ಯಕ್ರಮಗಳನ್ನು ಯೋಜಿಸಿದ್ದು ಸಹ ಈ ಜಿಲ್ಲೆಯು ಪ್ರಯೋಜನ ಪಡೆಯುವಂತಾಯಿತು. ಇದರೊಂದಿಗೆ ಜಿಲ್ಲೆಯ ಕ್ರೀಯಾಶೀಲ ಬರಹಗಾರರೂ ಗಣನೀಯ ಸಂಖ್ಯೆಯಲ್ಲಿ ಕೃತಿ ರಚನೆಗೆ ತೊಡಗಿದರು.

ಗುಲಬರ್ಗಾ ವಿಶ್ವವಿದ್ಯಾಲಯ ಆರಂಭದಿಂದಲೂ ಸಾಕಷ್ಟು ಪ್ರತಿಭಾವಂತರನ್ನು ಹೊಂದಿದೆ. ಕನ್ನಡ ಅಧ್ಯಯನ ಸಂಸ್ಥೆಯ ಭೋದಕ ವರ್ಗದವರು ಜನಪದ ಸಾಹಿತ್ಯ, ನಾಟಕ ಹಾಗೂ ಕಲಾ ಪ್ರಕಾರಗಳ ಬಗ್ಗೆ ಹೆಚ್ಚಾಗಿ ಅಧ್ಯಯನ, ಸಂಶೋಧನೆಗಳನ್ನು ಮೂಡಿರುವರಾದರೂ ಸಾಹಿತ್ಯ ಕ್ಷೇತ್ರದಲ್ಲಿಯೂ ಕೃತಿ ರಚನೆ ಮಾಡಿದ್ದಾರೆ. ಬಿ. ಬಿ. ಹೆಂಡಿಯವರು ವೀರಶೈವ ಸಿದ್ಧಾಂತ ಪ್ರವೇಶ ಎಂಬ ಸಂಗ್ರಹ ಹೊರತಂದಿದ್ದಾರೆ. ಮಲ್ಲಿಕಾರ್ಜುನ ಎಸ್. ಲಠ್ಠೆ ಅವರ ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮ (ಒಂದು ತೌಲನಿಕ ಅಭ್ಯಾಸ) ಜಾನಪದ ಸಂಶೋಧನಾತ್ಮಕ ಪದಗಳು ಇತ್ಯಾದಿಯಾಗಿ ಜಾನಪದ ಸಂಗ್ರಹ, ವಿಮರ್ಶೆ, ಸಂಪಾದನೆ ಕುರಿತು ಹಲವಾರು ಗ್ರಂಥಗಳನ್ನು ಹೊರತಂದಿದ್ದಾರೆ. ಮ. ಗು. ಬಿರದಾರ ಅವರ ವೀರಶೈವ ಸಾಹಿತ್ಯ (ಲೇಖನಸಂಗ್ರಹ) ಗಳಲ್ಲದೆ ಸಂಪಾದನೆ, ಕವನ ಸಂಕಲನ, ನಾಟಕಗಳನ್ನು ರಚಿಸಿದ್ದಾರೆ. ಕೃಷ್ಣಮೂರ್ತಿ ಕಿತ್ತೂರ ಅವರ ಭಾರತೀಯ ಸಾಹಿತ್ಯ ಚರಿತ್ರೆ, ವಿಮರ್ಶೆಯ ವ್ಯಾಪ್ತಿ, ಗಳಗನಾಥರು ಹಾಗೂ ಅವರ ಕಾದಂಬರಿಗಳು, ಪಿ.ಕೆ. ಖಂಡೋಬ ಅವರ ಕರ್ನಾಟಕದ ಲಂಬಾಣಿಗಳು, ಶಶಿಕಲಾ ಮೊಳ್ದಿ, ಅವರು ಸಂಪಾದಿಸಿದ ಹರದೆಯರ ಹಾಡು, ಅನುಭವ ಮಂಟಪದ ಶಿವಶರಣೆಯರು, ಸಂಗಮೇಶ ಸವದತ್ತಿ ಮಠ ಅವರ ದ್ರಾವಿಡ ಭಾಷಾ ವ್ಯಾಸಂಗ, ಕನ್ನಡ ಭಾಷಾ ವ್ಯಾಸಂಗ, ಕನ್ನಡ ಸಂಶೋಧನಾ ಕೈಪಿಡಿ, ಕನ್ನಡ ಭಾಷಾ ಕೈಪಿಡಿ, ಚೆನ್ನಣ್ಣವಾಲಿಕಾರ ಅವರ ಕರಿತಲೆ ಮಾನವನ ಜೇಪದ, ದಿಕ್ಕಾರದ ಹಾಡುಗಳು, ವಿ. ಜಿ. ಪೂಜಾರ ಅವರ ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಕನ್ನಡ ಸಾಹಿತ್ಯ, ಸಾಹಿತ್ಯ ಸಮಾವೇಶ, ಎನ್. ಬಿ. ಬುಳ್ಳಾ ಅವರ ಕಾವ್ಯಾನಂದ ಸಿದ್ದಯ್ಯ ಪುರಾಣಿಕರು ಮತ್ತು ಅವರ ಕೃತಿಗಳು, ವೀರಣ್ಣದಂಡೆ ಅವರ ಜನಪದ ಕಾವ್ಯ ಮೀಮಾಂಸೆ, ಸಿ. ನಾಗಭೂಷಣ ಅವರ ಗುಬ್ಬಿ ಒಂದು ಸಾಂಸ್ಕೃತಿಕ ಅಧ್ಯಯನ, ಕೆಂಬಾವಿ ಭೋಗಣ್ಣ, ಮೃತ್ಯುಂಜಯ ಹೊರಕೇರಿ ಅವರ ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಹಾಗೂ ಕೃತಿಗಳು, ಬಾದಾಮಿ ಬಂಡಾಯ, ಶಾಂತಿನಾಥ ದಿಬ್ಬದ ಅವರ ಪಂಪ ಭಾರತದ ಸಾಂಸ್ಕೃತಿಕ ಅಧ್ಯಯನ, ಮಲ್ಲಿಕಾ ಎಸ್. ಘಂಟಿ ಅವರ ಉತ್ತರ ಕರ್ನಾಟಕದ ಮಹಿಳಾ ಕಥಾ ಸಾಹಿತ್ಯ, ತುಳಯದಿರಿ ನನ್ನ, ಈ ಹೆಣ್ಣುಗಳೇ ಹೀಗೆ, ಬಸವರಾಜ ಸಬರದ ಅವರ ಪುರಂದರ -ಬಸವೇಶ್ವರ ಒಂದು ತೌಲನಿಕ ಅಧ್ಯಯನ, ನನ್ನವರ ಹಾಡು, ಬಿಸಿಲು ಬೆಳದಿಂಗಳಾಯಿತು. ವಿಜಯಶ್ರೀ ಸಬರದ ಅವರ 'ಅನುಪಮ ನಿರಂಜನ ಅವರ ಕೃತಿಗಳು - ಒಂದು ಅಧ್ಯಯನ' ಜ್ವಲಂತ, 'ಲಕ್ಷ್ಮಣ ರೇಖೆ ದಾಟಿದವರು', 'ಎಂ. ಎಸ್. ಪಾಟೀಲ ಅವರ ತ. ರಾ. ಸು. ಅವರ ಕಾದಂಬರಿಗಳು ಒಂದು ಅಧ್ಯಯನ ಇತ್ಯಾದಿಗಳು ಆಯಾ ಲೇಖಕರ ಕೆಲವು ಕೃತಿಗಳು.

ಮಹಿಳಾ ಲೇಖಕಿಯರೂ ಜಿಲ್ಲೆಯ ಸಾಹಿತ್ಯಕ್ಕೆ ಸಾಕಷ್ಟು ಕಾಣಿಕೆ ನೀಡಿದ್ದಾರೆ. ರಾಜ್ಯದ ಏಕೀಕರಣ ವೇಳೆಯಲ್ಲಿಯೇ ಕೃತಿ ರಚನೆ ಮಾಡುತ್ತಿದ್ದ ಶೈಲಜಾ ಉಡುಚಣ ಅವರು 'ಒಂದುಗಳಿಗೆ', 'ಕಾದುನೋಡು', 'ಸ್ವಗತ' ಇತ್ಯಾದಿ ಕವನ ಸಂಕಲನ ಹೊರ ತಂದಿದ್ದಾರೆ. 'ವಚನ ಕಾರರ ದೃಷ್ಟಿಯಲ್ಲಿ ಸ್ತ್ರೀ' ಅವರ ಮಹಾಪ್ರಬಂಧವಾಗಿದೆ. ಕಾದಂಬರಿ ಕ್ಷೇತ್ರದಲ್ಲಿ

ಸಾಕಷ್ಟು ಹೆಸರು ಮಾಡಿರುವ ಗೀತಾ ನಾಗಭೂಷಣ ಅವರು 'ಮಹಾಮನೆ', 'ಚಂದನದ ಚಿಗುರು', 'ಮರಳಿನ ಮನೆ', 'ಹಸಿ ಮಾಂಸ' ಮತ್ತು 'ಹದ್ದುಗಳು' ಇತ್ಯಾದಿ ಹದಿನೈದಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ. ಸರಿತಾ ಕುಸುಮಾಕರ ದೇಸಾಯಿ ಅವರು ಸಾಹಿತ್ಯದ ಹಲವಾರು ಕ್ಷೇತ್ರದಲ್ಲಿ ಕಾಣಿಕೆ ಸಲ್ಲಿಸಿರುವ ಪ್ರಮುಖರು ಅವರ 'ನೆಲಕಡಲು' ಅನುವಾದಿತ ಕಾದಂಬರಿ 'ಮಹಡಿಮನೆ' ಅನುವಾದಿತ ಕಥಾಸಂಕಲನವಲ್ಲದೆ ಸ್ವಂತವಾಗಿ 'ನಾನೂಲಕ್ಕಿ', 'ಕಾಶಿಯಲ್ಲಿ ಕಂಡದ್ದೇನು', 'ದೈವಮಿಲನ' ಎಂಬ ಕಥಾ ಸಂಕಲನಗಳನ್ನು ರಚಿಸಿದ್ದಾರೆ. 'ಭೀಮೇಶ, ಕೃಷ್ಣ' ಸಂಪಾದಿತ ಹಾಡುಗಳು, 'ಬಾಲ್ಯ ವಿವಾಹ 'ನಿಷೇಧ ಕಾನೂನು' ಇತ್ಯಾದಿ ಬರೆದಿದ್ದಾರೆ. ಸರಸ್ವತಿ ಚಿಮ್ಮಲಗಿ 'ನಾವು ನಿಮ್ಮವರೇ ಸ್ವಾಮಿ' ಎಂಬ ಕವನ ಸಂಕಲನವನ್ನೂ, 'ಕಮಲ ಹಂಪನಾ ಅವರ ಕೃತಿಗಳು' ಕುರಿತು ಪ್ರೌಢ ಅಧ್ಯಯನವನ್ನೂ, ಸೀತಾ ಜೋಶಿ ಅವರು 'ರಾಘವೇಂದ್ರ ಚರಿತ್ರೆ'ಯನ್ನು ಸುವರ್ಣಾದೊಡ್ಡಮನಿ ಅವರು 'ಜೀವನ ಸಂಗ್ರಾಮ' ಎಂಬ ಕಾದಂಬರಿ, 'ದೇವಿ ಸುಪ್ರಭಾತ' ಎಂಬ ಕಾವ್ಯವನ್ನೂ, ಶಶಿಕಲಾ ಮೌಲ್ದಿ ಅವರು 'ಡಿ.ವಿ.ಜಿ. ಸಾಹಿತ್ಯ ಮತ್ತು ಯುಗಧರ್ಮ'ವನ್ನೂ ರಚಿಸಿದ್ದಾರೆ. ಗೀತಾ ನಾಗಭೂಷಣ ಅವರಿಗೆ ೧೯೯೬ರಲ್ಲಿ ಹಾಗೂ ಶೈಲಜಾ ಉಡುಚಣ ಅವರಿಗೆ ೧೯೯೬ರಲ್ಲಿ ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರೆತಿದೆ. ನೀಲಮ್ಮ ಕತ್ನಳ್ಳಿ ಅವರು 'ಮದುವೆ ಮತ್ತು ಮಹಿಳೆ' ಎಂಬ ಪುಸ್ತಕ ರಚಿಸಿದ್ದಾರೆ. ಸುರಪುರದವರಾದ ಹನುಮಾಕ್ಷಿ ಗೋಗಿ ಅವರು ೧೯೯೪ರಲ್ಲಿ ಬಿ. ಆರ್. ಹಿರೇಮಠ ಅವರೊಂದಿಗೆ 'ಮುದ್ನೂರು ಮತ್ತು ಯಡ್ರಾಮಿ ಶಾಸನಗಳ ಸಂಗ್ರಹ' ಹೊರತಂದಿದ್ದು ಸ್ವಂತವಾಗಿ ೧೯೯೫ರಲ್ಲಿ 'ಸುರಪುರದ ಶಾಸನ'ಗಳನ್ನೂ, ೧೯೯೬ರಲ್ಲಿ 'ಕಲ್ಬುರ್ಗಿ ಜಿಲ್ಲೆಯ ಶಾಸನ'ಗಳನ್ನು ಹೊರತಂದಿದ್ದಾರೆ.

**ದಲಿತ ಮತ್ತು ಬಂಡಾಯ ಸಾಹಿತ್ಯ** : ರಾಜ್ಯದ ಉಳಿದೆಡೆಯಂತೆ ಜಿಲ್ಲೆಯಲ್ಲಿಯೂ ದಲಿತ ಮತ್ತು ಬಂಡಾಯ ಸಾಹಿತ್ಯಗಳು ಚಳವಳಿಯ ರೂಪದಲ್ಲಿ ಕಾಣಿಸಿಕೊಂಡಿರುವುದು ಉಂಟು. ೧೯೭೪ರಲ್ಲಿ ರಾಯಚೂರಿನಲ್ಲಿ ದಲಿತ ಚಳವಳಿಯೊಂದು ರೂಪಗೊಂಡು ಜಿಲ್ಲೆಯ ಲೇಖಕರೂ ಪಾಲುಗೊಂಡಿದ್ದರು. ೧೯೭೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಕ್ಕೆ ಪ್ರತಿಸ್ಪರ್ಧಿಯಾಗಿ ಬಂಡಾಯ ಸಾಹಿತ್ಯ ಸಮ್ಮೇಳನ ಬೆಂಗಳೂರಿನಲ್ಲಿ ಸಂಘಟನೆಗೊಂಡಾಗ ಜಿಲ್ಲೆಯ ಸಾಹಿತಿಗಳೂ ಸ್ಪಂದಿಸಿದರು. ಆಳಂದ ತಾಲೂಕಿನ ಚಿಂಚನಸೂರ ಗ್ರಾಮದಲ್ಲಿ ಬೆತ್ತಲೆ ಸೇವೆ ನಡೆಯುತ್ತಿದ್ದು ಈ ಅವಮಾನೀಯ ಸಂಪ್ರದಾಯ ನಿಲ್ಲಿಸಲು ಕೆಲವು ಸಾಹಿತಿಗಳು ಮುಂದಾದರು, ೧೬ನೇ ಏಪ್ರಿಲ್ ೧೯೮೦ ನಡೆಯಬೇಕಿದ್ದ ಸೇವೆಯನ್ನು ಅಂದು ಪೋಲೀಸ್ ಸಹಾಯದಿಂದಾಗಿ ನಿಲ್ಲಿಸಲಾಯಿತು. ಇದನ್ನೇ ಆಧಾರವಾಗಿಸಿ ಚಳವಳಿಗೆ ಸಂಘಟನೆಯ ರೂಪವನ್ನು ನೀಡಿ ೧೫ನೇ ಸೆಪ್ಟೆಂಬರ್ ೧೯೮೦ರಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಆರಂಭವಾಯಿತು. ಇದರ ನೇತೃತ್ವವನ್ನು ಬಿ. ಕೃಷ್ಣಪ್ಪ, ಚೆನ್ನಣ್ಣ ವಾಲೀಕಾರ, ಮಂಗಳೂರು ವಿಜಯ, ಬಸಣ್ಣಸಿಂಗೆ ಮತ್ತು ಡಿ. ಜಿ. ಸಾಗರ್ ಅವರು ವಹಿಸಿದ್ದರು. ಆಗ ಪುರಭವನದಲ್ಲಿ ಜಿಲ್ಲಾ ಸಮ್ಮೇಳನವೊಂದು ನಡೆಯಿತು. ೧೯೮೮ರಲ್ಲಿ ಜಿಲ್ಲೆಯ ದೇವಲ ಗಾಣಗಾಪುರದಲ್ಲಿ ಒಂಬತ್ತನೇ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು. ೧೯೮೬-೮೯ ಹಾಗೂ ೧೯೯೨ರಲ್ಲಿ ಗುಲಬರ್ಗಾ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಶಿಬಿರಗಳು ಸಂಘಟಿತವಾಗಿದ್ದವು. ೧೯೯೬ರಲ್ಲಿ ಗುಲಬರ್ಗಾ ಜಿಲ್ಲಾ ದಲಿತ ಸಂಘರ್ಷ ಸಮಿತಿ ಹಾಗೂ ದಲಿತ ಸಂಘರ್ಷ ಸೇವಾ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ಅಲ್ಲದೆ ಗುಲಬರ್ಗಾದಲ್ಲಿ ಮಾರ್ಕ್ಸ್‌ಲೆನಿನ್ ವಿಚಾರ ಸಮಿತಿಯೊಂದು ಕಾರ್ಯನಿರ್ವಹಿಸುತ್ತಿದ್ದು ಜಂಬಣ್ಣ ಅಮರಚಿಂತ ಅವರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಎಂಬ ಪುಸ್ತಕ ಪ್ರಕಟಿಸಿದೆ. ಇಡಿ ಚಳವಳಿಗೆ ಚೆನ್ನಣ್ಣವಾಲಿಕಾರರು ತೊಡಗಿಸಿಕೊಂಡಿದ್ದು "ಜನಪದದ ಅಮಾನವೀಯ ಪದ್ಧತಿಗಳು", "ಶಿಷ್ಟಪದದಿಂದ ಕಲಂಕಿತಗೊಂಡ ಜನಪದದ ಬಿಡುಗಡೆಗಾಗಿ ಯೋಜನೆಗಳು" ಮತ್ತು "ಚಳವಳಿಗಳು ಗ್ರಾಮೀಣಾಭಿವೃದ್ಧಿ ಮತ್ತು ಹೊಸ ಜನಪದ ಸಾಹಿತ್ಯದ ಸೃಷ್ಟಿ" ಇತ್ಯಾದಿ ಲೇಖನ ಬರೆದಿರುವುದಲ್ಲದೆ ಹಲವಾರು ಸಂಘಟನೆಗಳು ವಿಚಾರ ಸಂಕಿರಣಗಳು ಇತ್ಯಾದಿ ರೂಪಿಸಿ ಅಯಾಮವೊಂದನ್ನು ನೀಡಿದ್ದಾರೆ. ಬಸವರಾಜ ಸಬರದ ಅವರು ರಾಜ್ಯ ಬಂಡಾಯ ಚಳವಳಿಯ ಬಗ್ಗೆ, ಆ ಕುರಿತ ಸಾಹಿತ್ಯದ ಬಗ್ಗೆ ಚಿಂತನೆಗಳನ್ನು ಮಾಡಿದ್ದು ಹಲವಾರು ಲೇಖನಗಳನ್ನು ರಚಿಸಿದ್ದಾರೆ. ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು, ಎಂಬ ಲೇಖನಗಳ ಸಂಗ್ರಹವನ್ನು ಸಂಪಾದಿಸಿದ್ದಾರೆ. 'ಧೀಮಂತ ನಾಯಕ ಅಂಬೇಡ್ಕರ್' ಬರೆದ ಬಸಣ್ಣಸಿಂಗೆ ಅವರು 'ಶೋಷಣೆ' ಎಂಬ ಸಂಚಿಕೆಯನ್ನು ಸಂಪಾದಿಸಿದ್ದಾರೆ. ರೊಚ್ಚು ಕವನ ಸಂಕಲನದ ಸಿದ್ದಪ್ಪಸುಳ್ಳದ, ದಲಿತ ವಾಹಿನಿ ಪತ್ರಿಕೆಯ ಜಿಲ್ಲೆಯ ಪ್ರತಿನಿಧಿ ಹಾಗೂ ಲೇಖಕ ಎಚ್. ಶ್ರೇಯಸ್ಕರ್, ಮಿರಾಬಾಯಿ ಬಗ್ಗೆ ಅಧ್ಯಯನ ಮಾಡಿರುವ ಜನಾಬಾಯಿ, ಅಂಬೇಡ್ಕರ್ ವಿಚಾರಧಾರೆಯ ಅಶೋಕರಾಜನ್

ನೃಪತುಂಗ ಪತ್ರಿಕೆಯ ಸಂಪಾದಕ ಶಿವರಾಮ ದೊಡ್ಡಮನಿ ಮುಂತಾದವರು ದಲಿತ ಬಂಡಾಯ ಸಾಹಿತ್ಯಕ್ಕೆ ತಮ್ಮ ಕಾಣಿಕೆ ನೀಡಿದ್ದಾರೆ. ಇವರಲ್ಲದೆ ಕೆ. ಶರೀಫ್, ದೇವೇಂದ್ರ ಶೆಳಗಿ, ಸೊಗಯ್ಯ ಹಿರೇಮಠ, ಪ್ರಭು ಖಾನ್‌ಪುರ್, ರಮೇಶ ಸೋನ ಕಾಂಬಳೆ, ಸಮತಾ ದೇವಮಾನೆ, ಡಿ. ಬಿ. ನಾಯಕ, ಗೀತಾ ನಾಗಭೂಷಣ, ಮಲ್ಲಿಕಾ ಘಂಟಿ, ಶಂಕ್ರಯ್ಯ ಘಂಟಿ, ಸಿದ್ದರಾಮ ಹೊನಕಲ್, ರಾಜಶೇಖರ್ ಪಾಟೀಲ್, ರವಿ ಹಿರೇಮಠ, ತಿಮ್ಮಯ್ಯ ಪುರ್ಲೆ, ಅಬ್ದುಲ್ ಕರೀಂ ಕನ್ನೆಕೋಳೂರ, ಪ್ರಭುರಾಜ ಅರಣಕಲ್, ಕೆ. ಎಸ್. ರಾಜ(ನಂದಿ), ಶೀಲಾ ತಿವಾರಿ, ವಿಜಯಶ್ರೀ ಸಬರದ, ಕಾಶಿನಾಥ ಅಂಬಲಗೆ, ಸಿ ನಾಗಪ್ಪ ಮೊದಲಾದ ಅನೇಕ ಸಾಹಿತಿಗಳು ಬಂಡಾಯ ದಲಿತ ಸಾಹಿತ್ಯ ಚಳವಳಿಗೆ ಸ್ಪಂದಿಸಿದ್ದಾರೆ. ಲೇಖನ ರಚಿಸಿದ್ದಾರೆ. ಬಂಡಾಯ ಕವಿ ದಿ|| ಶಿವಶರಣ ಪಾಟೀಲ ಜಾವಳಿ ಅವರ ಐದನೇ ಪದ್ಯಸಂಕಲನ 'ಕಾಲದ ನೆರಳು' ಈಚೆಗೆ ಬಿಡುಗಡೆಯಾಯಿತು.

**ಮಕ್ಕಳ ಸಾಹಿತ್ಯ** : ಇತ್ತೀಚೆಗೆ ಮಕ್ಕಳ ಸಾಹಿತ್ಯವನ್ನು ಪ್ರತ್ಯೇಕ ಪ್ರಕಾರವಾಗಿ ಪರಿಗಣಿಸಲಾಗುತ್ತಿದೆ. ಅಕಾಡಮಿ ಆ ಬಗೆಯ ಪುಸ್ತಕಗಳಿಗೆ ಬಹುಮಾನ ನೀಡುತ್ತಿದ್ದು ಮಕ್ಕಳ ಸಾಹಿತ್ಯ ಕುರಿತ ಲೇಖನಗಳು ಹಾಗೂ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಕತೆ ಪದ್ಯ, ನಾಟಕ ಇತ್ಯಾದಿ ರಚನೆಗಳೂ ಹೊರಬರುತ್ತಿವೆ. ನೆರೆಯ ಬಿಜಾಪುರದಲ್ಲಿ ಶಿಶು ಸಂಗಮೇಶ ಅವರು ಪ್ರಾರಂಭದಿಂದ ಮಕ್ಕಳ ಸಾಹಿತ್ಯಕ್ಕೆ ಹೆಚ್ಚು ಗಮನಹರಿಸಿದ್ದು ಈ ಜಿಲ್ಲೆಯೊಂದಿಗೆ ಸಂಪರ್ಕ ಇರಿಸಿಕೊಂಡಿದ್ದವರು. ಎ. ಕೆ. ರಾಮೇಶ್ವರ ಅವರು ೧೯೫೮ರಲ್ಲಿಯೇ ಗುಲಬರ್ಗಾಕ್ಕೆ ಬಂದು ನೆಲೆಸಿದ್ದು ಉಳಿದಂತೆ ಮಕ್ಕಳ ಸಾಹಿತ್ಯ ರಚನೆಯನ್ನೂ ಕೈಗೊಂಡರು. ೧೯೬೨ರ ವೇಳೆಯಲ್ಲಿ ಆನಂದಕಂದರ 'ಜಯಂತಿ' ಹಾಗೂ ಪಾಟೀಲ್ ಪುಟ್ಟಪ್ಪ ಅವರ 'ಪ್ರಪಂಚ'ದಲ್ಲಿ ಅವು ಪ್ರಕಟವಾಗುತ್ತಿದ್ದವು. ನಂದಿಕೋಲು, ವಸಂತ ಬಂದ, ಬನ್ನಿರಿ ಮನುಕುಲ ಚಂದಿರರೆ, ಹಕ್ಕಿ ಹಾರುತ್ತಿದೆ, ಅಜ್ಜನ ಹಾಡು ಇತ್ಯಾದಿ ಮಕ್ಕಳ ಪದ್ಯ ಸಂಕಲನಗಳಲ್ಲದೆ ವಿಶ್ವವಿದ್ಯಾನಿಲಯದಿಂದ ಬಹುಮಾನಿತವಾದ ಹಣಚಿ ಬಟ್ಟಿನ ಕೈ ಜಾನಪದ ಬಟ್ಟಲು, ಎಂಬ ಜಾನಪದ ಗದ್ಯ ಹಾಗೂ ಹಚ್ಚಡದ ಪದರಾಗಿ ಅಚ್ಚ ಮಲ್ಲಿಗೆ ಹೂ ಎಂಬ ಗುಲಬರ್ಗಾ ಜಿಲ್ಲೆಯ ತ್ರಿಪದಿಗಳನ್ನು ಮಕ್ಕಳಿಗಾಗಿ ಸಂಗ್ರಹಿಸಿದ್ದಾರೆ. ಇವರ ನಂದಿಕೋಲು ಕೃತಿಗೆ ರಾಜ್ಯ ಪ್ರಶಸ್ತಿ ಬಂದಿದೆ. ರಾಮೇಶ್ವರ ಅವರಿಗೆ ೧೯೮೪ರಲ್ಲಿ ರಾಜ್ಯ ಪ್ರಶಸ್ತಿ ೧೯೮೬ರಲ್ಲಿ ರಾಷ್ಟ್ರ ಪ್ರಶಸ್ತಿಗಳು ೧೯೯೬-೯೭ರಲ್ಲಿ ಇಂಗ್ಲೆಂಡ್‌ನ ಕೇಂಬ್ರಿಡ್ಜ್ ಇಂಟರ್ ನ್ಯಾಷನಲ್ ಬಯೋಗ್ರಫಿಕಲ್‌ನ (ಐ.ಬಿ.ಸಿ) ಪ್ರಶಸ್ತಿ ದೊರೆತಿದೆ. ಗುಲಬರ್ಗಾದ ರಾಜಶೇಖರ ಕಕ್ಕುಂದ ಅವರೂ ಮಕ್ಕಳ ಸಾಹಿತ್ಯ ರಚನೆ ಮಾಡಿದ್ದು ಅವರೊಂದಿಗೆ ರಾಮೇಶ್ವರ ಅವರೂ ಸೇರಿ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಭೀಮಣ್ಣ ಬೋನಾಳ ಅವರು ಬಣ್ಣದ ಚಂಡು ಕವನ ಸಂಕಲನ ರಚಿಸಿದ್ದಾರೆ. ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡಮಿಯೊಂದು ೧೯೮೪ರಲ್ಲಿ ಬಿಜಾಪುರದಲ್ಲಿ ರೂಪ ತಳೆದಿದ್ದು ಅದರ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನ ೮೫ರಲ್ಲಿ ಗುಲಬರ್ಗಾದಲ್ಲಿ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನೆರವೇರಿತು. ಜಿಲ್ಲೆಯಿಂದ ಎಸ್. ಆರ್. ಗುಂಜಾಳ, ಕೆ. ಎಸ್. ರಾಜ (ನಂದಿ) ಕೆರಳಿ ಗುರುನಾಥ ರೆಡ್ಡಿ, ಮೋಹನಚಂದ ಕಿರಣಗಿ, 'ಉಮಾತನಯ ರಾಜ' ರಾಜಶೇಖರ ಕುಕ್ಕುಂದ ಅವರುಗಳು ಭಾಗವಹಿಸಿದ್ದರು. ಮಕ್ಕಳ ಪದ್ಯ, ಸಾಹಿತ್ಯ, ಕಲೆ, ನಾಟಕ ಇತ್ಯಾದಿ ಕುರಿತು ಹಲವಾರು ಪ್ರಬಂಧಗಳು ಮಂಡಿತವಾಗಿದ್ದು ನಂತರ ಪುಸ್ತಕ ರೂಪದಲ್ಲಿಯೂ ಹೊರಬಂದಿದೆ. ಗಡಿನಾಡ ಮಕ್ಕಳ ಸಾಹಿತ್ಯ ಸಮ್ಮೇಳನವೊಂದು ೧೯೮೪ರಲ್ಲಿ ಅಫಜಲಪುರದಲ್ಲಿ ಸಂತೋಷ ಕುಮಾರ ಗುಲ್ವಾಡಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ್ದು 'ಬಾಲ ಸಂಗಮ' ಎಂಬ ಸಂಚಿಕೆ ಹೊರತರಲಾಯಿತು. ಗುಲಬರ್ಗಾದಲ್ಲಿ ಎ. ಕೆ. ರಾಮೇಶ್ವರ, ಚಂದ್ರಶೇಖರ ಕಟ್ಟಿ, ಕವಿ ಹಿರೇಮಠ ಎ. ವಿ. ಪಾಟೀಲ ಅವರುಗಳು ಸಂಧ್ಯಾ ಸಾಹಿತ್ಯ ವೇದಿಕೆಯೊಂದನ್ನು ರೂಪಿಸಿಕೊಂಡು ತಿಂಗಳಿಗೊಂದು ಬಾರಿ ಮಕ್ಕಳ ಸಾಹಿತ್ಯ ಇತ್ಯಾದಿ ಬಗ್ಗೆ ಚರ್ಚೆ, ವಿಚಾರಗೋಷ್ಠಿ ಏರ್ಪಡಿಸುವುದಲ್ಲದೆ ಮಕ್ಕಳಿಗಾಗಿ ಹಲವಾರು ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ.

* * * * * *

ಎಸ್. ಆರ್. ಗುಂಜಾಳ ಹಾಗೂ ಗವೀಶ ಹಿರೇಮಠ ಅವರುಗಳು ೧೯೮೫ರಲ್ಲಿ 'ಗುಲಬರ್ಗಾ ವಿಭಾಗದ ಲೇಖಕರು' ಎಂಬ ಪುಸ್ತಕವನ್ನು ಹೊರತಂದಿದ್ದು ಇದರಲ್ಲಿ ಜಿಲ್ಲೆಯ ಸಾಹಿತ್ಯ ಹಾಗೂ ಸಾಹಿತಿಗಳ ಬಗ್ಗೆ ಸಂಕ್ಷಿಪ್ತ ಅಧ್ಯಯನವನ್ನು ಮಾಡಿದ್ದಾರೆ. ಇದರಲ್ಲಿ ೧೯೮೫ರ ವರೆಗೆ ಜೀವಂತ ಇದ್ದ ಲೇಖಕ ಹಾಗೂ ಅವರ ಕೃತಿಗಳನ್ನು ಮಾತ್ರ

ಗಮನಿಸಿದ್ದು ಗುಲಬರ್ಗಾ ಜಿಲ್ಲೆಯಲ್ಲಿ ೧೧೧ ಲೇಖಕರ ೪೬೫ ಪುಸ್ತಕಗಳನ್ನು ಪಟ್ಟಿಮಾಡಿದ್ದಾರೆ. ಇವುಗಳಲ್ಲಿ ೧೧೭ ಪುಸ್ತಕಗಳು ಕಾವ್ಯ, ಚರಿತ್ರೆ ೭೭, ನಾಟಕ ೩೫, ವಿಮರ್ಶೆ ೪೨, ಜಾನಪದ ೨೭, ವಿಜ್ಞಾನ ೩೩, ಕಾದಂಬರಿ ೨೦ ಪುಸ್ತಕಗಳಾಗಿದ್ದು ಉಳಿದಂತೆ ಪ್ರವಾಸ ಸಾಹಿತ್ಯ, ತತ್ವ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ ಪುಸ್ತಕಗಳಾಗಿವೆ. ಇದರಿಂದಾಗಿ ಜಿಲ್ಲೆಯಲ್ಲಿ ಕಾವ್ಯ ಹಾಗೂ ಚರಿತ್ರೆ ಗ್ರಂಥಗಳ ಬಗ್ಗೆ ಹೆಚ್ಚಿನ ಒಲವು ಕಂಡು ಬರುತ್ತದೆ ಎಂದು ಸ್ಥೂಲವಾಗಿ ಹೇಳಬಹುದು.

**ಭಾಷಾ ಪ್ರಭೇದ**

ಪ್ರಾಂತದಿಂದ ಪ್ರಾಂತಕ್ಕೆ ಕನ್ನಡ ಭಾಷೆಯಲ್ಲಿರುವ ವಿಭಿನ್ನತೆಯನ್ನು ಈಗಾಗಲೇ ಗುರುತಿಸಲಾಗಿದೆ. ನೆರೆ ರಾಜ್ಯಗಳ ಇಲ್ಲವೆ ಹೊರಗಿನ ಅರಸು ಮನೆತನಗಳ ಆಳ್ವಿಕೆಯಿಂದಾಗಿ ಆ ಭಾಷೆಗಳು ಸ್ಥಳೀಯ ಭಾಷೆಯ ಮೇಲೆ ಪ್ರಭಾವ ಬೀರುತ್ತವೆ. ಗುಲಬರ್ಗಾ ಜಿಲ್ಲೆಯಲ್ಲೂ ಉರ್ದು ಅಲ್ಲದೆ ಮರಾಠಿ ಹಾಗೂ ತೆಲುಗು ಭಾಷೆಗಳ ಪ್ರಭಾವ ಇರುವುದನ್ನು ವೈಜ್ಞಾನಿಕವಾಗಿ ವಿಮರ್ಶಿಸಲಾಗಿದೆ. ವಿದೇಶದ ಹಾಗೂ ನೆರೆ ರಾಜ್ಯಗಳ ಭಾಷೆಯಲ್ಲಿ ಪದಗಳನ್ನು ಎರವಲು ತೆಗೆದುಕೊಂಡಿರುವುದು ಒಂದಾದರೆ ಪದಗಳ ಉಚ್ಚಾರಣೆಯಲ್ಲಿ ವ್ಯತ್ಯಾಸ ಉಂಟಾಗುವುದು ಇನ್ನೊಂದು.

ಸ್ವರ, ವ್ಯಂಜನಗಳಲ್ಲಿ, ಸಮಾಸ, ವಿಭಕ್ತಿ ಪ್ರತ್ಯಯ ಇತ್ಯಾದಿ ವ್ಯಾಕರಣಾಂಶಗಳಲ್ಲಿ ಹಲವಾರು ಬದಲಾವಣೆಗಳು ಪದಾದಿ, ಪದಮಧ್ಯ, ಪದಾಂತಗಳಲ್ಲಿ ಆಗುತ್ತವೆ. ಉದಾಹರಣೆಗೆ 'ಅ' ಕಾರ 'ಅ್ಯ' ಆಗುವಂತೆ, ಚ=ಚ಼, ಜ=ಜ಼, ಹ=ಅ, ಅಥವಾ ವ: ಎ=ಇ ಇತ್ಯಾದಿಯಾಗಿ ಉಚ್ಚಾರಣೆಗಳು ಬದಲಾಗುತ್ತವೆ. ಕಡಲೆ ಎಂಬುದು ಕಡ್ಲಿ ಆದಂತೆ ಇವತ್ತು = ಇವತ್ತ, ಬೇಟೆ=ಬ್ಯಾಟಿ, ಹೊಲ=ಹ್ವೊಲ ಅಥವ ವಲ, ಅಪ್ಪ = ಯಪ್ಪ, ಅವ್ವ = ಯವ್ವ, ಹಾಲು = ಆಲು, ಸೂಜಿ=ಸೂಚಿ, ಓಲೆ=ವಾಲಿ, ಮುಂಜಾನೆ = ಮುಂಜಾಳೆ, ಅವ=ಕವ, ಇವ=ಕಿವ, ಚಳಿ=ಛಳಿ, ಗೋಧಿ=ಘೋದಿ, ಒಂದು=ಒಂದ್, ಅವನನ್ನು=ಅವ್‌ನ್ಗ್ ಇತ್ಯಾದಿ.

ಸಂಯುಕ್ತ ಪದಗಳಲ್ಲಿ ನಡೆಯುವ ಬದಲಾವಣೆಗಳಲ್ಲಿ : ಮಲಗಿಕೊಂಡು = ಮಕ್ಕೆಂಡು, ತಿನ್ನುತ್ತ=ತಿನಕೆಂತ, ಅವನಿಗೆ ನೋಡಿದ್ದೇನೆ = ಅವನ್ಗ ನೋಡಿನಿ, ಹೊಲಕ್ಕೆ ಹೋಗೋಣ=ಹ್ವಲಕ್ ಹೋಗಮು, ಹೋಗುವ ಹಾಗೆ=ಹೋಗಪ್ಲೆ, ಕೆಲಸ ಮಾಡಲು=ಕೆಲ್ಸ ಮಾಡ್‌ಲಿಕ್, ಮುಗಿಲಿನಿಂದ=ಮುಗುಲ್ನಿಂದು, ಇಪ್ಪತ್ತು+ಒಂಬತ್ತು=ಇಪ್ಪತ್ತೊಂಬತ್ತು ಇತ್ಯಾದಿ ಉದಾಹರಿಸಬಹುದು.

ವಾಕ್ಯ ರಚನೆಯಲ್ಲಿ 'ತಲೆದಿಂಬಿನ ಕೆಳಗೆ ಒಂದು ಕಾಗದ ಇಟ್ಟಿದ್ದೀನಿ' ಎಂಬುದು 'ತಲ್ಯಂಬ್‌ಗಿ ತಳಗ ವಂದ್ ಕಾಗ್ದ ಇಟ್ಟೀನಿ' ಎಂಬಂತೆಯೂ ಉರ್ದುವಿನ ಪ್ರಭಾವದಿಂದಾಗಿ 'ನಾ ಕೊಟ್ಟದ್ದು ಮಾಡಿ ಯಾವ್ದು ದುಸ್ರಾ ಮಾಡ್ಡಿ' 'ರೂಪೈ ನಗ್ದಿ ತಗೊಂಡು ದುಕಾನಕ ನಡಿ' ಎಂದೂ ಬಳಕೆಯಾಗುವುದುಂಟು. ಉರ್ದು ಪದಗಳಲ್ಲಿ ಬಜಾರು,ಅಜಮಾಸು, ಖರಾಬ್ ಮಾಡು, ಹೈರಾಣ್ ಆಗು, ದುಗಣಿ ಮಂದಿ, ಗರೀಬ್ ಮನಸ್ಯ, ಅಚ್ಛಾ ಹೇಳು ಇತ್ಯಾದಿಗಳು, ಸಂಖ್ಯಾ ವಾಚಕದಲ್ಲಿ ಪಾವ್, ದೀಡ್, ತೀಸ್, ಬಾರ, ಹಜಾರ್ ಇತ್ಯಾದಿಗಳು ಸಹಜ ಕನ್ನಡವೆಂಬಂತೆಯೇ ಬಳಕೆಯಾಗುತ್ತದೆ.

ಸ್ಥಳನಾಮಗಳಲ್ಲೂ ಕೆಲವು ವಿಶೇಷತೆಗಳನ್ನು ಗುರುತಿಸಲಾಗಿದೆ. 'ಗ' ಅಥವ 'ಗಿ' ಕಾರದಿಂದ ಅಂತ್ಯವಾಗುವ ಊರುಗಳು, ಗುಲಬರ್ಗಾ ಅಥವಾ ಕಲ್ಬುರ್ಗಿ, ಕಾಳಗಿ, ಹುಣಸಗಿ, ಯಾಳಗಿ, ಇಂಗಳಗಿ ಇತ್ಯಾದಿಗಳು; 'ಪುರ'ಗಳು 'ಪೂರ' ಎಂದೂ 'ಗಿರ' ಗಳು 'ಗೀರ' ಎಂದೂ ಅಂತ್ಯವಾಗುವುದರಲ್ಲಿ ಶಹಪೂರ, ಸುರಪೂರ, ಯಾದಗೀರ ಇತ್ಯಾದಿ ಉದಾಹರಿಸಬಹುದು. 'ಊರು', 'ಹಳ್ಳಿ'ಗಳಿಂದ ಅಂತ್ಯವಾಗುವ ಪದನಾಮಗಳಲ್ಲದೆ 'ಖೇಡ' 'ಹಾಳ' 'ಹಾರ' (ಆಹಾರ, ಅಗ್ರಹಾರ) ಇತ್ಯಾದಿ ಪದಗಳಿಂದ ಅಂತ್ಯವಾಗುವ ಸ್ಥಳನಾಮಗಳೂ ಗಣನೀಯ ಸಂಖ್ಯೆಯಲ್ಲಿವೆ. (ವಿವರಗಳಿಗೆ ಅಧ್ಯಾಯ ೧೭ ನೋಡಿ)

ಗುಲಬರ್ಗಾ ಜಿಲ್ಲೆಯ ಕನ್ನಡದಲ್ಲಿ ಉಚ್ಚಾರಣೆಯಲ್ಲಿ ಅಥವಾ ವ್ಯವಹಾರದಲ್ಲಿ ಬದಲಾವಣೆಗಳು ಕಂಡುಬರುತ್ತವಾದರೂ ಬರವಣಿಗೆಯಲ್ಲಿ ಶಿಷ್ಟ ಅಥವಾ ಗ್ರಾಂಥಿಕವೇ ಆಗುತ್ತವೆ. ಇಲ್ಲಿಯ ಭಾಷೆಯ ಹಲವಾರು ಉಚ್ಚಾರಣೆಗಳು ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೂ ಅನ್ವಯಿಸುವುದಲ್ಲದೆ ಧಾರವಾಡ, ಬಿಜಾಪುರದ ಪ್ರಾಂತಗಳಿಗೂ ವಿಸ್ತರಿಸಬಹುದು.

## ಮರಾಠಿ ಸಾಹಿತ್ಯ

ಪ್ರಖ್ಯಾತ ಸಂತ ಹಾಗೂ ಪದ್ಯ ರಚನಕಾರರಾದ ತುಕಾರಾಂನ ಗುರು ಬಾಬಾಜಿ ಚೈತನ್ಯ ಗುಲಬರ್ಗಾ ಜಿಲ್ಲೆಯ ಮಾನ್ಯಹಾಳದವರು. ಚೈತನ್ಯರಿಗೆ ಸಂಬಂಧಿಸಿದ ಆಲಯವೊಂದು ಈ ಹಳ್ಳಿಯಲ್ಲಿದ್ದು ಸ್ಥಳೀಯರಿಂದ ಪೂಜಿಸಲ್ಪಡುತ್ತದೆ. ಸಂತ ತುಕಾರಾಂನ ಗುರುವಿನ ಗುರು ರಾಘವ ಚೈತನ್ಯರ ಸಮಾಧಿ ಮಂದಿರವೂ ಆಳಂದದಲ್ಲಿದ್ದು ಅದಕ್ಕೂ ಭಕ್ತರು ನಡೆದುಕೊಳ್ಳುತ್ತಾರೆ. ಅಂತೆಯೇ ಜಿಲ್ಲೆಯೊಂದಿಗೆ ಮರಾಠರ ಸಂಪರ್ಕ ಶಿವಾಜಿ ಹಾಗೂ ಪೇಶ್ವೆಗಳ ಕಾಲದಲ್ಲೂ ಮುಂದುವರೆಯಿತು. ಸುರಪುರದ ನಾಯಕರೊಂದಿಗೆ ಮರಾಠರ ಸಂಬಂಧ ಸ್ನೇಹ - ವೈಶಮ್ಯಗಳಿಂದ ಕೂಡಿದ್ದು ಅವರ ಇತಿಹಾಸದುದ್ದಕ್ಕೂ ಕಾಣುತ್ತೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ಈ ಜಿಲ್ಲೆಯ ಬಹುಭಾಗದ ವ್ಯಾಪಾರಿ ಮತ್ತು ಶೈಕ್ಷಣಿಕ ಸಂಪರ್ಕಗಳು, ನೆರೆಯ ಸೊಲ್ಲಾಪುರ, ಪುಣೆ, ಮಿರಜ, ಸಾಂಗಲಿಯೊಂದಿಗೆ ಹೆಚ್ಚಾಗಿದ್ದುದರಿಂದ ಮರಾಠಿಯ ಪ್ರಭಾವ ವಲಯವು ತಾನೇ ತಾನಾಗಿ ಬೆಳೆಯಲು ಸಹಾಯಕವಾಯಿತು. ತಿಲಕರ ಪ್ರಭಾವ, ಕೇಸರಿ ಪತ್ರಿಕೆ ಇತ್ಯಾದಿಗಳು ಜಿಲ್ಲೆಯ ಉತ್ತರ ಭಾಗದಲ್ಲಿ ಇದ್ದಿತಾದರೂ ಇಡೀ ಪ್ರದೇಶದ ಮುಸ್ಲಿಂ ರಾಜ್ಯಭಾರದಲ್ಲಿ ಉರ್ದುವೇ ಪ್ರಧಾನವಾಗಿದ್ದು, ಮರಾಠಿ ಲೇಖಕರ ಬಗ್ಗೆ ಹೆಚ್ಚಿನ ಸಂಗತಿಗಳು ತಿಳಿದು ಬರುವುದಿಲ್ಲ. ಶಾಲೆಗಳಲ್ಲಿ ಕನ್ನಡ ಮಾಧ್ಯಮ ಈ ಶತಮಾನದ ಆದಿಯಲ್ಲೇ ಬಂದಿದ್ದರೂ ಮರಾಠಿ ಮಾಧ್ಯಮ ಬಂದದ್ದು ನಂತರವೇ. ಆದರೆ ೧೮೯೩ರಲ್ಲಿ ಪರಶುರಾಮ ಗೋವಿಂದ ಬೋಡಸ್ ಅವರು 'ಗುಲಬರ್ಗಾ ಸಮಾಚಾರ' ಎಂಬ ಮರಾಠಿ ಪತ್ರಿಕೆಯನ್ನು ಹೊರತಂದಿದ್ದು ಜಿಲ್ಲೆಯ ಪತ್ರಿಕೆಗಳಲ್ಲಿ ಇದೇ ಪ್ರಥಮವೆಂದು ಹೇಳಬಹುದು.

ಆಳಂದದ ಧೋಂಡೋ ಪಂತ್ ಹಾಗೂ ಕಲ್ಯಾಣ ರಾವ್ ದೇಶಪಾಂಡೆ ಅವರುಗಳಿಗೆ 'ಕೇಸರಿ' ಪತ್ರಿಕೆಯೊಂದಿಗೆ ಸಂಪರ್ಕವಿತ್ತು. ಕಲ್ಯಾಣರಾವ್ ಅವರು ೧೯೩೫ ರಲ್ಲಿ ಆಳಂದದ ಇತಿಹಾಸವನ್ನು ಮರಾಠಿ ಭಾಷೆಯಲ್ಲಿ ಬರೆದಿದ್ದರು. ಇವರೊಂದಿಗೆ ಇದ್ದ ವಕೀಲ ಭೀಮಾಶಂಕರ ದೇಶಪಾಂಡೆ ಅವರು ಸಹ ಹಲವಾರು ಲೇಖನಗಳನ್ನು ೧೮ ಪುಸ್ತಕಗಳನ್ನು ಮರಾಠಿಯಲ್ಲಿ ಬರೆದಿದ್ದು ಇಂದಿಗೂ ಕ್ರಿಯಾಶೀಲರಾಗಿದ್ದಾರೆ. ಅಂತೆಯೇ ಸೇತು ಮಾಧವರಾವ್ ಪಗಡಿ, ಗೋವಿಂದರಾವ್ ಜೋಶಿ ಅವರುಗಳು ಐತಿಹಾಸಿಕ ಲೇಖನಗಳನ್ನು ಬರೆದಿದ್ದಾರೆ. ಶಿವರಾಮಸ್ವಾಮಿ ಅವರು ಸನ್ನತಿ ಬಗ್ಗೆ ಮರಾಠಿಯಲ್ಲಿ ಪ್ರೌಢ ಅಧ್ಯಯನ ಮಾಡಿದ್ದಾರೆ. ಗುಲಬರ್ಗಾದ ಗೋವಿಂದರಾವ್ ಜೋಶಿ ಕೃಷ್ಣಗೋದಾವರಿ ಪರಿಸರದ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಚಂದ್ರಶೇಖರ ಕಾಪಳೆ ಮರಾಠಿಯಲ್ಲಿ ಕವನ ಸಂಕಲನವೊಂದನ್ನು ತಂದಿದ್ದಾರೆ. ಸಿದ್ದಯ್ಯ ಪುರಾಣಿಕರ ವಚನ ಸಾಹಿತ್ಯವನ್ನು ಮರಾಠಿಯಲ್ಲಿ ಅನುವಾದಿಸಿದ್ದಾರೆ. ವೆಂಕಟೇಶ್ ವಳಸಂಗಕರ್ ನೂತನ ವಿದ್ಯಾಲಯ ಮೂಲಕ ಮರಾಠಿ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿದರಲ್ಲದೆ ಲೇಖನಗಳನ್ನು ಬರೆದಿದ್ದಾರೆ. ಡಿ. ಆರ್. ಪುರಂದರೆ ಅವರು ಒಂದು ಕಥಾ ಸಂಕಲನ ಹೊರ ತಂದಿದ್ದಾರೆ. ಕೇಶವರಾವ್ ಮಹಾಗಾಂವ್‌ಕರ್ ಅವರು ಯಶವಂತ ಚಿತ್ತಾಲರ 'ಶಿಕಾರಿ'ಯನ್ನು ಮರಾಠಿಗೆ ಅನುವಾದಿಸಿದ್ದಾರೆ. ಇದಲ್ಲದೆ ವಂದನಾ ಕಿಣಿಕರ್, ಕಮಲಾಬಾಯಿ ಜೇವರ್ಗಿಕರ್, ಇಂದಿರಾಬಾಯಿ ದೇವಳಗಾಂವಕರ್, ಮುಂತಾದವರು ಮರಾಠಿಯಲ್ಲಿ ಬರೆದಿದ್ದಾರೆ. ಅಫಜಲಪುರದ ಹರಿಹರರಾವ್ ಮೊಹರೇರ ಅವರು ಸುಮಾರು ಇಪ್ಪತ್ತು ಲೇಖನಗಳನ್ನು ಬರೆದಿದ್ದಾರೆ. ದೇವಲಗಾಣಗಾಪುರದ ಬಗ್ಗೆ ಕೃಷ್ಣಾಭಟ್ ಪೂಜಾರಿ ಅವರು ಮರಾಠಿಯಲ್ಲಿ ಬರೆದಿದ್ದಾರೆ.

ಈ ಭಾಗದಲ್ಲಿ ಜನಸೇವೆಯೊಂದಿಗೆ ಮರಾಠಿ ಕೆಲಸವನ್ನು ವಿಶೇಷವಾಗಿ ಮರಾಠಿ ಕನ್ನಡ ಬಾಂಧವ್ಯ ಹೆಚ್ಚಿಸಿದವರೆಂದರೆ ಭಾವುರಾವ್ ದೇವಳಗಾಂವಕರ್ (೧೯೧೭) ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದ ಅವರು ಮರಾಠಿ ಭಾಷೆಯ ಉಪನ್ಯಾಸಕರು ಆಗಿದ್ದರು. ಮಾಸ್ತಿ, ಆನಂದ, ಸದಾಶಿವ, ಅನಂತಮೂರ್ತಿ ಮುಂತಾದವರ ಹಲವಾರು ಸಣ್ಣ ಕಥೆಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ಮರಾಠಿಯಿಂದ ಅನುವಾದಿಸಿದ ಕನ್ನಡ ಕಥೆಗಳನ್ನು 'ಕನ್ನಡ ಕಥಾ ಸೌಗಂಧ' ಎಂಬ ಹೆಸರಿನಲ್ಲಿ ಹೊರ ತಂದಿದ್ದಾರೆ. ಸ್ವಾಮಿ ರಾಮಾನಂದ ತೀರ್ಥರ ಸ್ಮರಣೆಗಳಲ್ಲದೆ ಹಲವಾರು ಸಾಹಿತ್ಯ ಕೃತಿಗಳು ಮರಾಠಿಯಲ್ಲಿ ಬಂದಿದೆ. ಮಕ್ಕಳಿಗಾಗಿ ಮರಾಠಿ ಪಠ್ಯ ಪುಸ್ತಕವನ್ನು ಸಹ ರಚಿಸಿದ್ದಾರೆ. ಗುಲಬರ್ಗಾದಲ್ಲಿ ೧೯೭೮ರಲ್ಲಿ ಮರಾಠಿ ಸಾಹಿತ್ಯ ಮಹಾಮಂಡಲ ಆರಂಭವಾಗಿದ್ದು ಕರ್ನಾಟಕ ರಾಜ್ಯ ಮರಾಠಿ ಸಾಹಿತ್ಯ ಪರಿಷತ್ ಅದರ ಸೋದರ ಸಂಸ್ಥೆಯಾಗಿದ್ದು ಅದರ ಮೂಲಕ ಹಲವಾರು ಸಮ್ಮೇಳನಗಳನ್ನು ನಿಯೋಜಿಸಿದ್ದಾರೆ.

ಕನ್ನಡ ಮರಾಠಿಯ ಪರಸ್ಪರ ಸಹ ಸಂಬಂಧ ಕುರಿತಂತೆ ಆಗಾಗ್ಗೆ ಇಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆ. ಉಭಯ ಭಾಷೆಯ ಕವಿ ಸಮ್ಮೇಳನಗಳು ನೆರವೇರಿದೆ. ಮಂಡಳಿಗೆ ಗದಗ, ಹುಬ್ಬಳ್ಳಿ, ಬೆಳಗಾವಿ, ಬೀದರ್, ಭಾಲ್ಕಿ ಇತ್ಯಾದಿ ಕಡೆಗಳಲ್ಲಿರುವ ಸುಮಾರು ಎಂಟು ಮರಾಠ ಸಾಹಿತ್ಯ ಸಂಘ, ಸಂಸ್ಥೆಗಳು ಸಂಲಗ್ನವಾಗಿವೆ. (ಅಫಿಲಿಯೇಟ್), ಮಂಡಳಿಯು ಕಳೆದ ಹದಿನೇಳು ವರ್ಷಗಳಿಂದ 'ಅನುಬಂಧ' ಎಂಬ ತ್ರೈಮಾಸಿಕ ಸಂಚಿಕೆಯನ್ನು ಮರಾಠಿಯಲ್ಲಿ ಹೊರತರುತ್ತದೆ. ಗುಲಬರ್ಗಾದ ಸ್ಟೇಷನ್ ಬಜಾರ್‌ನಲ್ಲಿ ಮಂಡಳಿಯು ಸುವ್ಯವಸ್ಥಿತ ಕಟ್ಟಡವನ್ನು ಹೊಂದಿರುವುದಲ್ಲದೆ ಗ್ರಂಥಾಲಯ/ವಾಚನಾಲಯಗಳನ್ನು ನಡೆಸುತ್ತಿದೆ.

ಗುಲಬರ್ಗಾ, ವಿ.ವಿ.ಯಲ್ಲಿ ಮರಾಠಿ ವಿಭಾಗವಿದ್ದು ಸ್ನಾತಕೋತ್ತರ ಪದವಿ ಲಭ್ಯವಿದೆ. ವಿಜಯ ತೆಲಂಗ್ ಅವರು ವಿಭಾಗದ ಮುಖ್ಯಸ್ಥರಾಗಿದ್ದು, ಮರಾಠಿ ಕನ್ನಡ ಎರಡೂ ಭಾಷೆಗಳಲ್ಲಿ ಲೇಖನ, ಪುಸ್ತಕಗಳನ್ನು ರಚಿಸಿದ್ದಾರೆ. ಕುಮಾರ ವ್ಯಾಸನ ಉದ್ಯೋಗ ಪರ್ವ ಹಾಗೂ ಅಕ್ಕಮಹಾದೇವಿಯ ವಚನಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ವಿಭಾಗದಲ್ಲಿ ಕನ್ನಡ-ಮರಾಠಿ ಬರಹಗಳ ಬಗ್ಗೆ ತೌಲನಿಕ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಶರಣ ಬಸಪ್ಪ ಅಪ್ಪ ಅವರು ರಚಿಸಿದ 'ದಾಸೋಹ ಸೂತ್ರ'ವನ್ನು ವಿಜಯ ತೆಲಂಗ್ ಹಾಗೂ ಪಂಡಿತ ಅವಳಿಕರ್ ಅವರು ಮರಾಠಿಗೆ ತರ್ಜುಮೆ ಮಾಡಿದ್ದು ಧ್ವನಿಸುರಳಿಯ ರೂಪದಲ್ಲಿ ಪ್ರಕಟವಾಗಿದೆ.

**ಪರ್ಶಿಯನ್ ಮತ್ತು ಉರ್ದು ಸಾಹಿತ್ಯ**

ಗುಲಬರ್ಗಾವನ್ನು ಕೇಂದ್ರವಾಗಿಸಿಕೊಂಡು ರಾಜ್ಯಭಾರ ಆರಂಭಿಸಿದ ಬಹಮನಿಗಳಿಂದ 'ಉರ್ದು' ಭಾಷೆ ರೂಪುಗೊಂಡಿತೆಂದೂ ಇದರ ಮೂಲ 'ರೇಖ್ತಾ' ಎಂದೂ ಅಭಿಪ್ರಾಯವಿದೆ. ಅರಬ್ಬಿ, ಕನ್ನಡ ಹಾಗೂ ಮರಾಠಿ ಪದಗಳ ಫಾರ್ಸಿ ಉಚ್ಚಾರದಿಂದ 'ರೇಖ್ತಾ' ಬಳಕೆಗೆ ಬಂತು ಎಂದು ಅಮೀನಾ ಖಾತೂನ್ ಫಜ್ಲುಲ್ ಹಸನ್ ಅವರು ಪ್ರತಿಪಾದಿಸುತ್ತಾರೆ. ಮೂಲ ಪರ್ಶಿಯನ್ ಅಥವಾ ಅರಬ್ಬಿ ಭಾಷೆಗಳು ಸ್ಥಳೀಯ ಭಾಷಾ ಸಂಪರ್ಕ ಹೊಂದಿ ದಖ್ಖಿನಿ, ಉರ್ದು ಇತ್ಯಾದಿ ರೂಪ ಪಡೆದುಕೊಂಡಿದೆ.. ಹಸನ್ ಗಂಗು ೧೩೪೭ರಲ್ಲಿ ಬಹಮನಿ ರಾಜ್ಯ ಸ್ಥಾಪಿಸಿದಾಗಲೇ ಆತನ ಆಸ್ಥಾನದಲ್ಲಿ ಹಲವಾರು ವಿದ್ವಾಂಸರು ಇದ್ದಂತೆ ತಿಳಿದು ಬರುತ್ತದೆ. ನಂತರದ ಒಂದನೇ ಮೊಹಮ್ಮದ್‌ನ (೧೩೫೮-೭೫) ಕಾಲದಲ್ಲಿದ್ದ ಸೈಪುದ್ದೀನ್ ಗೊರಿ 'ನಾಸೆ ಹುಲ್ ಮುಲ್ಕ್' ಎಂಬ ಗ್ರಂಥ ಬರೆದಿದ್ದಲ್ಲದೆ ಮೊಹಮ್ಮದ್‌ನ ಆಸ್ಥಾನದಲ್ಲಿ ಇನ್ನೂ ಹಲವಾರು ವಿದ್ವಾಂಸರಿದ್ದರು.

ಮಹಮ್ಮದೀಯ ಧಾರ್ಮಿಕ ಗ್ರಂಥ ರಚನೆಯ ಮೂಲಕ ಸಾಹಿತ್ಯಕ್ಕೆ ಹೊಸ ತಿರವು ನೀಡಿದವರೆಂದರೆ ಖ್ವಾಜಾ ಬಂದೇ ನವಾಜ್ ಅವರು ಮೂಲತ ಪರ್ಶಿಯಾದವರಾಗಿದ್ದು ಮೊಹಮ್ಮದ್ ಪೈಗಂಬರರ ನೇರ ಪೀಳಿಗೆಯಲ್ಲಿ ೧೩೨೧ರಲ್ಲಿ ಜನಿಸಿ ದೆಹಲಿಯಲ್ಲಿ ನೆಲಸಿ ಮೊಹಮ್ಮದ್ ಬಿನ್ ತೊಗಲಕ್‌ನೊಂದಿಗೆ ರಾಜಧಾನಿಗಳನ್ನು ಬದಲಿಸಿ, ದೆಹಲಿಯಲ್ಲಿ ವಿದ್ಯಾ ಪಾರಂಗತರಾಗಿ ಮತ್ತೆ ಇಳಿವಯಸ್ಸಿನಲ್ಲಿ ದೌಲತಾಬಾದಿಗೆ (ದೇವಗಿರಿ) ಬಂದು ಬಹಮನಿ ಅರಸ ಫೈರೋಜ್ ಶಾಹನ (೧೩೯೭-೧೪೨೨) ಆಹ್ವಾನದ ಮೇರೆಗೆ ಗುಲಬರ್ಗಾದಲ್ಲಿ ೧೪೦೦ರ ವೇಳೆಯಲ್ಲಿ ನೆಲೆಸಿದರು. ನೂರಕ್ಕೂ ಹೆಚ್ಚು ಗ್ರಂಥ ರಚನೆ ಮಾಡಿ, ಅಪಾರ ಜನಾದರ ಗಳಿಸಿ ನವೆಂಬರ್ ೧೪೨೨ರಲ್ಲಿ ನಿಧನರಾಗಿದ್ದು ಅವರ ಸಮಾಧಿ ಹಿಂದು-ಮುಸ್ಲಿಂ ಇಬ್ಬರಿಗೂ ಗೌರವಯುತವಾದ ಸ್ಥಾನವಾಗಿದೆ. ಇಹದಲ್ಲಿದ್ದು ಪರದ ಸೌಭಾಗ್ಯ ಪಡೆಯುವ ಸನ್ಮಾರ್ಗದ ಏಣಿ ಎನಿಸಿರುವ ಗ್ರಂಥ 'ಮೆ ರಾಜುಲ್ ಆಶಿಕಿನ್', ಸರ್ವಧರ್ಮಗಳ ಸಹಿಷ್ಣುತೆ ಸ್ನೇಹಭಾವ ಬೋಧಿಸುವ 'ಜವಾಮೆ ಉಲ್-ಕಲಿಮ' ಮಾನವ ಹಾಗೂ ಭಗವಂತನ ಸಂಬಂಧ ಕುರಿತ 'ಮಕ್ತೂಬಾತ್' ಅವರ ಪದ್ಯ ಗ್ರಂಥಗಳಲ್ಲಿ ಶ್ರೇಷ್ಠ ಎನಿಸಿರುವ ದೀವಾನ್ (ಅನೀಸುಲ್ ಉಷ್ಷಾಖ್) ಮತ್ತು ಷಿಕಾರ್‌ನಾಮ, ಅನುವಾದಿತ ಗ್ರಂಥವಾದ ರಿಸಾಲೆ ಹುಕ್ಷೇರಿಯಾಗಳಲ್ಲದೆ ಅದಾಬುಲ್ ಮುರೀದೀನ, ಅಸ್‌ಅರುಲ್ ಅಸ್‌ರಾರ್, ಖಿಲಾಫತ್ ನಾಮ, ಖಾತಿದು, ಚಿಕ್ಕಿನಾಮ, ಮಕ್ತುಬಾತ್ ತಿಲಾವತುಲ್ ವಜೂದ್ ಇತ್ಯಾದಿಗಳು ಪ್ರಮುಖವಾಗಿವೆ.

'ಮೆ ರಾಜುಲ್ ಆಶಿಕಿನ್' ಗ್ರಂಥ ಉರ್ದು ಭಾಷೆಯಲ್ಲೇ ಪ್ರಥಮ ಗದ್ಯ ಕೃತಿಯೆಂದು ಅಭಿಪ್ರಾಯವಿದೆ. ಬಂದೇನವಾಜರ ಮೊದಲ ಹೆಸರು 'ಸೈಯದ್ ಮೊಹಮ್ಮದ್ ಆಲ್ ಹುಸೇನಿ' ಎಂದಿದ್ದು ಅಹಮದ್ ಶಹ ಬೀದರ್‌ಗೆ ತನ್ನ ರಾಜಧಾನಿಯನ್ನು ೧೪೨೪ರಲ್ಲಿ ಬದಲಾಯಿಸಿದಾಗ ಅದರ ಹೆಸರನ್ನು ಮೊಹಮ್ಮದಾಬಾದ್ ಎಂದು ಬದಲಿಸಿದ್ದು

ಬಂದೇ ನವಾಜರ ಗೌರವಾರ್ಥವಾಗಿ ಎಂದು ತಿಳಿಯಲಾಗಿದೆ. ಗೇಸೂದರಾಜ್ ಬಂದಾನವಾಜರ ಕೃತಿಗಳನ್ನು ಅಭ್ಯಸಿಸಿರುವ ಸೈಯದ್ ಶಹ ಖುಸ್ರೊ ಹುಸೇನಿ ಅವರು ಕೃತಿಗಳನ್ನು ವ್ಯಾಖ್ಯಾನಗಳು, ಸ್ವಂತ ವಿಚಾರಧಾರೆಗಳು, ಸಾಹಿತ್ಯಾತ್ಮಕ ಕೃತಿಗಳು ಹಾಗೂ ಇತರ ವರ್ಗದವೆಂದು ವರ್ಗೀಕರಿಸಿ ಕೃತಿಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಬಂದಾನವಾಜರ ಸಮಾಧಿ ಇರುವ ಸಂಕೀರ್ಣದಲ್ಲಿ ಅವರ ಹೆಸರಿನಲ್ಲಿ ಸಂಶೋಧನಾ ಅಕಾಡಮಿಯೊಂದು ಇದ್ದು ನವಾಜರ ಕೃತಿ, ಸಂಗೀತ, ಜೀವನಗಳ ಬಗ್ಗೆ ಆಗಾಗ್ಗೆ ವಿಚಾರ ಸಂಕಿರಣ, ಸಂಗೀತ ಸೇವೆ (ಸಮ) ಏರ್ಪಡಿಸುವುದಲ್ಲದೆ ಹಲವಾರು ಪುಸ್ತಕ, ಕೈಪಿಡಿಗಳ ಪ್ರಕಟಣೆ ಸಹ ಮಾಡಿದೆ.

ಬಹಮನಿ ಅರಸರಲ್ಲಿ ಬಂದೇ ನವಾಜರ ಕಾಲದ ಇನ್ನಿತರ ಪ್ರಸಿದ್ಧ ಕವಿಗಳೆಂದರೆ ಷೇಕ್ ಅಲಾವುದ್ದೀನ್ ಅಲಿ, ಅಲ್ಲಾಮ ಅಬ್ದುಲ್ ಅಜೀಜ್, ಷೇಕ್ ಅಲೀಮೊದ್ದೀನ್ ಗಂಜೆ ಉಲೂಮ್ ಜುನ್ನೆದಿ, ಷೇಕ್ ಸಿರಾಜುದ್ದೀನ್ ಜುನ್ನೆದಿ, ಮೀರ್ ಫಜಲುಲ್ಲಾ ಇಂಜು, ಹಾಗೂ ಮುಲ್ಲಾ ಜಲಾಲುದ್ದೀನ್ ದವಾನಿ. ಬಹಮನಿಗಳು ಮಂತ್ರಿಯಾಗಿದ್ದ ಪ್ರಸಿದ್ಧ ಮಹಮೂದ್ ಗಾವಾನ್ ಸ್ವತಃ ಕವಿಯೂ ಆಗಿದ್ದ, ಆತನ ಪತ್ರಗಳ ಸಂಗ್ರಹ 'ಕೌಜತುಲ್ ಇನ್‌ಷಾ' ಹಾಗೂ ಪ್ರಬಂಧಗಳ ಸಂಕಲನ 'ದಿವಾನ್-ಇ-ಲಿಷರ್' ಗಮನಾರ್ಹ ಪರ್ಶಿಯನ್ ಗ್ರಂಥಗಳು. ಗಾವಾನನು ಬೀದರ್‌ನಲ್ಲಿ ಮಹಾವಿದ್ಯಾಲಯ (ಮದರಸ) ಸ್ಥಾಪಿಸಿ ದೇಶ ವಿದೇಶದ ವಿದ್ವಾಂಸರನ್ನು ಆಹ್ವಾನಿಸಿದ್ದ.

ಅಹಮದ್ ಶಾಹಾನ ಕಾಲದಲ್ಲಿ ಈಜಿಪ್ಟ್‌ನಿಂದ ಬಂದ ಅಬೀ ಬಕರ್ ಬಿನ್ ಒಮರ್ ಅಲ್ ಮಹರೂಮೀ ಇದ್ದಮಾನಿ ಆಸ್ಥಾನಕ್ಕೆ ಸೇರಿಕೊಂಡಿದ್ದು ವ್ಯಾಕರಣ ಗ್ರಂಥವೊಂದನ್ನು ಬರೆದು ರಾಜನಿಗೆ ಅರ್ಪಿಸಿದ. ಷೇಕ್ ಆಜರಿ ಎಂಬಾತ ಬಹಮನಿ ರಾಜವಂಶಾವಳಿಯನ್ನು ಕುರಿತು ಪದ್ಯ ರೂಪದಲ್ಲಿ 'ಬಹಮನ್ ನಾಮ' ಎಂಬ ಗ್ರಂಥ ರಚಿಸಿದ. ಫಕ್ರುದ್ದೀನ್ ನಿಜಾಮಿ ಕಥನ ಗೀತ ರೂಪದಲ್ಲಿ 'ಕದಂ ರಾವ್ ಪದಂ ರಾವ್' ಬರೆದ.

ಬಹಮನಿ ರಾಜ್ಯ ಬೀದರ್‌ಗೆ ವರ್ಗಾವಾದ ಮೇಲೆ ಸ್ಥಳೀಯವಾಗಿದ್ದ ಆಸಿಫ್ ಜಾಹಿ ಮನೆತನದವರೂ ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ ನೀಡಿದರು. ನಾಲ್ಕನೇ ನಿಜಾಂ ಮೀರ್ ಮಹಬೂಬ್ ಅಲಿ ಖಾನ್‌ನ ಕಾಲದಲ್ಲಿ ಉರ್ದು ಆಸ್ಥಾನ ಹಾಗೂ ಶಿಕ್ಷಣದ ಭಾಷೆಯಾಯಿತು. ಮುಂದೆ ಉನ್ನತ ಶಿಕ್ಷಣಕ್ಕೂ ಉರ್ದು ಪ್ರವೇಶಿಸಿತು. ಮೀರ್ ಉಸ್ಮಾನ್ ಅಲಿ ಖಾನ್ ೧೯೧೯ರಲ್ಲಿ ವಿಶ್ವವಿದ್ಯಾಲಯ ಸ್ಥಾಪಿಸಿ (ಅದರ ಆಶ್ರಯದಲ್ಲಿ) ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಪ್ರೌಢ ವಿದ್ಯಾಭ್ಯಾಸ ಉರ್ದುವಿನಲ್ಲಿ ನಡೆಯುವಂತಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ವಾರ್ಷಿಕವಾಗಿ ಪವಿತ್ರ ದಿನದಂದು 'ಮುಶಾಯಿರ' (ಕವಿ ಸಮ್ಮೇಳನ)ಗಳು ನಡೆಯುತ್ತಿದ್ದು ಗುಲಾಂ ರಸೂಲ್ ಶಫಿ ಗುಲಬರ್ಗಾ ಮುಂತಾದ ಅನೇಕರು ಭಾಗವಹಿಸುತ್ತಿದ್ದರು. ಅಬ್ದುಲ್ ರಹೀಂ ಫಜಲ್, ಷೋರ್ ಅಬಿದಿ ಮುಂತಾದ ಹಲವರ ಪ್ರಯತ್ನದಿಂದಾಗಿ ೧೯೪೪ರಲ್ಲಿ 'ಗುಲಬರ್ಗಾ ಕ್ಲಬ್' ಜನ್ಮ ತಾಳಿತು. ಇದೊಂದು ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿದ್ದು ಹೊರರಾಜ್ಯಗಳೊಂದಿಗೆ ಮುಶಾಯೆ ಕಾರ್ಯಕ್ರಮ ವಿನಿಮಯವಾಗುತ್ತಿತ್ತು. ಖ್ಯಾತ ಕವಿ ಸುಲೇಮಾನ್ ಖತೀಬ್ ಈ ಸಂಘಟನೆಯೊಂದಿಗೆ ಸಂಬಂಧವಿರಿಸಿಕೊಂಡಿದ್ದರು. ಶ್ರೀಮತಿ ಫತಿ ಹುಲ್ಲಾ ಬೇಗ್ ಅವರು ಮಹಿಳೆಯರಿಗಾಗಿ 'ಲೇಡೀಸ್ ಕ್ಲಬ್' ಒಂದನ್ನು ಸಂಘಟಿಸಿದರು. ದೈನಂದಿನ ಚಟುವಟಿಕೆಗಳು ಆಟ-ಪಾಠಗಳ ಸೌಕರ್ಯ ಸಹ ಕಲ್ಪಿಸಿದ್ದರು. ಅಬ್ದುಲ್ ಖಾದರ್ ಅದೀಬ್, ಎಸ್. ಇಬ್ರಾಹಿಂ ಮಾಮಾನ್ ಅವರುಗಳು ಬಜ್ಮೆ-ಅದಬೆ--ಉರ್ದು ಎಂಬ ಯುವ ಸಂಘಟನೆಯನ್ನು ಸ್ಥಾಪಿಸಿದರು. ಹಾಗೂ 'ಕಿದಮ್ತ್' ಎಂಬ ಮಾಸಿಕ ಪತ್ರಿಕೆ ಹೊರತಂದರು. ದರ್ಗಾ ಶರೀಫ್‌ನಿಂದ 'ಶಹಬಾಜ್' ಎಂಬ ಮಾಸಿಕ ಲಯೀಕ್ ಅಹಮದ್ ನೊಮಾನಿ ಅವರ ಸಂಪಾದಕತ್ವದಲ್ಲಿ ಹೊರಬರುತ್ತಿತ್ತು. ಸ್ವಾತಂತ್ರ್ಯಾ ನಂತರ ೧೯೫೭ರಲ್ಲಿ ದೊಡ್ಡ ಪ್ರಮಾಣದಲ್ಲಿ ಕವಿ ಸಮ್ಮೇಳನವೊಂದು ಜರುಗಿದ್ದು ಖ್ಯಾತ ಕವಿಗಳಾದ ಕೈಫಿ ಆಜಮಿ, ಜಗನಾಥ ಆಜಾದ್, ಮಜರೂಹ್ ಸುಲ್ತಾನ್‌ಪುರಿ ಅವರುಗಳು ಪಾಲುಗೊಂಡಿದ್ದರು. ೧೯೫೮ರಲ್ಲಿಯೂ ಈ ಬಗೆಯ ಕಾರ್ಯಕ್ರಮ ವಿವಿಧ ಪ್ರದೇಶಗಳಲ್ಲಿ ನಡೆಯಿತು.

ಜಿಲ್ಲೆಯ ಸಾಹಿತಿಗಳಲ್ಲಿ 'ಚಾಲೀಸ್-ಕರೋಡ್ ಭಿಕಾರಿ' 'ತಿಕೋನ ದಾಸ್', 'ಚೋರ್ ಬಜಾರ್', 'ದೋ ಮುಲ್ಕ್ ಎಕ್ ಕಹಾನಿ' ಇತ್ಯಾದಿಗಳು ಇಬ್ರಾಹಿಂ ಜಲೀಸ್ ಅವರದಾಗಿದ್ದು ಅವರೊಬ್ಬ ಕತೆಗಾರ, ಹಾಸ್ಯ ಲೇಖಕ ಹಾಗೂ ಪತ್ರಿಕೋದ್ಯಮಿ. ಸಾಂಪ್ರದಾಯಿಕ ಶೈಲಿಯಲ್ಲಿ ರಚನೆ ಮಾಡುವ ಸೊರೂರ್ ಮಿರ್ಜಾಯಿ ಅವರು 'ಲಮ್

ಅತೊ ಜುಲ್ಮಾತ್', 'ಸಜಾದ್ ನಾಮ', 'ಹರ್ ರಂಗ್' ಇತ್ಯಾದಿ ಕೃತಿ ರಚಿಸಿದ್ದು ಶ್ರೀಯುತರು ಹಿಂದಿ, ಮರಾಠಿ, ಪರ್ಶಿಯನ್, ದಖ್ಖನಿ ಭಾಷೆಗಳಲ್ಲೂ ವಿದ್ವಾಂಸರಾಗಿದ್ದಾರೆ.

ಕಾವ್ಯ ರಚನಕಾರರಾದ ಮುಕ್ತಾರ್ ಹಾಶ್ಮಿ ಅವರ ಶೋಲ-ಎ-ರಖ್ಸಾನ್, 'ತಾಬೋ ತಾಬ್'ಗಳು, ಹಜರತ್ ತಾಬ್ ಅವರ 'ಶಬೇ ತಾಬ್', ಹಜರತ್ ಚಾಲ್ಕ್ ಅವರ 'ಬರೆಯುತ್-ಎ-ಚಾಕ್', ಸುಲೈಮಾ ಖತೀಬ್ ಅವರ 'ಕೇವಡೆ ಕಾ ಬಂದ್', ಅಬ್ದುಲ್ ಬಾಕೀ ರಂಗೀನ್ ಅವರ 'ಯಾದೆ-ಸದ್ ಬರ್ಗ್', ಬಡೆ ಸಜ್ಜ ಬರ್ದ್, ಯಾದೆ ಗುಲಬರ್ಗಾ ಮತ್ತು 'ಗುಲ್ ರಂಗ್' ಗಳು ಹಮೀದ್ ಅಲ್ಮಾಸ್ ಅವರ 'ಪಹಚಾನ್ ಕಾ ದರ್ದ್' ಜೂಯೆ ಸಬ್ 'ಶಬ ಗರ್ದ್' ಇತ್ಯಾದಿಗಳನ್ನು ಉದಾಹರಿಸಬಹುದು.

೧೯೫೫ರಲ್ಲಿ 'ಗುಲಬರ್ಗಾ' ಎಂಬ ಉರ್ದು ಮಾಸ ಪತ್ರಿಕೆ ಆರಂಭವಾಗಿ ನಾಲ್ಕು ತಿಂಗಳ ನಂತರ ವಾರಪತ್ರಿಕೆಯಾಗಿ ಮುಂದುವರಿಯಿತು. ೧೯೫೮ರವರೆಗೆ ಜೀವಂತವಿದ್ದು ಈ ಪತ್ರಿಕೆಗೆ ಉರ್ದು ಬಲ್ಲ ಮುಸ್ಲಿಂಮೇತರರೂ ಲೇಖನ ಬರೆಯುತ್ತಿದ್ದರು.

ಅಬ್ದುಲ್ ಖಾದರ್ ಅದೀಬ್ ಅವರು ಕವಿ ಹಾಗೂ ಪ್ರಬಂಧ ರಚನಕಾರರು. ಅವರ ಪ್ರಬಂಧ ಸಂಕಲನಗಳೆಂದರೆ 'ಸುನ್-ಸೋ-ಸಹಿ' ನಕ್ಕಾರ್-ಕಾನೆ-ಮೆ ಹಾಗೂ 'ಅವಾಜ್ ಕಸಾಯ' ಮತ್ತು 'ಬೃಂದಾವನ್' ಪದ್ಯ ಸಂಕಲನಗಳು.

ಅಬ್ದುಲ್ ರಹೀಮ್ ಆರ್ಜೂ ಅವರು 'ಇಜಾರೆ ಆರ್ಜೊ' ಎಂಬ ಪದ್ಯ ಸಂಕಲನ ತಂದಿರುವರಲ್ಲದೆ ಉರ್ದು ಅಕಾಡಮಿಯ ಪತ್ರಿಕೆ 'ತಹಜೇಬೆ ಅದಬ್'ನ ಸಂಪಾದಕರಾಗಿದ್ದರು. ಮೊಹಮ್ಮದ್ ಕಮರುದ್ದೀನ್ ಅನ್‌ಸಾರಿ ಅವರು 'ಸರ್‌ಗುಜೈಷೆ ಕಮರ್' ಹಾಗೂ ಹಫೀಸ್ ಎ ರಶೀದ್ ಅವರ 'ನವ-ಎ-ರಶೀದ್'ಗಳು ಪದ್ಯ ಸಂಕಲನಗಳು. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ರಾಹಿ ಕುರೇಶಿ ಅವರು 'ಸೆಹರಾ ಕಾ ಸಫರ್', ಜಮೀರೆ ಶಬ್', 'ದೀದಯೆಬೇ ಖ್ವಾಬ್', 'ಅಕ್ಸ್‌ಕಿ ಹಜ್ರತ್' ಹಾಗೂ 'ಚಾರ್‌ಸೂ' ಎಂಬ ಪದ್ಯ ಸಂಕಲನಗಳನ್ನು ಹೊರ ತಂದಿದ್ದಾರೆ.

ಶಬ್ಬೀರ್ ಶಾಹ್ ಆಬಾದಿ ಅವರು 'ಶರೀಕೆ ವಫಾ', 'ಜಮೀನೆ ನಜಾಕ್' ಪದ್ಯ ಸಂಗ್ರಹ ರಚಿಸಿದ್ದಾರೆ. ಮೊಹಿಬ್ಬ್ ಕೌಸರ್ 'ಅಯೂನ್-ಎ-ತಾಜ' ಪದ್ಯ ಸಂಕಲನ ಪ್ರಕಟಿಸಿರುವುದಲ್ಲದೆ ಡಾ|| ಅಮೀದ್‌ಕರ್ ಅವರ ಬಗ್ಗೆ ವಿವಿಧ ಲೇಖಕರು ರಚಿಸಿದ ಕವಿತಾ ಸಂಗ್ರಹವನ್ನು ತನ್ನಾ ತಿಮ್ಮಾಪುರಿ ಅವರ ನೆರವಿನೊಂದಿಗೆ 'ಸಬೇರ' ಎಂಬ ಹೆಸರಿನಲ್ಲಿ ಹೊರತಂದಿದ್ದಾರೆ. ಖುಮಾರ್ ಖುರೈಶಿ ಅವರು 'ವೈವದ್-ಎ-ಖಾಸ್ತಾ ಬದ್‌ಖಾನ್' ಹಾಗೂ 'ಮೌಸಂ ಹಿಜ್ರತೋನ್‌ಕ' ಬರೆದಿದ್ದಾರೆ. ಏಕೈಕ ಮಹಿಳಾ ಕವಯತ್ರಿ ಎನ್ನಬಹುದಾದ ಸುಗ್ರಾ ಆಲಮ್ ಅವರು 'ಹೈತಯೆ ಸದಫ್' ಹಾಗೂ 'ಬೈತುಲ್ ಹುರೂಫ್' ಎಂಬ ಕವಿತಾ ಸಂಗ್ರಹಗಳ ಕೃತಿಕಾರರಾಗಿದ್ದಾರೆ.

ಖಾಲಿದ್ ಸಯೀದ್ ಅವರ ಪದ್ಯ ಸಂಕಲನದ ಹೆಸರು 'ಶಬ್ ರಂಗೆ ನಮಾ' ಎಂದು. ಹಕೀಂ ಶಾಕೀರ್ ಅವರು ಕವಿ ಹಾಗೂ 'ಸಲಾಮತಿ ಡೈಲಿ' ಪತ್ರಿಕೆಯ ಸಂಪಾದಕರೂ ಆಗಿದ್ದಾರೆ. 'ತಾಶ್ಚಿ' ಪದ್ಯ ಸಂಕಲನದ ರಚನಕಾರರಾದ ಹಾಮಿದ್ ಅಕ್ಮಲ್ ಅವರು 'ಈಕಾನ್' ಎಂಬ ಪತ್ರಿಕೆಯನ್ನು ಸಂಪಾದಿಸುತ್ತಿದ್ದಾರೆ. ೧೯೮೪ರಲ್ಲಿ ಅಜೀಜುಲ್ಲ ಸರಮಸ್ತ್ ಅವರು 'ಬಹಮನಿ ನ್ಯೂಸ್' ಎಂಬ ದಿನಪತ್ರಿಕೆಯನ್ನು ಮೊಹಮ್ಮದ್ ಅಜ್ಮತ್ ಅವರು 'ಅಕಲ್' ಎಂಬ ವಾರ ಪತ್ರಿಕೆಯನ್ನು ಹೊರತಂದರು.

ಸಣ್ಣ ಕಥೆಗಳ ಕಥೆಗಾರರಲ್ಲಿ ಇಕ್ರಾಮ್ ಬಾಗ್ ಅವರ 'ಕೂಚ್' ಹಮೀದ್ ಸಹೆ ವರ್ದಿ ಅವರ 'ರೇತ್ ರೇತ್ ಲಫ್ಜ್', 'ಅಕ್ಸ್ ಕ ದರ್ವಾಜ'ಗಳು, ಜಲೀಲ್ ತನ್ವೀರ್ ಅವರ 'ಹಿಸಾರ್' ವಹೀದ್ ಅಂಜುಮ್ ಅವರ 'ಕಡೀ ಧೂಪ್ ಕ ಸಫರ್' ಹಾಗೂ ಯುವ ಬರಹಗಾರ ಕೌಸರ್ ಪರ್ವೀನ್ ಅವರ 'ಹಲ್‌ಚಲ್ ಸಿ ಕೊಯಿ' ಮತ್ತು 'ಬನ್‌ಬಾಸ್'ಗಳನ್ನು ಉದಾಹರಿಸಬಹುದು. 'ತಾಬಿರಾತ್' ಎಂಬ ವಿಮರ್ಶಾ ಲೇಖನಗಳನ್ನು ಹೊರತಂದ ಖಾಲಿದ್ ಸಯೀದ್ ಅವರು 'ಪೇಶ್‌ರಫ್ತ್' ಎಂಬ ಸಂಚಿಕೆಯನ್ನು ಪ್ರಕಟಿಸಿದ್ದಾರೆ.

ವಹಾಬ್ ಅಂದಾಲಿಬ್ ಅವರು 'ಖಾಮತ್ ಓ ಖೀಮತ್' ಮತ್ತು ಘಯಾಸುದ್ದೀನ್ ಸಿದ್ದೀಕಿ 'ಛಾನ್ ಓರ್ ಶಾಕ್ ಸಿಯಾತ್'ಗಳನ್ನು ರಚಿಸಿದ್ದಾರೆ. ಹದಿನೇಳಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ತೈಯಬ್ ಅನ್ಸಾರಿ ಅವರ

ಕೆಲವು ಪುಸ್ತಕಗಳ ಶೀರ್ಷಿಕೆಗಳೆಂದರೆ 'ತಹ್‌ರೀರೊ ತಂಕೀದ್', 'ಇದ್ರಾಕೆ ಮಾನ', 'ಮೇರಾ ಶಹರ್ ಮೇರೆ ಲೋಗ್', 'ಹೈದರಾಬಾದ್ ಮೆ ಉರ್ದು ಸಹಾಫತ್', 'ದಾಸ್ತಾನೆ ಅದಬೆ ಗುಲಬರ್ಗಾ' ಇತ್ಯಾದಿಗಳು. ಕೈಯೂಮ್ ಸಾದಿಕ್ ಅವರ ಗದ್ಯ ಗ್ರಂಥಗಳೆಂದರೆ 'ಬಿಜಾಪೂರ್ ಕಿ ಉರ್ದು', 'ಮುನ್ನದಿಯಾ ದಖ್ಖನಿ ಗಾಲಿಬ್ ಮುಲ್ಲಾ ವಜ್ಹಿ' ಇತ್ಯಾದಿಗಳು. ಸಯ್ಯದ್ ಮುಜೀಬುರ್ ರೆಹಮಾನ್ ಅವರ ಪ್ರಬಂಧ ಸಂಕಲನದ ಹೆಸರು 'ಮು ವೇರಾ-ಎ-ಶಊರ್'. ಲಾಯಿಕ್ ಸಲಾಹ್ ಅವರು ಉರ್ದು ಸಾಹಿತ್ಯಕ್ಕೆ ನೀಡಿದ ಕಾಣಿಕೆಗಳೆಂದರೆ ಮೇರಾ ಶಾಮ್ ಸುದ್ದೀನ್ ಫಿಯಾಜ್ ಅರಾಸ್ತು ಜಾಹ್ (ಇಲ್ಮಿ-ಓ-ಅದಬಿ ಕಿದ್ಮಾತ್), ನಕ್ದೊ ಜುಸ್ತ ಜೂ, ಅಕ್ಸ್‌ದರ್ ಅಕ್ಸ್ ಹಾಗೂ ಸುನಿ ಸುನಾಯಿ (ಹಾಸ್ಯ ಲೇಖನಗಳು) ಮುಜ್ತಬಾ ಹುಸೇನ್ ಅವರು ನಗೆ ಬರಹಗಳಲ್ಲಿ ವಿಖ್ಯಾತರಾಗಿದ್ದು ತಕಲ್ಲುಫ್, ಕತ್ತೆ ಕಲಾಮ್ ಬಾಹೆರ್ ಹಾಲ್, ಆದ್ಮಿನಾಮ, ಕಿಸ್ತಾ ಮುಕ್ತಸರ್, ಚಲೋ ಜಪಾನ್ ಚಲೋ ಇತ್ಯಾದಿ ಸಂಗ್ರಹ ಪ್ರಕಟಿಸಿದ್ದಾರೆ. ಮನಜೂರ್ ವಿಕಾರ್ ಅವರು ಹನ್ನಾ, ಮನಾಹೈ ಹಾಗೂ ರಾವೂಫ್ ಖುಶ್ತರ್ ಅವರು ಹಾಸ್ಯಮಯ ಪ್ರಬಂಧ ಗುಬೀರ್-ಎ-ಹಾಜಿರ್‌ನ್ನು ರಚಿಸಿದ್ದಾರೆ ಮಿಲನ್ನಾ ಅತ್‌ಹರ್ ಅಹಮದ್ ಅವರು ಉರ್ದು ಮಸ್ನವಿಯೋನ್ ಮೆ ಮಂಜರ್ ನಿಗಾರಿ ಹಾಗೂ ಹರ್ಫ್ ಇಕ್ತೆಸಾಬ್‌ಗಳನ್ನು ಹಲೀಮಾ ಫಿರ್‌ದೋಸ್ ಅವರು ಮಾಶಾ ಅಲ್ಲಾಹ್ ಎಂಬ ಹಾಸ್ಯ ಲೇಖನಗಳ ಸಂಗ್ರಹವನ್ನು ಹೊರತಂದಿದ್ದಾರೆ. ರಜ್ಜಾಕ್ ಫರೂಕಿ ಅವರ ಅವಧ್ ಪಂಚ್ ಹಾಗೂ ಅಬುಲ್ ಕಲಾಮ್ ಆಜಾದ್ ಕಿ ತಾಲೀಮಾತ್‌ಗಳನ್ನು ಬರೆದಿದ್ದಾರೆ. ಶಾಹೀನ್ ಪದ್ಯ ಸಂಗ್ರಹ ಎಜಾಜ್ ಮುಸಲ್ಬುರ್ ಅವರ ಕೃತಿಯಾಗಿದೆ.

ಉರ್ದು ಸಾಹಿತ್ಯದೊಂದಿಗೆ ಮುಷಾಯೆರಾಗಳು ಒಂದು ಅಂಗದಂತಿರುತ್ತವೆ. ಜಿಲ್ಲೆಯಲ್ಲಿ ಹಲವಾರು ಈ ಬಗೆಯ ಮುಷಾಯೆರಾ ತಂಡಗಳು ಇವೆ. ಕವಿ ಸಮ್ಮೇಳನದಂತೆ ಇವು ಆಗಾಗ್ಗೆ ಸಂಘಟಿಸಿ ಗದ್ಯ-ಪದ್ಯಗಳಲ್ಲಿ ತಮ್ಮ ಪ್ರತಿಭೆಯನ್ನು ಪ್ರಕಾಶಿಸುತ್ತಾರೆ. ಪ್ರತಿಯೊಂದು ತಂಡದೊಂದಿಗೂ ಅವರದೇ ಆದ ಕವಿಗಳ ಗುಂಪು ಇರುತ್ತದೆ. ಇವುಗಳ ಪೈಕಿ ಗುಲಬರ್ಗಾದ ಅಂಜುಮನೆ ತರಕ್ಕಿ ಉರ್ದು ಹಿಂದ್ ಕಾಮಿಡಿ ಮುಷಾಯಿರಾ ಬಾನುರ್-ರಿಯಾಸತ್ ಮುಷಾಯಿರಾ, ಬಜಾಮ್ ಮೊಬ್ಬನ್ ಉರ್ದು ಸಾಲಮತಿ ಲಿಟರರಿ ಫೋರಮ್ ಫರಾನ್-ಕ-ಸಲಾನ ಮುಷಾಯಿರಾ, ಹೈದರಾಬಾದ್ ಕರ್ನಾಟಕ ಉರ್ದು ಫ್ರೆಂಟ್ ಬಜ್ಮೆ ಖ್ವಾತೀನ್ ಬೈನುರ್ ರಿಯಾಸತೀ ಮುಷಾಯಿರ ತಿಮಾಪುರಿಯ ಅಂಜುಮನೆ ಅಮೀನೆ ಅದಬ್ ತಿಮ್ಮಾಪುರ್, ಯಾದಗಿರಿಯ ಬಾಜಮ-ಎ-ಧಾಲ ಕಲಾಮ್ ಇತ್ಯಾದಿಗಳನ್ನು ಉದಾಹರಿಸಬಹುದು. ಇವುಗಳೆಲ್ಲ ೧೯೬೦ರಿಂದ ೬೦ರ ಅವಧಿಯಲ್ಲಿ ರೂಪುಗೊಂಡಿರುವವು.

**ಹಿಂದಿ ಸಾಹಿತ್ಯ**

ಗುಲಬರ್ಗಾ ಜಿಲ್ಲೆಯಲ್ಲಿ ಹಿಂದಿಯಲ್ಲಿ ಅಷ್ಟಾಗಿ ರಚನೆ ನಡೆದಂತೆ ಕಂಡು ಬರುವುದಿಲ್ಲ. ಹಿಂದಿ ಮಾತೃಭಾಷೆಯಲ್ಲದ ವಿದ್ವಾಂಸರೇ ಹಿಂದಿಯಲ್ಲಿ ರಚಿಸಿರುವುದು ವಿಶೇಷ. ಜಿಲ್ಲೆಯವರೇ ಆದ ಚಂದ್ರಕಾಂತ ಕುಸನೂರ ಅವರು 'ರೇಶಮ್-ಕೆ-ಗುಡಿಯಾ' ಎಂಬ ಕೃತಿಯನ್ನು ಹೊರ ತಂದಿದ್ದು ಅದಕ್ಕೆ ಹಿಂದಿಯೇತರ ಬರಹಗಾರರ ಹಿಂದಿ ಕೃತಿ ರಚನೆಗೆ ನೀಡುವ ರಾಷ್ಟ್ರೀಯ ಮಟ್ಟದ ರಾಷ್ಟ್ರಪತಿ ಪುರಸ್ಕಾರ ದೊರೆಯಿತು. ಇದಲ್ಲದೆ 'ಮಹಾಪುರುಷ' ಎಂಬ ಹಿಂದಿ ನಾಟಕವನ್ನು ಅವರು ರಚಿಸಿದ್ದಾರೆ. ಕೇಶವರಾವ್ ಮಹಾಗಾಂವ್‌ಕರ್ ಅವರು ಹಲವಾರು ಹಿಂದಿ ನಾಟಕಗಳನ್ನು ರಚಿಸಿರುವರಲ್ಲದೆ 'ಸ್ನೇಹಾಲೋಕ' ಎಂಬ ನಾಟಕವನ್ನು ಬರೆದಿದ್ದಾರೆ. ಸೇನಾಪತಿ ಕಟಕೆಯವರು ತಮ್ಮ ಸಂಕಲನವನ್ನು 'ವಂದನಾ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ಗುರುದಕ್ಷಿಣಾ' ಎಂಬ ಸಂಸ್ಮರಣ ಗ್ರಂಥ ಸಂಪಾದಿಸಿದ್ದಾರೆ. ಈಚೆಗೆ ಅವರ ಮತ್ತೊಂದು ಕವನ ಸಂಕಲನ 'ಅಪರೂಪ' ಬಿಡುಗಡೆಗೊಂಡಿತು.

ಶಿವರಾಜ ಹಳ್ಳಿಖೇಡೆ ಅವರು ಗೋವಿಂದ ಪೈ ಅವರ ಜೀವನ ಚರಿತ್ರೆಯನ್ನು ಹಿಂದಿಯಲ್ಲಿ ಬರೆದಿದ್ದಾರೆ. ಅಲ್ಲದೆ ಧಾರವಾಡ ತಪೋವನದ ಕುಮಾರ ಸ್ವಾಮಿಯವರ 'ವೀರಶೈವ ದರ್ಪಣ' ಹಾಗೂ ಮಲ್ಲೇದೇವರ ಇಂಗ್ಲೀಷ್ ಕೃತಿ 'ಎಸೆನ್ಶಿಯಲ್ಸ್ ಆಫ್ ವೀರಶೈವಿಸಂ' ಕೃತಿಗಳನ್ನು ಹಿಂದಿಯಲ್ಲಿ 'ವೀರಶೈವ ಧರ್ಮ - ಮೂಲಸಿದ್ಧಾಂತ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಪರಿಣಿತರಾಗಿರುವ ಹಲವಾರು ಕೃತಿಗಳನ್ನು ರಚಿಸಿರುವ ಕಾಶಿನಾಥ ಅಂಬಲಗೆಯವರು ಗುಲಬರ್ಗಾ ವಿ. ವಿ. ಯ ಹಿಂದಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಅವರ ಪ್ರೌಢ ಸಂಶೋಧನಾ ಪ್ರಬಂಧ 'ಸಂತೋ ಔರ್ ಶಿವಶರಣೊಂ ಕೆ-ಕಾವ್ಯ-ಮೇ ಸಾಮಾಜಿಕ ಚೇತನ'ವು ಕಾನಪುರದಿಂದ ಪ್ರಕಟವಾಗಿದೆ.

ಲಂಕೇಶರ ಕ್ರಾಂತಿ ಬಂತು ಕ್ರಾಂತಿ, ಸಾರ ಅಬೂಬಕರ್ ಅವರ ಚಂದ್ರಗಿರಿ ತೀರದಲ್ಲಿ ಕಥೆಗಳಲ್ಲದೆ ಜಿ. ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ, ರಂಜಾನದರ್ಗಾ ಅವರ ಕವಿತೆಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಪಂಜಾಬಿ ಅವತರಣಿಕೆಗಾಗಿ ಶಾಂತರಸ, ಚಂದ್ರಶೇಖರ ಪಾಟೀಲ, ಅಲ್ಲಮ ಪ್ರಭು ಬೆಟ್ಟದೂರ, ಶೈಲಜ ಉಡುಚಣ, ಮೊದಲಾದವರ ಕವನಗಳನ್ನು ಹಿಂದಿಗೆ ಅನುವಾದಿಸಿಕೊಟ್ಟಿದ್ದಾರೆ. ಅಂತೆಯೇ ಪಂಜಾಬಿ ಮೂಲಕ ಹಿಂದಿ ಅವತರಣಿಕೆಯ ಸುಮಾರು ೨೦೦ ಮಿನಿ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ 'ಕೋಗಿಲೆ ಅಳುತಿದೆ.' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡಮಿಗಾಗಿ ಸಮಕಾಲೀನ ಪಂಜಾಬಿ ಕಾವ್ಯವನ್ನು ಹಿಂದಿಯಿಂದ ಅನುವಾದಿಸಿ ಕೊಟ್ಟಿದ್ದಾರೆ. ಅಂಬಲಗೆ ಅವರ ಕನ್ನಡ ಕವನಗಳು ಹಿಂದಿಯ ಮೂಲಕ ಪಂಜಾಬಿ ಭಾಷೆಯಲ್ಲೂ ಹಾಗೂ ನೇರವಾಗಿ ಉರ್ದು, ಮರಾಠಿ ಇತ್ಯಾದಿ ಭಾಷೆಗಳಲ್ಲೂ ಪ್ರಕಟವಾಗಿವೆ.

ಬಾಲಚಂದ್ರ ಜಯಶೆಟ್ಟಿ ಅವರು ಕನ್ನಡ ಸಾಹಿತ್ಯವನ್ನು ಹಿಂದಿಗೆ ಅನುವಾದಿಸಿದ ಪ್ರಮುಖರಲ್ಲಿ ಒಬ್ಬರು ಅವರು ಎಸ್.ಎಲ್. ಭೈರಪ್ಪ ಅವರ 'ಅಂಚು' ಕೃಷ್ಣ ಆಲನಹಳ್ಳಿ ಅವರ 'ಪರಸಂಗದ ಗೆಂಡೆತಿಮ್ಮ' ಅಲ್ಲದೆ ವೀಣಾ ಶಾಂತೇಶ್ವರ ಅವರ ಕೆಲವು ಕಥೆಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಮುಖ್ಯವಾಗಿ ತೀ.ನಂ.ಶ್ರೀ ಅವರ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು ಹಿಂದಿಗೆ ಅನುವಾದಿಸಿದ್ದು ಅದಕ್ಕೆ ಕೇಂದ್ರ ಸರ್ಕಾರದ ಪ್ರಶಸ್ತಿಯೂ ಲಭ್ಯವಾಗಿದೆ.

ಬಸವ ತತ್ವ ರತ್ನಾಕರರೆಂದೇ ಹೆಸರು ಪಡೆದ ಶಂಕರರಾವ್ ಕಪ್ಪಿಕೇರಿ ಅವರು ಬಸವಣ್ಣರ ಸಮಗ್ರ ವಚನಗಳನ್ನು ಹಿಂದಿಗೆ ಅನುವಾದಿಸಿ ಪ್ರಕಟಿಸಿದ್ದಾರೆ. 'ಸಮರ್ಪಣ' ಕಾವ್ಯ ರಚಿಸಿದ ಸಂಗಣ್ಣ ಹೊಸಪೇಟೆ, ಪಠ್ಯ ಪುಸ್ತಕ ರಚನಕಾರರಾದ ಹಾಗೂ ಹಿಂದಿ ಭಜನೋಪದೇಶ ಮಾಡಿ 'ಭಜನ ಸಂಗ್ರಹ' ಬರೆದ ಅಮರಸಿಂಹ ರಾಥೋಡ್, ಬಾಲಕವಿತಾ ಸಂಗ್ರಹದ ಗುರುದತ್ತ ಭಾರತಿ, ಮೀರ ಹಾಗೂ ಅಕ್ಕಮಹಾದೇವಿ ಕುರಿತು ಸಮಾಲೋಚನಾತ್ಮಕ ಅಧ್ಯಯನ ಮಾಡಿದ ಗೋವಿಂದಪ್ಪ ಪಾಂಚಾಲ್ ಅವರಲ್ಲದೆ ವಿದ್ಯಾಧರ ಗುರೂಜಿ, ಶೀಲಾ ವೆಂಕಟೇಶ್ವರರಾವ್, ವಿ.ಜಿ. ಕುಲಕರ್ಣಿ ಹಾಗೂ ಸವಿತಾ ದೇವಿ ಗುರೂಜಿ ಮುಂತಾದವರನ್ನು ಹಿಂದಿ ಸಾಹಿತ್ಯ ರಚನಕಾರರೆಂದು ಹೆಸರಿಸಬಹುದು.

**ಇಂಗ್ಲೀಷ್ ಸಾಹಿತ್ಯ**

ಸುರಪುರ ಸಂಸ್ಥಾನವು ಇಂಗ್ಲೀಷರ ವಶವಾದ ಮೇಲೆ ಅವರ ಪ್ರತಿನಿಧಿಯೊಬ್ಬಾತನನ್ನು ಇಲ್ಲಿ ಕಳಿಸುವ ಪ್ರಕ್ರಿಯೆ ಆರಂಭವಾಗಿದ್ದು ಆ ನಂತರವಷ್ಟೆ ಇಂಗ್ಲೀಷ್ ಭಾಷೆ ಜಿಲ್ಲೆಗೆ ಕಾಲಿರಿಸಿದಂತೆ ತೋರುತ್ತದೆ. ಕ್ಯಾಪ್ಟನ್ ಫಿಲಿಪ್ ಮೆಡೋಸ್ ಟೈಲರ್ (೧೮೦೮-೧೮)ನು ಸುರಪುರಕ್ಕೆ ರಾಜಕೀಯ ಪ್ರತಿನಿಧಿಯಾಗಿ ಬಂದವನು ಸ್ವತಃ ಚಿತ್ರ, ಛಾಯಾಚಿತ್ರ ಕಲಾವಿದ ಪ್ರಾಚ್ಯವಸ್ತು ಸಂಶೋಧಕ ಹಾಗೂ ಕವಿ ಹೃದಯನಾದ ಈತ ಗುಲಬರ್ಗಾ ಪ್ರದೇಶದ ಸಾಮಾಜಿಕ ಜೀವನ, ರಾಜಕೀಯ ಇತ್ಯಾದಿಗಳಿಂದ ಪ್ರೇರಿತನಾಗಿ ಹಲವಾರು ಪುಸ್ತಕಗಳನ್ನು ಬರೆದ ೧೮೩೯ರಲ್ಲಿ ಥಗ್‌ನ ಆತ್ಮಕಥನ (ಕನ್ಫೆಶನ್ ಆಫ್ ಎ ಥಗ್). ೧೮೪೦ರಲ್ಲಿ 'ಟೀಪು ಸುಲ್ತಾನ್', ೧೮೬೩ರಲ್ಲಿ 'ತಾರ' ೧೮೬೫ರಲ್ಲಿ 'ರಾಲ್ಫ್ ಡಾರ್ನೆಟ್' ೧೮೬೭ರಲ್ಲಿ ಚಾಂದ್‌ಬೀಬಿಯನ್ನು ಆಧರಿಸಿ 'ನೋಬಲ್ ಕ್ವೀನ್' ಹಾಗೂ ತನ್ನ ಜೀವನ ಆಗು ಹೋಗುಗಳನ್ನು ಕಾಗದ ಪತ್ರ ದಾಖಲೆಗಳ ಮೂಲಕ ಆಧರಿಸಿ ೧೮೭೦ರಲ್ಲಿ 'ನನ್ನ ಜೀವನದ ಕಥೆ' ಬರೆದ. ಅಂತಿಮವಾಗಿ ೧೮೭೨ರಲ್ಲಿ 'ಸೀತಾ' ಬರೆದ. ಆತನ ಬಹುತೇಕ ಎಲ್ಲ ಕಾದಂಬರಿಗಳಲ್ಲಿ ಈ ಪ್ರದೇಶದ ವಾತಾವರಣ ಸಂಗತಿಗಳು ಸಾಮಾಜಿಕ ಸ್ಥಿತಿಗತಿಗಳನ್ನು ಕಾಣಬಹುದು. ಕೆಲವು ಕೃತಿಗಳು ರಾಜಕೀಯ ಘಟನೆಗಳನ್ನು ಅನುಸರಿಸಿವೆಯಾದರೂ ಕಾದಂಬರಿಯಂತೆ ರಚಿತವಾಗಿವೆ. ಈತನ ಆತ್ಮಕಥೆಯಲ್ಲಿ ಸುರಪುರದ ಇತಿಹಾಸದ ಬಗ್ಗೆ ಅನೇಕ ಸಂಗತಿಗಳು ದೊರೆಯುತ್ತವೆ.

ಈ ಶತಮಾನದ ಮೂರನೇ ದಶಕದಲ್ಲಿ ಸುರಪುರ ಪ್ರದೇಶದಲ್ಲಿ ಸಾಮಾಜಿಕ ಹಾಗೂ ಸಾಹಿತ್ಯದ ಸೇವೆ ಮಾಡಿದ ರೆವರೆಂಡ್ ನಾನಪ್ಪ ದೇಸಾಯಿ ಅವರ ಬಗ್ಗೆ ಮಿಸ್ ಮಾರ್‍ರೊ ಎಂಬಾಕೆ 'ಲೈಟ್-ಇನ್-ಇಂಡಿಯಾ' ಎಂಬ ಪುಸ್ತಕ ಬರೆದಿದ್ದಾರೆ.

ಉಳಿದಂತೆ ಹಿರೇಮಠ ಚನ್ನಯ್ಯ ನೀಲಕಂಠಯ್ಯ ಅವರು 'ಸೋಲ್ ಆನ್ ಟು ದ ಸಬ್ ಲೈಮ್', 'ಲೈಟ್ ದಟ್ ನೇವರ್ ವಾಸ್', 'ಟುವರ್ಡ್ಸ್ ಫರ್‌ಫೆಕ್ಷನ್', 'ಲೈಟ್ ಬಿಯಾಂಡ್ ಶ್ಯಾಡೋ', 'ಉಳವಿ ದಿ ಎಬೋಡ್ ಆಫ್

ಸಾಲ್ವೇಷನ್', 'ದಿ ಲೈಟ್ ಡಿವೈನ್'ಗಳು, ಗುಪ್ತ ಜಿ. ಎಸ್. ಬಲರಾಂ ಅವರ 'ಮುಲ್ಕ ರಾಜ ಆನಂದ' 'ಅನ್ ಸಾರ್ಟ್ವೋರಿಯಲ್ ಡಿಸ್‌ಕಂಫಿಚರ್', 'ಸಿನ್ನಿಂಗ್ ಹೆವನ್ ಅಂಡ್ ಅದರ್ ಪೊಯಮ್ಸ್', 'ಸ್ಟೋರೀಸ್ ಫ್ರಂಮ್ ಮೆನಿಲ್ಯಾಂಡ್ಸ್' ಗಳು, ಬಸವರಾಜ ನಾಯ್ಕರ ಅವರ 'ಸ್ವಾಮಿ ವಿಜಯ ಮಹಾಂತೇಶ', 'ಸಾಂಗ್ಸ್ ಆಫ್ ಸರ್ವಜ್ಞ' 'ದಿ ಆಮ್ನಿಸಿಯಾಂಟ್' 'ಪೊಯಟ್ ಆಫ್ ಕರ್ನಾಟಕ', 'ಕ್ರಿಟಿಕಲ್ ಆರ್ಟಿಕಲ್ಸ್ ಆಫ್ ನಿರಾದ್-ಸಿ-ಚೌಧರಿ' 'ಬಿಲವೆಡ್ ಪೊಯಮ್ಸ್'ಗಳು, ಪಾಟೀಲ್ ಬಿ. ಅನ್ನದಾನಿಗೌಡ ಅವರು ಅನುವಾದಿಸಿದ 'ಅಕ್ಕ ಮಹಾದೇವಿ ದಿ ಡಿವೈನ್ ಕಕ್ಕು', ಸರ್ನಾಡ್ ಶ್ರೀಪತಿರಾವ ಆನಂದರಾವ್ ಅವರ 'ಟ್ರೂಥ್ ಎಟರ್‌ನಲ್', ಬಿ. ಎಂ. ಸಿದ್ಧವೀರಯ್ಯ ಅವರ 'ದಿ ಸ್ಟೋರಿ ಆಫ್ ಶರಣ ಬಸವೇಶ್ವರ' ಕೆಂಬಾವಿ ಮುದ್ದಣ್ಣ ಅವರ 'ಬ್ಲೂ ಐಸ್' ಎಸ್. ಎಸ್. ನರಸಣಗಿ, ಪಿ. ಎಸ್. ಶಂಕರ್ ಹಾಗೂ ಬಿ. ಎ. ಪಾಟೀಲರು ಸೇರಿ ರಚಿಸಿದ ಅಕ್ಕನ ವಚನಗಳ ಇಂಗ್ಲೀಷ್ ಅನುವಾದ ಇತ್ಯಾದಿಗಳನ್ನು ಉದಾಹರಿಸಬಹುದು.

ವಿಜ್ಞಾನ ಹಾಗೂ ಮಾನವಿಕ ಕ್ಷೇತ್ರದಲ್ಲಿಯ ಬೋಧಕರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪಠ್ಯ ಅಥವಾ ಪರಾಮರ್ಶನ ಗ್ರಂಥಗಳನ್ನು, ಸಂಶೋಧನಾ ಲೇಖನಗಳನ್ನು ಇಂಗ್ಲೀಷ್‌ನಲ್ಲಿ ಬರೆದಿರುವುದುಂಟು. ಬಸವರಾಜ ನಿಂಬೂರ ಅವರು ಅರ್ಥಶಾಸ್ತ್ರ, ಕದಡಪ್ಪ ಬಿ. ಬೆಳಗೇರಿ ಅವರು ಭೌತ ವಿಜ್ಞಾನ ಶಿವಯೋಗಿ ಪಟ್ಟದಾರ್ಯ ಹಿರೇಮಠ ಅವರು ರಸಾಯನ ಶಾಸ್ತ್ರ, ಎಸ್. ಜಿ. ಘಟಪಣದಿ ಹಾಗೂ ಮಹಾಬಲೇಶ್ವರ ಇತಿಹಾಸ ಕುರಿತು ಗ್ರಂಥ ರಚಿಸಿದ್ದಾರೆ. ವೈದ್ಯಕೀಯ ಕ್ಷೇತ್ರಕ್ಕೆ ಪಿ. ಎಸ್. ಶಂಕರ್ ಅವರ ಕೊಡುಗೆ ಹಿರಿದಾದುದು. ಸುಮಾರು ಹತ್ತು ಗ್ರಂಥಗಳು ಇನ್ನೂರಕ್ಕೂ ಹೆಚ್ಚು ಲೇಖನಗಳನ್ನು ರಚಿಸಿರುವ ಶಂಕರ್ ಅವರು ವೈದ್ಯಕೋಶವನ್ನು ಕನ್ನಡದಲ್ಲಿ ರಚಿಸಿದ್ದಾರೆ.

## ರಂಗಭೂಮಿ

ರಾಜ್ಯದ ಉಳಿದ ಜಿಲ್ಲೆಗಳಂತೆ ಇಲ್ಲಿಯೂ ೨೦ನೇ ಶತಮಾನದ ಎರಡನೇ ದಶಕದಲ್ಲಿ ನಾಟಕ ಕಂಪನಿಗಳು ರಂಗ ಪ್ರಯೋಗ ಮಾಡ ತೊಡಗಿದವು. ೧೯೨೮ರಲ್ಲಿ ರಂಗಂಪೇಟೆ ನಾಟಕ ಕಂಪನಿ ಎಂಬ ನಾಟಕ ತಂಡವೊಂದು ಆರಂಭಗೊಂಡಿತು. ಇದನ್ನು ಮೂಲತಹ ರಂಗಂಪೇಟೆಯವರಾದ ಕಲಬುರ್ಗಿಯ ಚೌದಾಪುರದ ಹಿರೇಮಠ ಶಾಂತವೀರಸ್ವಾಮಿಗಳು ಸ್ಥಾಪಿಸಿದರು. ಕಂಪನಿಯವರು ಹೈದರಾಬಾದ್ ಕರ್ನಾಟಕದ ಕಲಬುರ್ಗಿ, ರಾಯಚೂರು, ಯಾದಗಿರಿಯಲ್ಲಿ ಪ್ರದರ್ಶನ ನಡೆಸಿದರು. ನಾರಾಯಣಪ್ಪ ಜೂಜಾರ್, ಕೃಷ್ಣಪ್ಪ ಕರ್ಲಿ, ವೀರಸಂಗಪ್ಪ ಹಕೀಂ ಅವರ ಯಜಮಾನತ್ವದಲ್ಲಿ ಶಾಂತವೀರಸ್ವಾಮಿಗಳು ರಚಿಸಿದ, 'ಸತಿ ಅನುಸೂಯ' ಮೋಹ ಸಂತಾಪ "ಕಲ್ಪವಲ್ಲರಿ" ಇತ್ಯಾದಿ ನಾಟಕಗಳು ಅಭಿನಯಿಸಲ್ಪಟ್ಟವು. ವೆಂಕೋಬ ವದ್ದಿ, ಸೀಲವಂತ ತೋಟದ್, ಹನುಮಂತಯ್ಯ ಕುಮಾಲದ್ ಮುಂತಾದ ನಟರು ಹಾಗೂ ಸ್ತ್ರೀಪಾತ್ರದಲ್ಲಿ ಸತ್ಯಭಾಮ ಸುರಪುರ ಅವರು ಅಭಿನಯಿಸುತ್ತಿದ್ದರು. ತಿಮ್ಮಪ್ಪ ಅವರು ಪಿಟೀಲು ಹಾಗೂ ಎಲ್ಲಪ್ಪ ಕೊರವರ್ ಅವರು ಕೊಳಲು ಮತ್ತು ಕ್ಲಾರೋನೆಟ್ ವಾದ್ಯಗಳನ್ನು ನುಡಿಸುತ್ತಿದ್ದರು. ಗುಲಬರ್ಗಾ ಜಿಲ್ಲೆಯಲ್ಲದೆ ರಾಯಚೂರು, ಗಜೇಂದ್ರಗಡಗಳಲ್ಲೂ ಪ್ರದರ್ಶನವಿತ್ತ ಈ ಕಂಪನಿ ನಾಲ್ಕು ವರ್ಷಗಳ ಕಾಲ ಚಟುವಟಿಕೆಯಿಂದ ಕೂಡಿತ್ತು.

ಮಿಣಜಿಗಿಗೌಡ ಎಂಬುವವರು ೧೯೪೪ರಲ್ಲಿ ಮಿಣಜಿಗಿ ನಾಟಕ ಕಂಪನಿಯನ್ನು ಸ್ಥಾಪಿಸಿದರು. ಇಂದಿಗೂ ಕ್ರಿಯಾಶೀಲವಾಗಿರುವ ಈ ಕಂಪನಿ ನಿಜಗುಣಯ್ಯ ಅವರು ರಚಿಸಿದ 'ಶ್ರೀಶರಣ ಬಸವೇಶ್ವರ' ನಾಟಕದ ೫೦೦ಕ್ಕೂ ಹೆಚ್ಚು ಪ್ರಯೋಗಗಳನ್ನು ಮಾಡಿದೆ. 'ಜಗಜ್ಯೋತಿ ಬಸವೇಶ್ವರ' ಸಹ ಪ್ರಯೋಗಗೊಂಡಿತು. ಸ್ವತಃ ಮಿಣಜಿಗಿಗೌಡ ಅಲ್ಲದೆ ನಿಜಗುಣಯ್ಯ ಕೆಸರಟ್ಟಿಗಿ ಅವರೂ ಪಾತ್ರಧಾರಿಗಳಾಗಿದ್ದರು. ೧೯೪೬-೪೭ರಲ್ಲಿ ನಂದೂರು ಶ್ರೀಗಳ ಪ್ರೇರಣೆಯಿಂದ ಶ್ರೀಮಲೆಯ ಶಾಂತೇಶ್ವರ ನಾಟಕ ಕಂಪನಿ ಆರಂಭವಾಯಿತು. ಶಾಂತವೀರಸ್ವಾಮಿ ವಿರಚಿತ "ಮಲೆಯ ಶಾಂತೇಶ್ವರ" ಇತ್ಯಾದಿ ನಾಟಕಗಳು ಪ್ರಯೋಗವಾದವು. ಇದೇ ಸುಮಾರಿನಲ್ಲಿ 'ಮೈದರಗಿ ನಾಟಕ ಕಂಪನಿ' ಎಂಬ ನಾಟಕ ತಂಡವೊಂದು ಇಲ್ಲಿದ್ದು ನಂತರ ಮಹಾರಾಷ್ಟ್ರಕ್ಕೆ ವರ್ಗಾವಣೆಗೊಂಡಿತು.

ಈ ರಂಗ ಚಟುವಟಿಕೆಗಳಿಗೆ ಮೊದಲೇ ಖ್ಯಾತ ನಾಟಕಕಾರ ಗರುಡ ಸದಾಶಿವರಾಯರಿಗೆ ಗುಲಬರ್ಗಾ ನಗರ ತಮ್ಮ ನಾಟಕ ಜೀವನಕ್ಕೆ ಸ್ಫೂರ್ತಿ ನೀಡಿತು. ಗರುಡರು ೧೮೮೨ರಲ್ಲಿ ಕೊಪ್ಪಳದಲ್ಲಿ ಜನಿಸಿದರಾದರೂ, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ೧೯೦೭ರ ಸುಮಾರಿನಲ್ಲಿ ಗುಲಬರ್ಗಾಕ್ಕೆ ಬಂದರು. ತಿಲಕರ ರಾಷ್ಟ್ರೀಯ ಚಳವಳಿಯಿಂದ ಪ್ರೇರಿತರಾಗಿ ಪರಕೀಯರ ಧಾಳಿಯನ್ನು ಪ್ರತಿಭಟಿಸಲು ಹಿಂದು ಯುವಕರು "ಪಾಂಡುರಂಗ ಕೃಷ್ಣಾ ಮಂಡಳಿ"ಯೊಂದನ್ನು ೧೯೦೭ರಲ್ಲಿ ಸ್ಥಾಪಿಸಿ

ಗಣೇಶೋತ್ಸವ, ಶಿವಜಯಂತಿಗಳನ್ನು ಆಚರಿಸ ತೊಡಗಿದರು. ಪಾಂಡುರಂಗರಾವ್, ಖಂಡೇರಾವ್ ದೇವಳಗಾಂವಕರ್, ಪಾಂಡುರಂಗ ಕೃಷ್ಣಾ, ಬೇಡೇಕರ ಬಂಧುಗಳು, ಚುಮ್ಮನ ಬೇಡಕರ, ತಾಳಿಕೋಟೆಯ ಜಯರಾಮ ಮೊದಲಾದ ಹದಿನಾಲ್ಕು ಜನ ಸದಸ್ಯರ ಮಂಡಳಿ ತಿಲಕರ ಕಾರಾಗೃಹ ಶಿಕ್ಷೆಯ ವಿಚಾರವನ್ನೇ ನಾಟಕವಾಗಿಸಿ 'ರಾಜಕೋಪಕ ಹರ' ಅಥವಾ 'ಬಂಧ ವಿಮೋಚನ' ಎಂಬ ಹೆಸರಿನಲ್ಲಿ ಶಿವ ಜಯಂತಿಯಂದು (೧೮೯೨) ನಾಟಕ ಆಡಿದರು. ತಿಲಕರಾಗಿ ದೇವಳಗಾಂವಕರ್ ಜೂರಿಯಾಗಿ ಸದಾಶಿವರಾಯರು ಅಭಿನಯಿಸಿದ್ದರು. ರಾಷ್ಟ್ರೀಯ ಭಾವನೆಯನ್ನು ಪ್ರಚೋದಿಸುವಲ್ಲಿ ಈ ನಾಟಕ ಯಶಸ್ವಿಯಾಯಿತು. ಎರಡು ವರ್ಷಗಳ ನಂತರ ಕೇಲಿ ದತ್ತೋಪಂತರ ನೇತೃತ್ವದಲ್ಲಿ 'ಶಿವಸುತ ಪ್ರಸಾದಿತ ನಾಟಕ ಮಂಡಳಿ'ಯೊಂದು ಗುಲಬರ್ಗಾದಲ್ಲಿ ಆರಂಭವಾಗಿ ಸದಾಶಿವರಾಯರು ಅಲ್ಲಿಯೂ ಸಂಪರ್ಕ ಇರಿಸಿಕೊಂಡರು. ಅಲ್ಲಿ ಶರಣಪ್ಪ ಹಾಗೂ ತೆಂಗಳಿ ಪಾಂಡುರಂಗರೊಂದಿಗೆ ಸೇರಿ ಕೀಚಕ ವಧೆ ಕುರಿತು ನಾಟಕ ಸ್ವತಃ ರಚಿಸಿ ಆಡಿದರು. ದ್ರೌಪತಿಯ ಸ್ಥಿತಿಯನ್ನು ಬ್ರಿಟೀಷರ ಕೈಗೆ ಸಿಕ್ಕಿದ ಭಾರತಮಾತೆಗೆ ಹೋಲಿಸಿದ್ದರು. ಇದರ ಯಶಸ್ಸಿನಿಂದಾಗಿ ಮುಂದೆ ತಮ್ಮನ್ನು ನಾಟಕ ಜೀವನಕ್ಕೇ ಸಮರ್ಪಿಸಿಕೊಳ್ಳುವ ನಿಶ್ಚಯ ಮಾಡಿದರು. ೧೯೦೧ರಲ್ಲಿ 'ಮಾರ್ಕಂಡೇಯ' ಎಂಬ ಗೀತ ನಾಟಕ, ೧೯೦೯ರಲ್ಲಿ 'ಬಲಸಿಂಹ ತಾರ' ಎಂಬ ಸ್ವತಂತ್ರ ನಾಟಕ ರಚಿಸಿ ಆಡಿಸಿದರು. ಕೆಲಕಾಲ ಯಾದಗಿರಿಗೆ ವರ್ಗಾವಣೆಗೊಂಡು ಅಲ್ಲಿಯೂ 'ಶಿವಸುತ ಪ್ರಸಾದಿತ ನಾಟಕ ಮಂಡಳಿ' ಸ್ಥಾಪಿಸಿದರು. ಅಲ್ಲಿ ಸಾಂಬಾಜಿ ರಾಯ, ಕಾಕಲವಾರ ರಾಮಾಚಾರ್, ಕಾಕಲವಾರ ಗುಂಡಾಚಾರ್, ಗುಂಡಗುರ್ತಿ ಮದ್ದುರಾಯರೊಂದಿಗೆ 'ಬಲಸಿಂಹ ತಾರ' ನಾಟಕ ನಿರ್ದೇಶಿಸಿ ಅಭಿನಯಿಸಿದರಲ್ಲದೆ ಇದರೊಂದಿಗೆ 'ಶ್ರೀ ಶರಣಬಸವ' ಹಾಗೂ ಗರುಡರು ಭಾಷಾಂತರಿಸಿದ ಪಾಟಣಕರ್ ಅವರ ಮರಾಠಿ ಮೂಲ ಕೃತಿ 'ವಿಕ್ರಮ ಶಶಿಕಲಾ' ನಾಟಕಗಳನ್ನು ರಚಿಸಿ ನಿರ್ದೇಶಿಸಿ ರಂಗಪ್ರಯೋಗ ಮಾಡಿದರು. ಅಲ್ಲದೆ ಯಾದಗಿರಿಯಲ್ಲಿ ತಗಡಿನ ಗೋಡೆಗಳಿಂದ ಕೂಡಿದ, ಬೆಂಚು, ಕುರ್ಚಿ ಹಾಗೂ ದೀಪಾಲಂಕಾರದ ವ್ಯವಸ್ಥೆಯೊಂದಿಗೆ ಅಚ್ಚುಕಟ್ಟಾದ ರಂಗಮಂದಿರವೊಂದನ್ನು ನಿರ್ಮಿಸಿದರು. ಮುಂದೆ ಕಂಪನಿಯೊಂದಿಗೆ ಈ ಮೂರು ನಾಟಕಗಳನ್ನು ತೆಗೆದುಕೊಂಡು ರಾಯಚೂರು, ಮೀರಜ್ ಕಡೆ ಹೊರಟು ಗಾಣಗಾಪುರದಲ್ಲಿ ನಾಟಕವಾಡಿ ಮತ್ತೆ ಗುಲಬರ್ಗಾಕ್ಕೆ ಬಂದು ನೆಲೆಸಿದರು. ಪ್ಲೇಗ್ ಬೇನೆ ಇದ್ದುದ್ದರಿಂದ ಬಳಿಯ ಕತ್ತೂರ್ ಗ್ರಾಮದಲ್ಲಿ ಕ್ಯಾಂಪ್ ಮಾಡಿ ನಾಟಕವಾಡಿದರು. ಗುಲಬರ್ಗಾದಲ್ಲಿ ಈ ನಾಟಕಗಳ ಹಲವಾರು ಪ್ರದರ್ಶನ ನೀಡಿದಂತೆ ಕಂಡು ಬರುತ್ತದೆ. ಮುಂದೆ (೧೯೧೫) ಗರುಡ ಸದಾಶಿವರಾಯರು ಕೊಪ್ಪಳವನ್ನು ತಮ್ಮ ಕಾರ್ಯಕ್ಷೇತ್ರವಾಗಿ ಬದಲಿಸಿಕೊಂಡರು. ೧೯೩೦ರಲ್ಲಿ ಅವರ 'ದತ್ತಾತ್ರೇಯ ಸಂಗೀತ ನಾಟಕ ಮಂಡಳಿ' ಗುಲಬರ್ಗಾದಲ್ಲಿ ದೀರ್ಘಾವಧಿ ಬಿಡಾರ ಹೂಡಿತ್ತು.

ಜುಲೈ ೧೯೫೫ರಲ್ಲಿ ಗುಲಬರ್ಗಾದ ಬಿ. ಆರ್. ಅರಶಿಣಗೋಡಿ ಅವರ ಹುಚ್ಚೇಶ್ವರ ಕಂಪನಿಯ 'ಸೊಸೆ ಹಾಕಿದ ಸವಾಲು' ನಾಟಕದ ಬೆಳ್ಳಿ ಹಬ್ಬ ಆಚರಿಸಲಾಯಿತು.

ಗುಲಬರ್ಗಾದಲ್ಲಿ ೧೯೪೧ರಲ್ಲಿ ಕನ್ನಡ ಸಾಹಿತ್ಯ ಸಂಘದ ಹುಟ್ಟು ನಾಟಕ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಟ್ಟಿತು. ಗರುಡರಿಂದ ಪ್ರೇರಿತರಾದ ಹೇರೂರ ದತ್ತಾತ್ರೇಯ ಮಾಸ್ತರರು ಹವ್ಯಾಸಿ ರಂಗ ಚಟುವಟಿಕೆಗಳನ್ನು ಎರಡು ದಶಕಗಳ ಕಾಲ ಜೀವಂತವಿರಿಸಿದ್ದರು. ನಾಡ ಹಬ್ಬದ ಒಂಬತ್ತು ದಿನ, ನೂತನ ವಿದ್ಯಾಲಯದ ವಾರ್ಷಿಕೋತ್ಸವ ಇತ್ಯಾದಿ ಸಂದರ್ಭಗಳಲ್ಲಿ ನಾಟಕಗಳನ್ನು ಏರ್ಪಡಿಸುತ್ತಿದ್ದರು. 'ಎಚ್ಚಮ್ಮನಾಯ್ಕ' 'ಗಂಡು ಗೊಡಲಿ ಕುಮಾರ ರಾಮ', 'ಪತಿತೋದ್ಧಾರ', 'ಉಷಾ ಸ್ವಯಂವರ', 'ಸತ್ಯವಾನ ಸಾವಿತ್ರಿ' ಇತ್ಯಾದಿಯಲ್ಲದೆ, ಅವರು, ಬೇಂದ್ರೆ, ಲಕ್ಷ್ಮಣರಾಯರು, ಶ್ರೀರಂಗ, ಪರ್ವತವಾಣಿ ಮುಂತಾದವರ ಏಕಾಂಕಗಳನ್ನೂ ಪ್ರಯೋಗಿಸಿದರು. ಹೇರೂರು ಮಾಸ್ತರ ಅವರು ೬೦ರ ದಶಕದಲ್ಲಿಯೂ ಕ್ರಿಯಾಶೀಲ ರಾಗಿದ್ದರು.

ಜೇವರ್ಗಿ ತಾಲೂಕಿನ ಆಂದೋಳದಲ್ಲಿ ಮಾಲಿ ಪಾಟೀಲರಿಂದ ೧೯೫೫ರಲ್ಲಿ ಆರಂಭಗೊಂಡ 'ಕರುಣೇಶ್ವರ ನಾಟಕ ಕಂಪನಿ'ಯಲ್ಲಿ ಶರಣಯ್ಯ ಹಾಗೂ ಫಕೀರಯ್ಯ ಸ್ವಾಮಿಗಳು ಪಾತ್ರವಹಿಸುತ್ತಿದ್ದರು. ೧೯೮೭ರ ಸುಮಾರಿನಲ್ಲಿ ಅಫಜಲಪುರದಲ್ಲಿ ಆರಂಭವಾದ 'ಜವಳಿಗೆ ನಾಟಕ ಕಂಪನಿ'ಯಲ್ಲಿ ಮದಾನಿ ದತ್ತರು ನಾಟಕಕಾರರಾಗಿದ್ದರು. ಇದಲ್ಲದೆ ನಿಂಬರಗಿಯಲ್ಲೂ ಒಂದು ನಾಟಕ ಕಂಪನಿ ಇದ್ದುದಾಗಿ ತಿಳಿದು ಬರುತ್ತದೆ.

ರೇವಣ ಸಿದ್ಧಯ್ಯ ರುದ್ರಸ್ವಾಮಿಮಠ ಅವರು ಸುರಪುರದ ಸಿಂಹ, ವಾಗಣಗೆರೆ ಕೋಟೆ ಕಾಳಗ, ಕಲ್ಬುರ್ಗಿಯ ಕಗ್ಗೊಲೆ, ರಾಗಸುಧೆ ಇತ್ಯಾದಿ ಹಲವಾರು ನಾಟಕಗಳನ್ನು ರಚಿಸಿದ್ದಾರೆ. ಶಾಂತವೀರ ಶ್ರೀಗಳು ರಚಿಸಿದ ನಮ್ಮ ನಾಡು

ಸೇರಿದಂತೆ ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸ್ವತಃ ನಟರೂ ಆದ ರೇವಣಸಿದ್ದಯ್ಯ ಅವರು ಕಳೆದ ಮೂರು ದಶಕಗಳಿಂದ ಜಿಲ್ಲೆಯ ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಕರ್ನಾಟಕಕ್ಕೆ ಹೊಸ ಅಲೆಯ ನಾಟಕಗಳು ಬರುತ್ತಿದ್ದಂತೆ ಅವು ಗುಲಬರ್ಗಾವನ್ನೂ ಪ್ರವೇಶಿಸಿದವು. ೧೯೭೩ರಲ್ಲಿ ಗಿರಡ್ಡಿ ಗೋವಿಂದರಾಜ ಅವರ ನಿರ್ದೇಶನದಲ್ಲಿ ಬಾದಲ್ ಸರ್ಕಾರ್ ಅವರ ಏವಂ ಇಂದ್ರಜಿತ್ ಪ್ರದರ್ಶಿತವಾಯಿತು. ಮುಂದೆ 'ರಂಗಮಾದ್ಯಮ ಹವ್ಯಾಸಿ ನಾಟಕ ಸಂಸ್ಥೆ, ಆರಂಭವಾಗಿ ವರ್ಷಕ್ಕೆ ಮೂರಕ್ಕೂ ಹೆಚ್ಚು ನಾಟಕಗಳು ಪ್ರಯೋಗವಾಗ ತೊಡಗಿದವು. ಪ್ರೇಕ್ಷಕರನ್ನು ಸದಸ್ಯರೆಂಬಂತೆ ಪರಿಗಣಿಸಿ ವಾರ್ಷಿಕ ಹತ್ತು ರೂಪಾಯಿಗಳ ಚಂದಾ ಪಡೆದು ನಾಟಕ ತೋರಿಸುವ ಸಂಪ್ರದಾಯ ರೂಪುಗೊಂಡಿತು.

'ರಂಗ ಮಾದ್ಯಮವು' ೧೨ ವರ್ಷಗಳ ಅವಧಿಯಲ್ಲಿ ಇಪ್ಪತ್ತಮೂರಕ್ಕೂ ಹೆಚ್ಚು ನಾಟಕಗಳನ್ನು ನೀಡಿದೆ. ಬಹುತೇಕ ಹೊಸ ಅಲೆಯ ನಾಟಕಗಳನ್ನು ಪ್ರೇಕ್ಷಕರಿಗೆ ನೋಡುವ ಅವಕಾಶ ಕಲ್ಪಿಸಿದೆ. 'ಸದ್ದು ವಿಚಾರಣೆ', 'ಬಾಕಿ ಇತಿಹಾಸ', 'ಅಧೇ ಅಧೂರೆ', 'ಕದಡಿದ ನೀರು', 'ಹಕ್ಕಿ ಹಾರುತಿದೆ ನೋಡಿದಿರಾ', 'ಜೈಸಿದ ನಾಯ್ಕ' 'ನಾಯಿಕಥೆ' 'ಆಮನಿ' 'ಕೇಳು ಜನಮೇಜಯ' 'ಏನಬೇಡಲಿ', 'ಸಮಗ್ರ ಮಂಥನ', 'ಯಾರಿಗೆ ಮಾಡ್ತಿ ಮ್ಯಾಂವ್' 'ನೀ ಮಾಯೆಯೊಳಗೆ', 'ಪೋಸ್ಟ್ ಆಫೀಸ್' ಇತ್ಯಾದಿ ನಾಟಕಗಳನ್ನು ಪ್ರಯೋಗಿಸಿದೆ.

ಇದಲ್ಲದೆ 'ರಂಗಮಾದ್ಯಮ' ನೀನಾಸಂ ಅವರ 'ತಿರುಗಾಟ' ಪ್ರದರ್ಶನಗಳು, ಭೂಪಾಲದ ರಂಗಮಂಡಲ ರೆರ್ಪಟರಿಯ ನಾಟಕಗಳು ಬೆಂಗಳೂರಿನ ಸೂತ್ರಧಾರ, ನಟರಂಗ, ಬೆನಕ, ಸ್ಪಂದನ, ರಂಗಸಂಪದ, ಸಮುದಾಯ ಮುಂತಾದ ನಾಟಕ ತಂಡಗಳ ನಾಟಕಗಳನ್ನೂ, ನಾಟಕ ಅಕಾಡೆಮಿಯ ಸಹಯೋಗದೊಂದಿಗೆ ೧೯೮೧ರಲ್ಲಿ ನಾಟಕೋತ್ಸವ, ೧೯೯೩ರಲ್ಲಿ ರಾಷ್ಟ್ರೀಯ ನಾಟಕೋತ್ಸವ, ಗ್ರಾಮೀಣ ರಂಗೋತ್ಸವಗಳನ್ನು ಗುಲಬರ್ಗಾದಲ್ಲಿ ಸಂಘಟಿಸಲಾಗಿದೆ.

ಜಿಲ್ಲೆಯಲ್ಲಿ ಇನ್ನೂ ಹಲವಾರು ಹವ್ಯಾಸಿ ನಾಟಕ ಸಂಸ್ಥೆಗಳ ಉದಯವಾಗಿ ಹಲವಾರು ನಾಟಕ ಪ್ರಯೋಗಗಳು ಕಂಡಿವೆ. 'ನೃಪತುಂಗ ಬರಹಗಾರರ ಹಾಗೂ ಕಲಾವಿದರ ಸಂಸ್ಥೆ'ಯ ೧೯೭೫ರಲ್ಲಿ ಪ್ರಾರಂಭಗೊಂಡು ಸದಸ್ಯರೇ ರಚಿಸಿದ 'ಕ್ರಾಂತಿ ಕ್ರಾಂತಿ', 'ಸಮಸ್ಯೆ', 'ತಿರುಕ'ಗಳಲ್ಲದೆ ಶ್ರೀರಂಗರ 'ಕತ್ತಲೆ ಬೆಳಕು', 'ಏನ ಬೇಡಲಿ', 'ಉತ್ತಮ ಪ್ರಭುತ್ವ'ಗಳನ್ನು ಅಭಿನಯಿಸಿತು. ಗುಲಬರ್ಗಾದ ಕನ್ನಡ ಸಾಹಿತ್ಯ ಸಂಘವು ೧೯೭೪-೮೦ರಲ್ಲಿ ಪ್ರಭಾಕರ ಸಾತಖೇಡ ಅವರ ನಿರ್ದೇಶನದಲ್ಲಿ 'ಉತ್ತಮ ಪ್ರಭುತ್ವ' 'ಖರೋಖರ' 'ಆನಿಬಂತಾನಿ' ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿತು. ಎಪ್ಪತ್ತರ ದಶಕದಲ್ಲಿ ಜನ್ಮತಾಳಿದ 'ಸಮುದಾಯ' ರಂಗ ತಂಡ ಗಂಗಾಧರ ಸ್ವಾಮಿ ನಿರ್ದೇಶಿತ 'ಕತ್ತಲೆ ದಾರಿ ದೂರ' 'ಬೆಲ್ಚಿ', ನಾಟಕಗಳನ್ನು ನೀಡಿದ್ದು ೧೯೮೫ರಲ್ಲಿ ಸಿ. ಬಸವಲಿಂಗಯ್ಯ ಅವರ ನಿರ್ದೇಶನದಲ್ಲಿ 'ಈರೋಬಿ', 'ಗೋದಾ' ನಾಟಕಗಳನ್ನು ಪ್ರದರ್ಶಿಸಿತು. ಬಸವಲಿಂಗಯ್ಯ ಅವರು ರಾಯಚೂರಿನ 'ಸಮುದಾಯ' ತಂಡಕ್ಕೆ ನಿರ್ದೇಶಿಸಿದ 'ಕೆರೆಗೆ ಹಾರ' 'ಅಲಾಮನ ಅದ್ಭುತ ನ್ಯಾಯ'ಗಳನ್ನು ಗುಲಬರ್ಗಾ ಪ್ರೇಕ್ಷಕರಿಗೆ ನೀಡಿತು. ಮುಂದಿನ ವರ್ಷಗಳಲ್ಲಿ 'ಸಾಹೇಬರು ಬರುತ್ತಿದ್ದಾರೆ' 'ಸಂಸ್ಥಾ'ಗಳನ್ನು ಪ್ರಯೋಗಿಸಿತು. ಇದಲ್ಲದೆ 'ಜ್ಞಾನ ವಿಜ್ಞಾನ ಜಾಥ', 'ಅಕ್ಷರಜಾಥ'ಗಳಲ್ಲೂ ತೊಡಗಿಸಿಕೊಂಡು ಹಲವಾರು ಬೀದಿ ನಾಟಕಗಳನ್ನು ಅಭಿನಯಿಸಿತು. ೧೯೯೨ರಲ್ಲಿ ರಂಗ ತರಬೇತಿ ಶಿಬಿರದಲ್ಲಿ ರೂಪುಗೊಂಡ 'ಚಾರ್ವಾಕ' ನಾಟಕವನ್ನು ಜಿಲ್ಲೆ ಹಾಗೂ ಹೊರ ಜಿಲ್ಲೆಗಳಲ್ಲೂ ಪ್ರಯೋಗಿಸಿತು.

'ಸಮುದಾಯ'ದೊಂದಿಗೆ ಆರಂಭದಿಂದಲೂ ಸಂಬಂಧ ಇರಿಸಿಕೊಂಡಿರುವ ಆರ್.ಕೆ. ಹುಡಗಿ ಅವರು ಹಲವಾರು ಬೀದಿ ನಾಟಕಗಳನ್ನು ರಚಿಸಿ ಅನೇಕ ಕಡೆಗಳಲ್ಲಿ ಪ್ರದರ್ಶಿಸಿದ್ದಾರೆ. ೧೯೭೨ರ ಫೆಬ್ರವರಿಯಲ್ಲಿ 'ಸಮುದಾಯ' ತಂಡದಿಂದ ಹತ್ತು ದಿನಗಳ ಕಾಲ ಜನ ಸಂಸ್ಕೃತಿ ಉತ್ಸವ ನಡೆಯಿತು.

ಗುಲಬರ್ಗಾದ 'ವಿಚಾರವಾದಿ ಸಂಘ' ಆರಂಭಿಸಿದ ಕೆ.ಎಸ್. ರಾಜ (ನಂದಿ) ಅವರು ೧೯೭೮ರಲ್ಲಿ ತಾವೇ ರಚಿಸಿದ 'ಗುಡುಸಲಿನ ಗುಡದಾಳಿ'ಯನ್ನು ಗುಲಬರ್ಗಾ ಅಲ್ಲದೆ ಬೆಂಗಳೂರಿನಲ್ಲೂ ಪ್ರದರ್ಶಿಸಿದರು. ಸಂಘವು ೧೯೮೫ರಲ್ಲಿ 'ಗುಮ್ಮನೆಲ್ಲಿಹ ತೋರಮ್ಮ'ವನ್ನು ಜಿಲ್ಲೆಯ ಆಳಂದ, ಭೀಮರಾಯನ ಗುಡಿಗಳಲ್ಲದೆ ಬೀದರ್‌ನಲ್ಲೂ ಪ್ರದರ್ಶನ ನೀಡಿತು. ಇವಲ್ಲದೆ 'ಸಾಕ್ಷಿಗಲ್ಲು', 'ರತ್ತೊ ರತ್ತೊ ರಾಯನ ಮಗಳೆ', 'ಕದಿಲ್ ಬಿದಿಲ್ ಕವಡಿಕಾಯಿ', 'ಕನಸಿನವರು', 'ಅಪೂರ್ಣ ರಾಮಾಯಣ', 'ಹೀಗೊಂದು ರಾಗ' ಮುಂತಾದ ನಾಟಕಗಳು ಸಂಘದಿಂದ ಪ್ರಯೋಗಗೊಂಡಿವೆ.

೧೯೭೯ರಲ್ಲಿ ಪ್ರಾರಂಭವಾದ 'ರಂಗಭಾರತಿ' ಸಾಂಸ್ಕೃತಿಕ ಸಂಘವು ಜಿಲ್ಲೆಯಲ್ಲಿ ಮೊದಲ ಬಾರಿಗೆ 'ಧ್ವನಿ ಮತ್ತು ಬೆಳಕು' ವ್ಯವಸ್ಥೆಯ 'ಪ್ಲಾಟ್ ನಂ. ೫' ನಾಟಕವನ್ನು ಪ್ರಯೋಗಿಸಿತು. ೧೯೮೭ರಲ್ಲಿ ಬ್ರೆಕ್ಟ್‌ನ 'ಮೃತ್ಯು ಲೋಕದ ಮಾನಿನಿ' (ದಿ ಗುಡ್ ವುಮೆನ್‌ನ ರೂಪಾಂತರ) ಅಲ್ಲದೆ ಅದೇ ವರ್ಷ 'ಅತೃಪ್ತ ಆತ್ಮಗ್ಗಳು' ನಾಟಕವನ್ನು ಐದು ಬಾರಿ ಪ್ರದರ್ಶಿಸಿತು. ಈ ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನವೂ ಬಂದಿತು. ೧೯೮೩ರಲ್ಲಿ ಕುಟುಂಬ ಯೋಜನೆಯ ಪ್ರಸಾರ ಕಾರ್ಯಕ್ರಮದಲ್ಲಿ 'ನಮ್ಮ ನಮ್ಮ ಬಾಳೆ' ಎಂಬ ಬೋಧಪ್ರದ, ಮನೋರಂಜಕ ನಾಟಕದ ಹತ್ತು ಪ್ರಯೋಗಗಳನ್ನು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ನೀಡಿತು. ಅದೇ ವರ್ಷ ಗ್ರಾಮೀಣ ಅಭಿವೃದ್ಧಿ ಕುರಿತ 'ಶ್ರಮ ಏವ ಜಯತೆ' ಎರಡು ಪ್ರದರ್ಶನ ಕಂಡಿತು. ೧೯೮೪ರಲ್ಲಿ 'ಇದೇ ಗತಿ' ಎಂಬ ನಾಟಕವನ್ನು ಖಣದಾಳ ಮತ್ತು ಬೆಳಕೋಟ ಗ್ರಾಮಗಳಲ್ಲಿ ಏರ್ಪಡಿಸಿತ್ತು. ೧೯೮೫ರಲ್ಲಿ ನಾಟಕ ಅಕಾಡಮಿಯ ಧನ ಸಹಾಯದಿಂದ ಎಸ್. ಮಾಲತಿ ಅವರ ನಿರ್ದೇಶನದಲ್ಲಿ ಬ್ರೆಕ್ಟ್‌ನ 'ತಾಯಿ' ನಾಟಕವನ್ನು ರಂಗ ತರಬೇತಿ ಶಿಬಿರದಲ್ಲಿ ಸಿದ್ಧಗೊಳಿಸಿ ಪ್ರಯೋಗಿಸಿತು. ಸಂಸ್ಥೆ ತನ್ನ ನಾಟಕಗಳಲ್ಲದೆ ಹೊರ ಜಿಲ್ಲೆಯ ವಿವಿಧ ನಾಟಕ ತಂಡಗಳನ್ನು ಆಹ್ವಾನಿಸಿ ನಾಟಕವಾಡಲು ವ್ಯವಸ್ಥೆ ಮಾಡಿಕೊಟ್ಟಿದೆ. ನಾಟಕ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಏರ್ಪಡಿಸಿದೆ. ಮಕ್ಕಳ ನಾಟಕೋತ್ಸವವನ್ನು ಆಯೋಜಿಸಿದೆ. ೧೯೯೭ರಲ್ಲಿ ಕಾರ್ನಾಡರ 'ತಲೆದಂಡ' ಪ್ರಯೋಗ ನಡೆಸಿಕೊಟ್ಟಿದೆ. ರಾಜ್ಯ ಹಾಗೂ ಕೇಂದ್ರ ನಾಟಕ ಅಕಾಡಮಿಗಳಿಗೆ ನೋಂದಣಿ (ಅಫಿಲಿಯೇಟ್) ಆಗಿರುವ 'ರಂಗಭಾರತಿ' ತಂಡ ನಾಟಕ ಪ್ರಯೋಗಗಳಿಗೆ ಸಂಬಂಧಿಸಿದ ಉಪಕರಣಗಳ ಸಂಗ್ರಹವನ್ನು ವ್ಯವಸ್ಥಿತವಾಗಿ ಹೊಂದಿದೆ. ನಾಟಕವಲ್ಲದೆ ಜನಪದ, ಚಿತ್ರಕಲೆ, ಸಂಗೀತ ಇತ್ಯಾದಿ ಪೂರಕ ಕ್ಷೇತ್ರಗಳೊಂದಿಗೂ ಸಂಬಂಧವಿರಿಸಿಕೊಂಡಿದೆ.

೧೯೭೦ರ ದಶಕದ ಕೊನೆಯಲ್ಲಿ ನಾಟಕ ಕ್ಷೇತ್ರಕ್ಕೆ ಕಾಲಿರಿಸಿದ 'ನಿವೇದಿತ ಮಹಿಳಾ ಸಂಘ'ದ ಕಾರ್ಯಕರ್ತೆಯರು ಹಲವಾರು ತಂಡಗಳ ನಾಟಕಗಳಲ್ಲಿ ಅಭಿನಯಿಸಿದ್ದು ೧೯೭೮ರಲ್ಲಿ ಸಂಪೂರ್ಣ ಮಹಿಳೆಯರೇ ಅಭಿನಯಿಸಿದ 'ನಾಯಕ' ನಾಟಕವನ್ನು ಪ್ರದರ್ಶಿಸಿತು. ಸಂಸ್ಕೃತಿ ಹಾಗೂ ಇತರ ಇಲಾಖೆಗಳ ಆಶ್ರಯದಲ್ಲಿ ಪ್ರಚಾರ ನಾಟಕಗಳಾದ 'ನೀವು ಮಾಡೋದೆ ಹೀಗೆ', 'ಎಲ್ಲಾರ ಮನೆ ದೋಸೆ ತೂತು', 'ಅಕ್ಕಮ್ಮನ ಶಾಲೆ', 'ಶಾಂತಲ'ಗಳನ್ನು, ಬೀದಿ ನಾಟಕಗಳಾದ 'ನೆರೆಹೊರೆ', 'ಹೊಸಹಾದಿ'ಗಳನ್ನು ಅಭಿನಯಿಸಿತು. ಸಂಗಮೇಶ್ವರ ಮಹಿಳಾ ಮಂಡಳವು ೧೯೯೪ರಲ್ಲಿ ನಾಟಕ ಅಕಾಡಮಿಯ ಸಹಕಾರದೊಂದಿಗೆ ಒಂದು ತಿಂಗಳ ಕಾಲದ 'ಮಹಿಳಾ ರಂಗ ತರಬೇತಿ ಶಿಬಿರ'ವನ್ನು ಏರ್ಪಡಿಸಿದ್ದು, ಸುಮಾರು ಮೂವತ್ತು ಮಹಿಳೆಯರು ಶಿಬಿರದಲ್ಲಿ ಪಾಲುಗೊಂಡು ಕಂಬಾರರ 'ಕಾಡುಕುದುರೆ'ಯನ್ನು ಪ್ರದರ್ಶಿಸಿದರು. ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಲ್ಲೂ ನಾಟಕಗಳನ್ನು ಅಭಿನಯಿಸಿದ್ದಾರೆ. ಇದೇ ಅವಧಿಯಲ್ಲಿ 'ಶರಣು ಶರಣಾರ್ಥಿ'ಯನ್ನು ಗುಲಬರ್ಗಾದಲ್ಲಿ ಪ್ರಯೋಗಿಸಿತು.

ಉಳಿದಂತೆ ನಗರದ ನಾಟಕ ಚಟುವಟಿಕೆಗಳಲ್ಲಿ ಶಾಮ ಜೋಷಿ ಮಿತ್ರ ಮಂಡಳಿಯವರು ೧೯೮೦ರ ಸುಮಾರಿನಲ್ಲಿ ಜಿ.ಎಂ. ಶಿರಹಟ್ಟಿ ಅವರ ನಿರ್ದೇಶನದಲ್ಲಿ ಅಭಿನಯಿಸಿದ 'ಜೋಕುಮಾರ ಸ್ವಾಮಿ'. ಇದೇ ವೇಳೆಯಲ್ಲಿ 'ಇಪ್ಟಾ' ತಂಡದವರು ಸಿದ್ದನಗೌಡ ಪಾಟೀಲರ ನಿರ್ದೇಶನದಲ್ಲಿ ಅಭಿನಯಿಸಿದ 'ಬಾಜಾ' ಉದಾಹರಿಸಬಹುದು. ಜಿಲ್ಲೆಯ ಇತರ ಸ್ಥಳಗಳ ಪೈಕಿ ಭೀಮರಾಯನ ಗುಡಿಯ 'ಲೇಖಕ ಹಾಗೂ ಕಲಾವಿದರ ಬಳಗ'ದ ಭಾಷಾ ಸಾಹೇಬ ಹಾಗೂ ಧೋತ್ರೆಯವರು 'ಸೂರ್ಯಾಸ್ತದಿಂದ ಸೂರ್ಯೋದಯ' ಪ್ರದರ್ಶಿಸಿದರು. ಹಾಗೂ ಹೊರಗಿನ ಹಲವಾರು ನಾಟಕ ತಂಡಗಳಿಂದ ರಂಗ ಪ್ರದರ್ಶನಗಳನ್ನು ಏರ್ಪಡಿಸಿದ್ದರು. ಸೇಡಂನಲ್ಲಿ ಪ್ರಭಾಕರ ಜೋಷಿ ಅವರು ಆರಂಭಿಸಿದ 'ನವರಂಗ್' ತಂಡದವರು 'ಸಾಹೇಬರು ಬರುತ್ತಾರೆ', 'ಕತ್ತಲೆ ದಾರಿ ದೂರ', 'ಜೋಕುಮಾರಸ್ವಾಮಿ', 'ನಾಯಿ ಕಥೆ' ಇತ್ಯಾದಿ ಹಲವಾರು ರಂಗ ಪ್ರಯೋಗಗಳನ್ನು ಮಾಡಿದ್ದಾರೆ. ಶಹಬಾದದ ರುದ್ರಾಚಾರ್ ಹಾಗೂ ಕನ್ನಡ ಬಳಗದವರು ಸಹ ಕೆಲವು ನಾಟಕಗಳನ್ನು ನೀಡಿದ್ದಾರೆ. ಶಹಪುರದಲ್ಲಿ ಭೀಮರಾವ್ ಮಾಸ್ತರ್, ಸುರಪುರದಲ್ಲಿ ದೀಕ್ಷಾಚಾರ್ ಹೆಬ್ಬಾರ್ ಅವರುಗಳು ರಂಗ ಭೂಮಿಯೊಂದಿಗೆ ಸಂಪರ್ಕವಿರಿಸಿಕೊಂಡಿದ್ದವರು.

ಮಾರ್ಚ್ ೧೯೯೭ರಲ್ಲಿ 'ಶರಣ ಸಂಸ್ಕೃತಿ ೯೭' ಉತ್ಸವದಲ್ಲಿ ಗುಲಬರ್ಗಾ, ಸೇಡಂ, ಜೇವರ್ಗಿ ಹಾಗೂ ಫರತಾಬಾದ್‌ಗಳಲ್ಲಿ ಕೋಮು ಸೌಹಾರ್ದ, ಮೂಢನಂಬಿಕೆ, ಕುಡಿತ, ಏಡ್ಸ್ ಹಾವಳಿ ಇತ್ಯಾದಿ ಕುರಿತ ಜನ ಜಾಗೃತಗೊಳಿಸುವ ರೂಪಕಗಳು ಪ್ರದರ್ಶಿತವಾದವು. ಇವುಗಳನ್ನು ಅಶೋಕ ಬಾದರದಿನ್ನಿ ನಿರ್ದೇಶಿಸಿದ್ದರು. ನವೆಂಬರ್ ೧೯೯೭ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ನಾಟಕಗಳ ಹೊಸ ಆಯಾಮ ಕುರಿತ ವಿಚಾರ ಸಂಕಿರಣ ಏರ್ಪಡಿಸಿತ್ತು.

ಜಿಲ್ಲೆಯಲ್ಲಿ ನುರಿತ ಹವ್ಯಾಸಿ ಕಲಾವಿದರು, ನಿರ್ದೇಶಕರು ಹಾಗೂ ನಾಟಕಗಳ ಬರಹಗಾರರು ಅನೇಕರಿದ್ದಾರೆ. ಅವರುಗಳಲ್ಲಿ ಕೆಲವು ಹೆಸರುಗಳನ್ನು ಇಲ್ಲಿ ಉದಾಹರಿಸಬಹುದು. ಕಣ್ಣಿಗೆ ಕಟ್ಟುವಂತೆ ಪಾತ್ರಗಳನ್ನು ಅಭಿನಯಿಸುವ ಶ್ರೀಧರರಾವ್, ನೈಜ ಅಭಿನಯದ ಕೃಷ್ಣಮೂರ್ತಿ ಕಿತ್ತೂರ್, ರಂಗ ಚಟುವಟಿಕೆಯ ಬಗ್ಗೆ ಕಳಕಳಿ ಹೊಂದಿರುವ ಸಿ.ಬಿ. ಮಠ, ನಟರಲ್ಲದೆ ಸಂಗೀತ ನಿರ್ದೇಶಕರೂ ಆಗಿರುವ ಅನಂತ ಹರಸೂರ, ಕಂಚಿನ ಕಂಠದ ಅಡವಿದಾಸ್, ಕವಿ, ನಾಟಕಕಾರ, ನೃತ್ಯಪಟುವೂ ಆಗಿರುವ ಧನ್ಯಕುಮಾರ ಕಿವಡೆ, ಗಂಡು ಹೆಣ್ಣು ಎರಡು ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯಿಸಬಲ್ಲ ನಾಟಕ ನಿರ್ದೇಶಕಿ ಆಗಿರುವ ಸರಸ್ವತಿ ಚಿಮ್ಮಲಗಿ, ನಾಟಕ ಹಾಗೂ ಸಿನಿಮಾ ಎರಡರಲ್ಲೂ ನಟಿಸಿರುವ ಐ.ಎಸ್. ನವಲಿ, ಪಾತ್ರಗಳಿಗೆ ಜೀವಕಳೆ ತುಂಬುವ ಸೀತಾ ಚಂದ್ರಕಾಂತ್ ಮಲ್ಲಾಬಾದಿ, ಪ್ರತಿಭಾವಂತರಾದ ಕೆ. ಹೇಮಂತ, ಸಂಘಟನಾಶೀಲರಾದ ವಜ್ರಕುಮಾರ ಕಿವಡೆ, ರೇಡಿಯೋ ನಾಟಕಗಳಲ್ಲೂ ಅಭಿನಯಿಸಿದ ಎಂ.ಸಿ. ಕೋರಿ, ರಂಗಭೂಮಿಯಲ್ಲದೆ ಟಿ.ವಿ.ಯಲ್ಲೂ ಅಭಿನಯಿಸುವ ಸ್ವಾಮಿರಾವ ಕುಲಕರ್ಣಿ, ಚಿತ್ರ ಕಲಾವಿದ ಹಾಗೂ ಜನಪದ ರೂಪಕಗಳಲ್ಲಿ ಅಭಿನಯಿಸುವ ಮೋಹನ ಸಿತನೂರ; ಉತ್ತಮ ನಟ ಎಂದು ಪ್ರಶಸ್ತಿ ಪಡೆದ ಕೇಶವಮೂರ್ತಿ ಕುಲಕರ್ಣಿ, ಜನಮೆಚ್ಚುಗೆಯ ಕಲಾವಿದ ಮಲ್ಲಿಕಾರ್ಜುನ ಹಸರಗುಂಡಗಿ, 'ಅನುಶ್ರುತ ನಾಟಕ ತಂಡ'ದ ಪ್ರಮುಖ ಹಾಗೂ ನಿರ್ದೇಶಕ ಶಿವಶಂಕರ, ಟಿ.ವಿ. ರೇಡಿಯೋ ಹಾಗೂ ರಂಗಭೂಮಿಯ ಗೀಳು ಹಚ್ಚಿಕೊಂಡ ಬಾಬುರಾವ್ ಮಾಡ್ಯಾಳಕರ್ ದಂಪತಿಗಳು, 'ಮಿತ್ರ ಮಂಡಳಿ'ಯ ಪ್ರಮುಖರಾದ ಶಾಮಜೋಶಿ, ಸಂಶೋಧಕ, ಬರಹಗಾರ, ಸಂಪಾದಕ, ನಾಟಕಕಾರರಲ್ಲದೆ ಉತ್ತಮ ನಟರೂ ಆಗಿರುವ ಸಂಗಮೇಶ ಸವದತ್ತಿ ಮಠ, ಒಳ್ಳೆಯ ಕಲಾವಿದ ಎಂದು ಸಾಬೀತು ಮಾಡಿರುವ ನಾರಾಯಣ ಕುಲಕರ್ಣಿ, ಹೊರಗಿನವರಾದರೂ ಕನ್ನಡ ಕಲಿತು ರಂಗಭೂಮಿಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಶೋಭಾ ರಂಜೋಳಕರ್, ಸ್ತ್ರೀ ಪಾತ್ರದಲ್ಲಿ ಸಮರ್ಥವಾಗಿ ಅಭಿನಯಿಸಬಲ್ಲ ಶಾಂತಾ ಭೀಮಸೇನರಾವ್, ಸಮುದಾಯದ ಸಂಘಟಕ, ನಿರ್ದೇಶಕ, ಕವಿ, ಗಾಯಕ ಇತ್ಯಾದಿಯಾದ ಶಂಕರಯ್ಯ ಸ್ವಾಮಿ ಘಂಟಿ, ರೇಡಿಯೋ, ಟಿ.ವಿ. ರಂಗಭೂಮಿಯ ನಟರು, ನಿರ್ದೇಶಕರು, ರಂಗ ಸಂಯೋಜಕರು, ಕಥೆಗಾರ ಹಾಗೂ ಚಲನಚಿತ್ರವೊಂದರ ಸಹ ನಿರ್ದೇಶಕರು ಆದ ಜನಾರ್ಧನ ಕಟ್ಟಿ ಅವರು, ಚಿತ್ರ ಹಾಗೂ ಸಂಗೀತ ಕಲಾವಿದ ಹರಿಪ್ರಸನ್ನ ಚಿತ್ತಾಪುರ, ಸಾಕ್ಷ್ಯ ಹಾಗೂ ಚಲನಚಿತ್ರಗಳಲ್ಲಿಯೂ ನಟಿಸಿ ಹೆಸರು ಮಾಡಿರುವ ಈಶ್ವರಪ್ಪ ಫರತಾಬಾದ ಮುಂತಾದ ಅನೇಕರನ್ನು ಹೆಸರಿಸಬಹುದು.

ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಪ್ರಭಾಕರ್ ಸಾತಖೇಡ ಅವರು ರಂಗ ಮಾಧ್ಯಮದ ಸಂಚಾಲಕರು, ಅಭಿನಯಕಾರ, ನಾಟಕ ನಿರ್ದೇಶಕ, ಸಂಘಟನಕಾರ, ನಾಟಕಗಳ ಅನುವಾದಕಾರ, ಮರಾಠಿ ನಾಟಕಗಳಲ್ಲೂ ಅಭಿನಯಿಸಿರುವ ಇವರು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನಾಟಕೋತ್ಸವಗಳನ್ನು ಸಂಘಟಿಸಿದ್ದಾರೆ. ಕೆ.ಎಸ್. ರಾಜ(ನಂದಿ) ಅವರು ವಿಚಾರವಾದಿ ಸಂಘದ ಸಂಚಾಲಕರು, ನಟ ನಿರ್ದೇಶಕ, ನಾಟಕಕಾರ, ಕವಿ, ಸಂಘಟಕ ಕ್ಷೇತ್ರಗಳಲ್ಲಿ ಹೆಸರು ಮಾಡಿರುವವರು, ರಂಗಭೂಮಿಗೆ ತೊಡಗಿಸಿಕೊಂಡ ಸ್ತ್ರೀಯರಲ್ಲಿ ಇಂದಿರಾ ಮಾನ್ವಿಕರ್ ಅವರು ಹಲವಾರು ನಟಿಯರನ್ನು ರಂಗಭೂಮಿಗೆ ಪರಿಚಯಿಸಿದ್ದಾರೆ. ಸ್ವತಃ ನಟಿಯಲ್ಲದೆ ಸಂಘಟನಕಾರರು, ಸಮಾಜ ಸೇವಕರು, ನೃತ್ಯ ಹಾಗೂ ಸಾಹಿತ್ಯ ಗಳಲ್ಲಿ ಆಸಕ್ತಿ ಉಳ್ಳವರು, ಇವರೊಂದಿಗೆ ಸಂಗೀತ ಹಾಗೂ ವನಿತಾ ಮಾನ್ವಿಕರ್ ಅವರ ಸೇವೆಯೂ ರಂಗಭೂಮಿಗೆ ಸಂದಿದೆ.

ಜಿಲ್ಲೆಯ ಉಳಿದ ಭಾಗದಲ್ಲಿಯೂ ರಂಗ ಚಟುವಟಿಕೆಗಳಿದ್ದು, ಸೇಡಂನಲ್ಲಿ ಶಾಂತವೀರ ಸುಂಕದ ಅವರು ನಟರು, ನಿರ್ದೇಶಕರು ಆಗಿದ್ದಾರೆ. ಅಲ್ಲದೆ ಎಂ.ಜಿ. ದೇಶಪಾಂಡೆ, ಗುರುಶಾಂತಯ್ಯ ಮಠಪತಿ, ಅನಂತ ಸರಾಫ್, ಲಕ್ಷ್ಮೀಕಾಂತ ಕುಲಕರ್ಣಿ ಅವರುಗಳೂ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಶಹಬಾದ ಗೆಳೆಯರ ಬಳಗದಿಂದ ಹಲವಾರು ಕಲಾವಿದರು ಬಂದಿದ್ದಾರೆ. ಅವರಲ್ಲಿ ಮಾ.ರಾ. ರುದ್ರಾಚಾರ್ಯ, ತೀರ್ಥ ಹಾಗೂ ಪ್ರಸನ್ನ ಅವರುಗಳು ಹಲವಾರು ನಾಟಕಗಳಲ್ಲಿ ಪಾತ್ರವಹಿಸಿದ ಅನುಭವ ಉಳ್ಳವರು. ಸಮೀಪದ ಭೀಮರಾಯನ ಗುಡಿಯಲ್ಲೂ ರಂಗ ಚಟುವಟಿಕೆಗಳು ನಡೆಯುತ್ತಿದ್ದು, ಎಚ್.ಬಾಷಾ ಸಾಹೇಬರು ಬರಹಗಾರರು ಹಾಗೂ ನಿರ್ದೇಶಕರಲ್ಲದೆ ಹಲವಾರು ರಂಗ ಸಂಘಟನೆಗಳನ್ನು ಮಾಡಿದ್ದಾರೆ.

ಇವರುಗಳಲ್ಲದೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಇನ್ನೂ ಅನೇಕ ಕಲಾವಿದರು ಜಿಲ್ಲೆಯಲ್ಲಿದ್ದಾರೆ. ಅವುಗಳಲ್ಲಿ ವಿ.ಆರ್. ಜೋಷಿ, ವಿಕ್ರಾಂತು, ಸುಬ್ರಾವ ಕುಲಕರ್ಣಿ ಮತ್ತು ವಿಜಯ ಕುಲಕರ್ಣಿ ದಂಪತಿಗಳು, ಎಸ್.ಎನ್. ಬಾಬಳಗಿ, ಸಿದ್ದಣ್ಣ

ಕೊಲ್ಲಾರ, ಗಿರಿಜಾ ಪೂಜಾರ, ಸುಜಾತ ಸಂಗಮಶೆಟ್ಟಿ, ಮಧುಮತಿ ಜಂಗಮ ಶೆಟ್ಟಿ, ಮ.ತಿ. ಧೋತ್ರೆ, ಎಸ್.ಎಸ್. ಹಿರೇಮಠ, ಎಂ. ಸದಾನಂದ, ಟಿ. ದೇವೇಂದ್ರ, ಸಿಂಧು ಪಾಠಕ, ಶರಣ ಪಾಟೀಲ, ಪ್ರಹ್ಲಾದ್ ಕಡೇಚೂರ, ಅರುಣ, ದೇಸಾಯಿ, ಸರಸೀಜ, ಮಲ್ಲಿಕಾರ್ಜುನ ದೇವರಗುಡಿ, ಮಹಾದೇವಿ ಸಜ್ಜನ, ರವೀಂದ್ರ ದರ್ಜಗಿ, ದೀಪಾ ಡಿಗ್ಗಿಕರ, ಕೆ.ಎಂ. ಸಿಂಗಾಪೂರ, ಸಂತೋಷ ಜಹಾಗೀರದಾರ, ಶರಣಯ್ಯ ಹಿರೇಮಠ, ಬಸವ ಪ್ರಭು, ಗುರುರಾಜ ಹಾಸಿಲಕರ, ಸುಧಾಬಾಯಿ ದೇಶಪಾಂಡೆ, ಚಂದ್ರಶೇಖರ ಚತುರಾಚಾರ್ಯಮಠ, ಕೆ.ವಿ. ರವಿಶಂಕರ, ಸಾಧನ ಕುಲಕರ್ಣಿ, ಗುರುರಾಜ ಕುಲಕರ್ಣಿ, ರಮೇಶ್ ಪೂಜಾರ, ಕೆ.ಪಿ. ಗಿರಿಧರ್, ಗೋಪಾಲರಾವ್, ರುಕ್ಮಿಣಿ ಮುಧೋಳ, ಅಶೋಕ ಕುಳನೂರ, ಆರೂರು ಲಕ್ಷ್ಮಣಸೇಠ, ಮುಂತಾದವರನ್ನು ಹೆಸರಿಸಬಹುದು.

ರಾಜ್ಯ ನಾಟಕ ಅಕಾಡಮಿಗೆ ಪ್ರಭಾಕರ ಸಾತಖೇಡ ಅವರು ೧೯೮೪ ಹಾಗೂ ೧೯೯೨ರಲ್ಲೂ, ಈ ಜಿಲ್ಲೆಯಲ್ಲಿ ಆಗ ಇದ್ದ ಗಿರಡ್ಡಿ ಗೋವಿಂದ ರಾಜ ಮತ್ತು ಚಂದ್ರಕಾಂತ ಕೂಸನೂರ ಅವರು ೧೯೮೧ರಲ್ಲೂ ಸದಸ್ಯರಾಗಿದ್ದರು. ಕೂಸನೂರ (೧೯೯೩), ಕೆ. ಶ್ರೀಧರರಾವ್ (೧೯೯೪) ರೇವಣಸಿದ್ಧಯ್ಯ ರುದ್ರಸ್ವಾಮಿಮಠ (೧೯೯೫) ಕೆ.ಆರ್. ಹುಡಗಿ (೧೯೯೬) ಅವರುಗಳಿಗೆ ನಾಟಕ ಅಕಾಡಮಿ ಪ್ರಶಸ್ತಿ ಹಾಗೂ ಗಿರಡ್ಡಿ ಅವರಿಗೆ ೧೯೯೩ರಲ್ಲಿ Fellowship ಬಂದಿತು.

## ಪತ್ರಿಕೋದ್ಯಮ

ಒಂದು ನೂರು ವರ್ಷಗಳ ಇತಿಹಾಸವಿರುವ ಜಿಲ್ಲೆಯ ಪತ್ರಿಕೆಗಳು ಜನರಲ್ಲಿ ವಾಚನಾಭಿರುಚಿ ಬೆಳೆಸುವುದರೊಂದಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆಗಳನ್ನು ಬೆಳೆಸುವಲ್ಲಿ ತನ್ನ ಕಾಣಿಕೆಯನ್ನು ನೀಡಿವೆ. ಈವರೆಗೆ ತಿಳಿದುಬಂದಂತೆ ೧೮೯೩ರಲ್ಲಿ ಮರಾಠಿಯಲ್ಲಿ ಪ್ರಕಟವಾದ 'ಗುಲಬರ್ಗಾ ಸಮಾಚಾರ' ಜಿಲ್ಲೆಯ ಪ್ರಥಮ ಪತ್ರಿಕೆ. ಇದು ಗುಲಬರ್ಗಾದ ಪರಶುರಾಮ ಗೋವಿಂದ ಬೋಡಸ್ ಅವರ ಮುದ್ರಣಾಲಯದಲ್ಲಿ ಮುದ್ರಣವಾಗಿ ಅವರ ಸಂಪಾದನೆಯಲ್ಲಿಯೇ ಹೊರ ಬರುತ್ತಿತ್ತು. ವಾರಪತ್ರಿಕೆಯಾದ ಇದರ ಒಂಬತ್ತನೇ ವರ್ಷದ ಒಂದು ಪ್ರತಿ (೨೫ ಜುಲೈ, ೧೯೦೧) ಲಭ್ಯವಿದ್ದು (ಅಫಜಲ್‌ಪುರದ ಸಾಹಿತಿ ಹರಿಹರರಾವ್ ಮೊಹರೇರ ಅವರಲ್ಲಿ). ಅದರಲ್ಲಿ ಶರಣ ಬಸಪ್ಪ ಅವರ ಚರಿತ್ರೆ, ಮಾಣಿಕಪ್ರಭು ಚರಿತ್ರೆಯ ಪುಸ್ತಕದ ಬಗ್ಗೆ ಪ್ರಕಟಣೆ ಇತ್ಯಾದಿ ಸಾಂಸ್ಕೃತಿಕ ವಿಷಯಗಳು, ಗುಲಬರ್ಗಾ ಊರಿನ ಕಳ್ಳನೊಬ್ಬನ ಬಗ್ಗೆ ವಿವರ ಇತ್ಯಾದಿ ಸಾಮಾಜಿಕ ಸಂಗತಿಗಳೂ ಇವೆ. ಪತ್ರಿಕೆಯ ಬೆಲೆ ಎರಡಾಣೆಯಿದ್ದು ವಾರ್ಷಿಕ ಚಂದಾ ಎರಡು ರೂಪಾಯಿಗಳು. ೧೮೯೭ರಲ್ಲಿ ಗುಲಬರ್ಗಾದಲ್ಲಿ ಆರಂಭವಾದ 'ಪಾಂಡುರಂಗ ಕೃಷ್ಣಾ ಮಂಡಳಿ'ಯನ್ನು ಪ್ರಾರಂಭಿಸಿದವರಲ್ಲಿ ಒಬ್ಬರಾದ ಚುಮ್ಮಣ್ಣ ಬೇಡಸರವರು ಇದಕ್ಕೆ ನಿಯಮಿತವಾಗಿ ಲೇಖನ ಬರೆಯುತ್ತಿದ್ದರು. ಈ ಶತಮಾನದ ಆರಂಭದಲ್ಲಿ ರಾಳೆರಾಸಕರ ಮಾಸ್ತರ್ ಎಂಬುವವರು ಇದರ ಸಂಪಾದಕರಾಗಿದ್ದರೆಂದು ಶ್ರೀನಿವಾಸ ಗಟ್ಟು ಅವರು ತಿಳಿಸುತ್ತಾರೆ. ಮೊಹರೇರ ಅವರ ಸಂಗ್ರಹದಲ್ಲಿ ಇರುವ ಇನ್ನೊಂದು ಮರಾಠಿ ಸಾಪ್ತಾಹಿಕವೆಂದರೆ 'ಖೈರಖಾಹ ದಕನ್'. ೧೯೦೭ರಲ್ಲಿ ಆರಂಭವಾದ ಈ ಪತ್ರಿಕೆಯ ಸಂಪಾದಕರೂ ಪರಶುರಾಮ ಗೋವಿಂದ ಬೋಡಸರೇ ಆಗಿದ್ದರು.

೧೯೩೦ರಲ್ಲಿ ರಂಗಂಪೇಟೆಯ ಗುರಯ್ಯ ಸುಗೂರುಮಠ ಅವರು 'ನೈಜಾಮ ನ್ಯಾಯ ತೀರ್ಪು' ಎಂಬ ಮಾಸ ಪತ್ರಿಕೆಯನ್ನೂ, ಇದೇ ವೇಳೆಗೆ ಯಾದಗಿರಿಯಲ್ಲಿ ಬಸವರಾಜ ಶಾಸ್ತ್ರಿ ಅವರು 'ಧರ್ಮ ಸಂಜೀವಿನಿ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದ್ದಾಗಿ ತಿಳಿದು ಬರುತ್ತದೆ. ೧೯೪೦-೪೨ರ ಸುಮಾರಿನಲ್ಲೇ ರಾಘವೇಂದ್ರ ಕುಷ್ಟಗಿ, ಭೀಮರಾವ್, ಗುರಾಚಾರ್ಯ ಬಂಡಿ, ಸಗರ ಕೃಷ್ಣಾಚಾರ್, ಎಂ.ಆರ್. ಬುದ್ಧಿವಂತ ಶೆಟ್ಟಿ ಅವರುಗಳು ಸುರಪುರ-ಶಹಾಪುರದಿಂದ 'ಅರುಣ' ಎಂಬ ಕೈಬರಹದ ಪತ್ರಿಕೆಯನ್ನು ಹೊರತರುತ್ತಿದ್ದರು. ಸಗರ ಕೃಷ್ಣಾಚಾರ್ಯರು 'ವಿಕಾಸ' ಎಂಬ ಕೈಬರಹದ ಪತ್ರಿಕೆ ಕೆಲಕಾಲ ತಂದರು.

ನಾಲ್ಕನೇ ದಶಕದಲ್ಲಿ ಮುದ್ರಿತವಾದ ಇಲ್ಲವೇ ಕೈಬರಹದ ಪತ್ರಿಕೆಗಳು ಜಿಲ್ಲೆಯಲ್ಲಿ ರಾಷ್ಟ್ರೀಯತೆಯ ಬಗ್ಗೆ ಜಾಗೃತಿ ಮೂಡಿಸಲು ಸಹಕಾರಿಯಾದವು. ೧೯೪೪ರಲ್ಲಿ ಗುಲಬರ್ಗಾದಿಂದ ದತ್ತಾತ್ರೇಯ ರಾವ್ ಅವರಾದಿ ಮತ್ತು ಎಸ್. ಹನುಮಂತರಾವ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ನಾಗರಿಕ' ವಾರಪತ್ರಿಕೆ ಎರಡು ವರ್ಷಗಳ ನಂತರ ರಾಯಚೂರಿಗೆ ವರ್ಗಾವಣೆಗೊಂಡಿತು. ಇದು 'ಉಗ್ರ ಸ್ವರೂಪದ ರಾಷ್ಟ್ರೀಯವಾದಿ ಪತ್ರಿಕೆ'ಯಾಗಿತ್ತು ಎಂಬ ಅಭಿಪ್ರಾಯವಿದ್ದು, ಈ ಪತ್ರಿಕೆಯನ್ನು ನಿಜಾಮರ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತಲ್ಲದೆ ಸಂಪಾದಕರನ್ನು ಬಂಧಿಸಲಾಯಿತು.

ಇದೇ ವೇಳೆಯಲ್ಲಿ ಸ್ವಾತಂತ್ರ್ಯಾಂದೋಲನ ಸಂದರ್ಭದಲ್ಲಿ ಗುಲಬರ್ಗಾದಲ್ಲಿ ನಿಜಾಂ ಶಾಹಿಗೆ ಧಿಕ್ಕಾರ ಹೇಳಿ ನೌಕರಿಗೆ ರಾಜೀನಾಮೆ ನೀಡಿ ಹೊರ ಬಂದವರಲ್ಲಿ ಅವರಾದಿ ದತ್ತಾತ್ರೇಯ ರಾವ್, ವಿ.ಸಿ. ದೇವಳಗಾಂವಕರ್, ಎಸ್. ಹನುಮಂತರಾವ್, ಶಂಕರರಾವ್ ವಾಂಝುರೇ, ತುಕಾರಾಮ ಕುಲಕರ್ಣಿ, ಅನಂತ ಶರ್ಮ ನಾರಾಯಣರಾವ್ ಕಾನ್ನ್ಯಾಳ್ ಹಾಗೂ ರಾಘು ಜಾಗೀರದಾರರು ಸೇರಿ ಕೈಬರಹದ ಹಾಗೂ ಕಲ್ಲಚ್ಚಿನಲ್ಲಿ ಸ್ವಾತಂತ್ರ್ಯ ಚಳವಳಿ ಕುರಿತ ಕರಪತ್ರ ಮುದ್ರಿಸಿ ಹಂಚಿದರು. ದತ್ತಾತ್ರೇಯರಾವ್ ಹಾಗೂ ಹನುಮಂತರಾವ್ ಅವರ 'ನಾಗರಿಕ' ಪತ್ರಿಕೆಗೆ ಇವು ನಾಂದಿಯಾಯಿತು. ಇದರಿಂದ ಪ್ರೇರಣೆಗೊಂಡ ವಸಂತ ಕುಷ್ಟಗಿ ಹಾಗೂ ಲಕ್ಷ್ಮೀಕಾಂತ ಪಟ್ಟಣಕರ್ ಅವರುಗಳು ೧೯೪೭ರಿಂದ ೫೦ರವರೆಗೆ ಮೂರು ವರ್ಷಗಳ ಕಾಲ 'ಉದಯ' ಎಂಬ ಕೈ ಬರಹದ ಪತ್ರಿಕೆಯನ್ನು ಹೊರತಂದರು. ಆಗ ಇವರಿಬ್ಬರು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಾಗಿದ್ದು, ರಜಾಕರ ಹಾವಳಿಯ ಬಗ್ಗೆ ಪತ್ರಿಕೆಯಲ್ಲಿ ವಿವರವಾಗಿ ಬರೆದು ಹಂಚಿದರು. ಇದೇ ರೀತಿ ಮುಂದೆ ಹನುಮಂತರಾವ್ ಕಾನ್ನ್ಯಾಳ್ ಅವರು 'ಪ್ರಕಾಶ' ಎಂಬ ಕೈಬರಹ ಪತ್ರಿಕೆಯನ್ನು ಕೆಲಕಾಲ ನಡೆಸಿದರು.

ಪಂಡಿತ ಸೂ.ಗು. ವೀರಶರ್ಮ, ಜೆ.ಎಂ. ಗುರುಸಿದ್ಧಶಾಸ್ತ್ರಿ ಹಾಗೂ ವೀರೇಶ್ವರ ಶಾಸ್ತ್ರಿಗಳು ೧೯೪೮ರಲ್ಲಿ 'ಅಮರವಾಣಿ' ಎಂಬ ಧಾರ್ಮಿಕ ವಿಚಾರಗಳಿಗಾಗಿ ಮೀಸಲಾದ ಮಾಸ ಪತ್ರಿಕೆಯನ್ನು ಹೊರ ತಂದಿದ್ದು, ಏಳು ವರ್ಷಗಳ ನಂತರ ರಾಯಚೂರಿಗೆ ವರ್ಗವಾದ ಪತ್ರಿಕೆ ಇತ್ತೀಚಿನವರೆಗೂ ಪ್ರಕಟವಾಗುತ್ತಿತ್ತು. ಇದೇ ವೇಳೆಯಲ್ಲಿ ಯಾದಗಿರಿಯಿಂದ ಗುರುಸಿದ್ಧ ಶಾಸ್ತ್ರಿ ಮತ್ತು ಎಸ್.ಆರ್. ಕಂಠಿ ಅವರ 'ಹೈದ್ರಾಬಾದ-ಕನ್ನಡಿಗ' ಎಂಬ ದಿನಪತ್ರಿಕೆ ಪ್ರಕಟವಾಗುತ್ತಿತ್ತು. ದತ್ತಾತ್ರೇಯರಾವ್ ಅವರಾದಿ ಅವರ ಮಾರ್ಗದರ್ಶನದಲ್ಲಿ ವಿರೂಪಾಕ್ಷಪ್ಪ ಮೋದಿ ಅವರು ಗುಲಬರ್ಗಾದಿಂದ ೧೯೪೮ರಲ್ಲಿ 'ಸ್ವರಾಜ್ಯ' ಎಂಬ ವಾರ ಪತ್ರಿಕೆಯನ್ನೂ, ರಾಘು ಜಾಗೀರದಾರ್ ಅವರು ೧೯೫೪-೬೦ರ ಅವಧಿಯಲ್ಲಿ ಗುಲಬರ್ಗಾದಿಂದ 'ಸಾರಥಿ' ಎಂಬ ಪತ್ರಿಕೆಯನ್ನೂ ಹೊರತಂದರು. ಮೊದಲಿಗೆ ವಾರ ಹಾಗೂ ನಂತರ ದಿನಪತ್ರಿಕೆಯಾದ ಇದು ಮೊದಲ ಬಾರಿಗೆ ಜಿಲ್ಲೆಯಲ್ಲಿ ಟೆಲಿ ಪ್ರಿಂಟರ್ ಸೌಲಭ್ಯ ಹೊಂದಿದ ಪತ್ರಿಕೆಯಾಗಿತ್ತು. ಇದೇ ಅವಧಿಯಲ್ಲಿ ಟಿ. ಸಿದ್ದಪ್ಪ ಎಂಬವವರು 'ಕಲ್ಯಾಣ' ಎಂಬ ವಾರ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಕಾನ್ನ್ಯಾಳ್ ಹನುಮಂತರಾವ್, ಜಿ.ಎ. ಕುಲಕರ್ಣಿ ಅವರು ಪ್ರಭಾತ್ ವಾಚನಾಲಯದಿಂದ 'ಪ್ರಭಾತ' ಎಂಬ ಮಾಸಿಕವನ್ನು ೧೯೫೦-೫೬ರ ಅವಧಿಯಲ್ಲಿ ಹೊರತಂದರು.

ಯಾದಗಿರಿಯಿಂದ ಬಿ. ಮಹದೇವಪ್ಪ ಅವರು ೧೯೬೫-೬೬ರಲ್ಲಿ ಹೊರತಂದ 'ವಿಶ್ವ ಕಲ್ಯಾಣ' ಹಾಗೂ ಸಗರ ಕೃಷ್ಣಾಚಾರ್ಯರು ೧೯೭೦ರಲ್ಲಿ ತಂದ 'ಮಂದಾಕಿನಿ' ತ್ರೈಮಾಸಿಕಗಳು ಹೆಸರಿಸಬಹುದಾದ ಪತ್ರಿಕೆಗಳು. ಸಿದ್ಧಯ್ಯ ಪುರಾಣಿಕ, ಇಟಗಿ ರಾಘವೇಂದ್ರರಾವ್, ವಸಂತ ಕುಷ್ಟಗಿ ಮುಂತಾದವರು 'ಮಂದಾಕಿನಿ'ಯ ಸಲಹಾ ಸಮಿತಿಯಲ್ಲಿದ್ದರು. ಗುಲಬರ್ಗಾದ ಶಿಕ್ಷಣ ಇಲಾಖೆ ಸಹ ನಿರ್ದೇಶಕರಿಂದ ೧೯೬೯ರಲ್ಲಿ ಆರಂಭವಾದ 'ಜೀವನ ವಿಕಾಸ'ಕ್ಕೆ ಕೆಲಕಾಲ ರೇವಣಸಿದ್ದಯ್ಯ ರುದ್ರಸ್ವಾಮಿಮಠ ಅವರು ಸಂಪಾದಕರಾಗಿದ್ದು, ಪತ್ರಿಕೆ ೧೯೮೧ರವರೆಗೂ ನಿರಂತರವಾಗಿ ಹೊರ ಬಂದಿತು. (೧೯೯೫ರಲ್ಲಿ ಪುನರಾರಂಭಗೊಂಡಿದೆ.) ಈ ಪತ್ರಿಕೆ ಮುಖ್ಯವಾಗಿ ಶೈಕ್ಷಣಿಕ ಪತ್ರಿಕೆಯಾದರೂ ಜಿಲ್ಲೆಯ ಕಲೆ, ಸಾಹಿತ್ಯ, ಸ್ಥಳ ಪರಿಚಯ ಇತ್ಯಾದಿ ಸಾಂಸ್ಕೃತಿಕ ಅಂಶಗಳಿಗೂ ಮಹತ್ವ ನೀಡಲಾಗಿದೆ. ಸುರಪುರದ ಸಹಾಯಕ ಶಿಕ್ಷಣಾಧಿಕಾರಿಯ ಕಚೇರಿಯಿಂದ ೧೯೭೨ರಲ್ಲಿ 'ಲಘು ವಾರ್ತಾ ಪ್ರಕಟಣೆ'ಯೊಂದು ಆರಂಭವಾಯಿತು. ೧೯೬೨ರಲ್ಲಿ ಹುಬ್ಬಳ್ಳಿಯಿಂದ ಆರಂಭವಾದ 'ಕ್ರಾಂತಿ' ಪತ್ರಿಕೆ ೧೯೬೫ರಲ್ಲಿ ಗುಲಬರ್ಗಾಕ್ಕೆ ವರ್ಗಾವಣೆಗೊಂಡಿತು. ಸಂಸ್ಥಾಪಕ ಸಂಪಾದಕ ಎಂ. ಸಿದ್ಧರಾಮೇಶ್, ಕ್ರಾಂತಿಕಾರಿ ಧೋರಣೆವುಳ್ಳವರಾಗಿದ್ದರು. ಈಗ ಆಫ್‌ಸೆಟ್ ಮುದ್ರಣ ಮಾಧ್ಯಮದಿಂದ ಹೊರ ಬರುತ್ತಿದ್ದು ಶ್ರೀಮತಿ ಅನ್ನಪೂರ್ಣಮ್ಮ ಅವರು ಪತ್ರಿಕೆ ನಡೆಸುತ್ತಿದ್ದಾರೆ. ಪಿ.ಎಂ. ಮಣ್ಣೂರ್ ಅವರ 'ಸತ್ಯಕಾಮ' (೧೯೭೦), ಎಸ್.ಎಲ್. ಜೇವರ್ಗಿ ಅವರ 'ಶಾಸನ' (೧೯೭೩) ಹಳೆಯ ಪತ್ರಿಕೆಗಳೆನ್ನಬಹುದು. ಬಿಜಾಪುರದ 'ಉದಯ' ಪತ್ರಿಕೆ ೧೯೬೫ರಲ್ಲಿ ಗುಲಬರ್ಗಾಕ್ಕೆ ವರ್ಗವಾಯಿತು. ಕೆರಳ್ಳಿ ರಘುನಾಥ ರೆಡ್ಡಿ ಅವರು 'ಚ' ಎಂಬ ಸಾಹಿತ್ಯದ ಪತ್ರಿಕೆ ಹೊರತರುತ್ತಿದ್ದರು.

ಉಳಿದ ಭಾಷಾ ಪತ್ರಿಕೆಗಳಲ್ಲಿ ಹನುಮಂತರಾವ್ ತಾಡಪತ್ರಿ ಅವರ ಇಂಗ್ಲೀಷ್‌ನ 'ಕರ್ನಾಟಕ ಸ್ಟ್ಯಾಂಡರ್ಡ್' ಬಾಬುರಾವ್ ಹಾಗರಗಿ ಅವರ 'ಫರ್ಜ್' ಹಾಗೂ ಗೋವಿಂದರಾವ್ ಖಮೀತ್‌ಕರ್ ಅವರ ಹಿಂದಿ ಭಾಷೆಯ 'ವೃತ್ತ ಮಂಜರಿ' ಹಕೀಂಶೀಲ್ ಅವರ ಉರ್ದು ಪತ್ರಿಕೆ 'ಸಲಾಮತ್' ಪತ್ರಿಕೆಗಳು ಉಲ್ಲೇಖನೀಯ. ಕಳೆದ ೧೭ ವರ್ಷಗಳಿಂದ ಮರಾಠಿ ಭಾಷೆಯಲ್ಲಿ 'ಅನುಬಂಧ' ಎಂಬ ತ್ರೈಮಾಸಿಕ ಬರುತ್ತಿದೆ. ಈಚೆಗೆ ಗುಲಬರ್ಗಾದ ಆರ್ಯ ಸಮಾಜದಿಂದ 'ಸತ್ಯಾರ್ಥ ದರ್ಪಣ' ಎಂಬ ಕನ್ನಡ-ಹಿಂದಿ ನಿಯತ ಕಾಲಿಕೆ ಆರಂಭವಾಗಿದೆ.

ವಿಶ್ವವಿದ್ಯಾಲಯ ಹಾಗೂ ಶಾಲಾ ಕಾಲೇಜುಗಳು ಮತ್ತು ಸಂಘ ಸಂಸ್ಥೆಗಳು ಹಲವಾರು ನಿಯತಕಾಲಿಕೆಯನ್ನು ಹೊರ ತಂದಿವೆ. ಗುಲಬರ್ಗಾ ವಿ.ವಿ.ಯ ಪ್ರಸಾರಾಂಗದಿಂದ 'ಸಂಶೋಧನ ಪತ್ರಿಕೆ' ಎಂಬ ನಿಯತ ಕಾಲಿಕೆ ಜೂನ್ ೧೯೮೮ರಲ್ಲಿ ಆರಂಭವಾಗಿ ಹಲವಾರು ಸಂಚಿಕೆಗಳು ಹೊರ ಬಂದವು. ಮುಂದೆ ಇದರ ಹೆಸರು 'ಕಲಾಗಂಗಾ' ಎಂದು ಬದಲಾಯಿತು. ಪ್ರಸ್ತುತ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಸಂಗಮೇಶ ಸವದತ್ತಿಮಠ ಅವರ 'ಸಂಶೋಧನ ವ್ಯಾಸಂಗ' (೧೯೮೮) (ಮೊದಲಿಗೆ 'ಶೋಧನೆ' ಎಂಬ ಹೆಸರಿತ್ತು) ಹಾಗೂ ೧೯೮೭ರಿಂದ ವೀರಣ್ಣ ದಂಡೆಯವರ 'ಕವಿಮಾರ್ಗ' (ಮೊದಲಿಗೆ 'ವಿಮರ್ಶೆ' ಎಂಬ ಹೆಸರಿನಲ್ಲಿ ಹೊರತಂದು ೧೯೮೮ರಲ್ಲಿ 'ಕವಿಮಾರ್ಗ' ಎಂದು ಬದಲಿಸಿದರು) ನಿಯಮಿತವಾಗಿ ಹೊರ ಬರುತ್ತಿದ್ದು ಸಾಹಿತ್ಯ, ಕಲೆ, ಸಂಶೋಧನೆ ಇತ್ಯಾದಿ ಕುರಿತ ಪ್ರೌಢ ಲೇಖನಗಳಿಂದ ಕೂಡಿ ಉಪಯುಕ್ತವಾಗಿವೆ. ೧೯೯೫ರಲ್ಲಿ ಕಿರಣ ಪಾಟೀಲರು 'ಕಾವ್ಯ' ಎಂಬ ಕವಿತೆ ಹಾಗೂ ಕಾವ್ಯ ವಿಮರ್ಶೆಗೆ ಮೀಸಲಾದ ತ್ರೈಮಾಸಿಕವನ್ನು ಹೊರತಂದರು. ಚಂದ್ರಕಾಂತ ಕದರಳ್ಳಿ ಮತ್ತು ಸಿದ್ಧರಾಮ ಹೊನಕಲ್ಲರ 'ಹೊಸ ದಿಕ್ಕು' ಸಹ ಗಮನಾರ್ಹ ಸಾಹಿತ್ಯ ಪತ್ರಿಕೆ ಎಂದೆನಿಸಿದೆ. ಒಂದೇ ಹೆಸರಿನಲ್ಲಿ ವಾರ್ಷಿಕವಾಗಿ ಹಲವಾರು ವರ್ಷಗಳು ಪತ್ರಿಕೆಯ ರೂಪದಲ್ಲಿ ಹೊರತರುವ ನಿಯತಕಾಲಿಕೆಗಳು ಜಿಲ್ಲೆಯಲ್ಲಿವೆ. ಅವುಗಳಲ್ಲಿ ತವಗ ಭೀಮಸೇನ್‌ರಾವ್ ಅವರ ಮಾರ್ಗದರ್ಶನದಲ್ಲಿ ದೇವೇಂದ್ರಕುಮಾರ್ ಹಕಾರಿ ಹಾಗೂ ಬಸಲಿಂಗಯ್ಯ ಅವರುಗಳು ೧೯೬೫ರಿಂದ ೭೦ರವರೆಗೆ 'ಮಿಂಚು' ಎಂಬ ವಾರ್ಷಿಕ ಸಂಚಿಕೆಗಳನ್ನು ತಂದರು. ಇದರಲ್ಲಿ ಅನೇಕ ಯುವಕರ ಪ್ರತಿಭೆ ಬೆಳಕಿಗೆ ಬರುವಂತಾಯಿತು. ಅಂತೆಯೇ ಗುಲಬರ್ಗಾದ ಐಡಿಯಲ್ ಫೈನ್ ಆರ್ಟ್ ಸೊಸೈಟಿಯವರು 'ಪ್ರತಿಭೆ' ಎನ್ನುವ ಹೆಸರಿನಲ್ಲಿ ದ್ವೈವಾರ್ಷಿಕ ಸಂಚಿಕೆಯನ್ನು ಹಲವಾರು ವರ್ಷಗಳಿಂದ ಹೊರತರುತ್ತಿದ್ದಾರೆ. ಚಿತ್ರಕಲೆಗೆ ಸಂಬಂಧಿಸಿದಂತೆ ಪೂರಕ ಮಾಹಿತಿಯನ್ನೊಳಗೊಂಡು ಸಾಕಷ್ಟು ಛಾಯಾ ಚಿತ್ರಗಳೊಂದಿಗೆ ಹೊರ ಬರುವ ಈ ಸಂಚಿಕೆಗಳು ಕಲಾತ್ಮಕವಾಗಿವೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ ೧೯೯೫ರಿಂದ ಭಾನುವಾರದ ಸಂಚಿಕೆಯಲ್ಲಿ 'ಕಲ್ಬುರ್ಗಿಯ ಕಲರವ' ಎಂಬ ಅಂಕಣ ಬರುತ್ತಿದ್ದು, ಸಾಂಸ್ಕೃತಿಕವಾಗಿ ಅನೇಕ ಮಾಹಿತಿಗಳು ಇಲ್ಲಿ ದೊರೆಯುತ್ತವೆ.

ಜಿಲ್ಲೆಯಲ್ಲಿ ಈವರೆಗೆ ನೂರ ಇಪ್ಪತ್ತಕ್ಕೂ ಹೆಚ್ಚು ಪತ್ರಿಕೆಗಳು ಆಗಿ ಹೋದ ಇತಿಹಾಸವಿದೆಯೆಂದೂ, ಈಗ ಮೂವತ್ತಕ್ಕೂ ಹೆಚ್ಚು ಪತ್ರಿಕೆಗಳು ಬರುತ್ತಿರುವುದಾಗಿಯೂ ತಿಳಿದು ಬರುತ್ತದೆ. ಮುಂದಿನ ಪುಟದಲ್ಲಿ ಜಿಲ್ಲೆಯಿಂದ ಪ್ರಕಟವಾಗುತ್ತಿರುವ ಹಾಗೂ ಸದ್ಯ ಸ್ಥಗಿತಗೊಂಡಿರುವ ಕೆಲವು ಪತ್ರಿಕೆಗಳ ಪಟ್ಟಿಯನ್ನು ನೀಡಿದೆ. ಜಿಲ್ಲಾ ವರದಿಗಾರರ ಸಂಘವು ೧೯೯೫ರಲ್ಲಿ 'ವರದಿಗಾರರು ಮತ್ತು ಸವಾಲುಗಳು' ಕುರಿತು ಸಮಾಲೋಚನೆ ನಡೆಸಿತು. ಗುಲಬರ್ಗಾದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದವರು ಜುಲೈ ೧೯೯೭ರಲ್ಲಿ 'ಪತ್ರಿಕಾ ದಿನ'ವನ್ನು ಪತ್ರಿಕಾ ಅಕಾಡಮಿಯ ನೆರವಿನೊಂದಿಗೆ ಆಚರಿಸಿದರು. ಪತ್ರಕರ್ತರಿಗೆಂದೇ ಕೊಡಮಾಡುವ 'ಶ್ರೀಮತಿ ಯಶೋದಮ್ಮ ಜಿ. ನಾರಾಯಣ' ರಾಜ್ಯಮಟ್ಟದ ಪ್ರಶಸ್ತಿಯನ್ನು ೧೯೯೭ರಲ್ಲಿ 'ಗ್ರಿನೋಬಲ್ಸ್' ಪತ್ರಿಕೆಯ ಸಂಪಾದಕ ರಾಜೇಂದ್ರ ಪಾಟೀಲರಿಗೆ ನೀಡಲಾಯಿತು.

## ಗುಲಬರ್ಗಾ ಜಿಲ್ಲೆಯಿಂದ ಪ್ರಕಟವಾಗುತ್ತಿದ್ದ ಹಾಗೂ ಪ್ರಕಟವಾಗುತ್ತಿರುವ ಕೆಲವು ಪತ್ರಿಕೆಗಳ ಪಟ್ಟಿ

| ಕ್ರಮ ಸಂಖ್ಯೆ | ಹೆಸರು | ಕಾಲಿಕೆ | ಭಾಷೆ | ಸಂಪಾದಕರು (ಶ್ರೀ ಮತ್ತು ಶ್ರೀಮತಿ) | ಆರಂಭ ವರ್ಷ |
|---|---|---|---|---|---|
| ೧ | ೨ | ೩ | ೪ | ೫ | ೬ |
| ೦೧ | ಗ್ರಿನೋಬಲ್ಸ್ | ದಿನ | ಕನ್ನಡ | ರಾಜೇಂದ್ರ ಪಾಟೀಲ | ೧೯೮೨ ಫೆಬ್ರವರಿ |
| ೦೨ | ಸತ್ಯಕಾಮ | ದಿನ | ಕನ್ನಡ | ಪಿ.ಎಂ. ಮಣ್ಣೂರ | ೧-೧-೧೯೭೦ |
| ೦೩ | ಕನ್ನಡ ಬಂಧು | ದಿನ | ಕನ್ನಡ | ಜಯಪ್ರಕಾಶ ಎಸ್. ಕುಲಕರ್ಣಿ | ನವೆಂಬರ್-೭೩ (ವಾರಪತ್ರಿಕೆ ಆಗಿದ್ದು ೨೬-೨-೭೬ರಿಂದ ದಿನಪತ್ರಿಕೆಯಾಗಿದೆ) |
| ೦೪ | ಶಾಸನ | ದಿನ | ಕನ್ನಡ | ಎಸ್.ಎಲ್. ಜೇವರ್ಗಿ. | ೧೫-೮-೧೯೭೩ |
| ೦೫ | ಚಿಂತಕ | ದಿನ | ಕನ್ನಡ | ಶೀಲಾ ತಿವಾರಿ | ೧೪-೪-೮೨ (ವಾರಪತ್ರಿಕೆಯಾಗಿದ್ದು ೬-೧೧-೮೪ರಿಂದ ದಿನಪತ್ರಿಕೆಯಾಗಿದೆ) |
| ೦೬ | ಕ್ರಾಂತಿ | ದಿನ | ಕನ್ನಡ | ಅನ್ನಪೂರ್ಣಮ್ಮ | ೨-೫-೬೨ (ಹುಬ್ಬಳ್ಳಿಯಲ್ಲಿ ಆರಂಭವಾಗಿದ್ದು ೧೯೬೫ರಿಂದ ಗುಲಬರ್ಗಾಕ್ಕೆ ವರ್ಗಗೊಂಡಿತು) |
| ೦೭ | ಭಾಗ್ಯಕಿರಣ | ದಿನ | ಕನ್ನಡ | ವೀರಣ್ಣ ಮಡಿವಾಳ | ೧೧-೮-೮೩ |
| ೦೮ | ವಿಶ್ವ ಪ್ರಚಾರ | ದಿನ | ಕನ್ನಡ | ವೆಂಕಟರಾವ್ ಖಮೀತಕರ್ | ೨೫-೯-೮೮ |
| ೦೯ | ಜೈ ಭೀಮಗದೆ | ದಿನ | ಕನ್ನಡ | ಶಂಕರ ಕೋಡ್ಲ | ೦೬-೧೨-೮೬ |
| ೧೦ | ನೃಪತುಂಗ | ದಿನ | ಕನ್ನಡ | ಶಿವರಾಯ ದೊಡ್ಮನಿ | ೧೯೮೪ (ವಾರಪತ್ರಿಕೆ ೮೯ರಿಂದ ದಿನಪತ್ರಿಕೆಯಾಗಿದೆ) |
| ೧೧ | ಉದಯ | ದಿನ | ಕನ್ನಡ | ಪರಶುರಾಮ ಮಾಲು | ೧೯೩೫ (ಬಿಜಾಪುರದಿಂದ ಬರುತ್ತಿದ್ದು, ೮೫ರಿಂದ ಗುಲಬರ್ಗಾಕ್ಕೆ ವರ್ಗಗೊಂಡಿದೆ) |
| ೧೨ | ಜಗವಾಣಿ | ದಿನ | ಕನ್ನಡ | ಕೆ. ಭೀಮರಾವ್ | ೧೯೭೬(ರಲ್ಲಿ ಪ್ರಾರಂಭಗೊಂಡು ನಂತರ ಸ್ಥಗಿತಗೊಂಡಿದ್ದು, ೫-೫-೯೨ರಿಂದ ಪುನಃ ಆರಂಭ ಗೊಂಡಿದೆ) |

| ೧ | ೨ | ೩ | ೪ | ೫ | ೬ |
|---|---|---|---|---|---|
| ೧೩ | ವೃತ್ತ ಮಂಜರಿ | ದಿನ | ಹಿಂದಿ | ಗೋವಿಂದರಾವ್ ಖಮೀತಕರ್ | ೯-೧೧-೭೭ |
| ೧೪ | ಇಂಡಿಪೆಂಡಂಟ್ ಸ್ಪಿರಿಟ್ | ದಿನ | ಆಂಗ್ಲ | ಬಿ. ಸುರೇಖ | ೧೪-೪-೯೩ |
| ೧೫ | ವಾಣಿ ಸಾಮ್ರಾಟ | ದಿನ | ಕನ್ನಡ | ಗೋವಿಂದರಾವ್ ಖಮೀತಕರ್ | ೧೫-೭-೯೨ |
| ೧೬ | ಕಲಬುರ್ಗಿ ವಾಣಿ | ದಿನ | ಕನ್ನಡ | ಕೇದಾರಲಿಂಗಯ್ಯ ಹಿರೇಮಠ್ | ೧-೧೧-೮೭ (ವಾರಪತ್ರಿಕೆಯಾಗಿದ್ದು ೧೧-೧೧-೮೯ರಿಂದ ದಿನಪತ್ರಿಕೆ) |
| ೧೭ | ದಿ ಬಹಮನಿ ನ್ಯೂಸ್ | ದಿನ | ಉರ್ದು | ಸರಮಸ್ತ | ೧೯೮೩ (ಸದ್ಯಕ್ಕೆ ಸ್ಥಗಿತವಾಗಿದೆ) |
| ೧೮ | ಕಲ್ಯಾಣ ನಾಡು | ದಿನ | ಕನ್ನಡ | ಬಿ.ಆರ್. ಪಾಟೀಲ | ೨೭-೭-೧೯೯೪ |
| ೧೯ | ಕಲಬುರ್ಗಿ ಕಹಳೆ | ದಿನ | ಕನ್ನಡ | ಕೆ. ಮಹದೇವಪ್ಪ | ೨೪-೩-೯೩ (ಸದ್ಯ ಸ್ಥಗಿತ ಗೊಂಡಿದೆ) |
| ೨೦ | ಸಂಜೆವಾಣಿ | ದಿನ | ಕನ್ನಡ | ಎನ್. ಮಧುಸೂದನ್ | ೪-೧೧-೧೯೯೪ |
| ೨೧ | ಆಕ್ರೋಶ | ದಿನ | ಕನ್ನಡ | ಭಾರತಿ ಎಸ್. ರೇಶ್ಮಿ | ೧೩-೨-೧೯೯೫ |
| ೨೨ | ಬಜ್ಮೆಸಿಯಾಸತ್ | ದಿನ | ಉರ್ದು | ಎಸ್.ಎಂ. ಫಿರೋಜ ಝುಂಜಾನಿ | ೨೨-೮-೧೯೯೩ |
| ೨೩ | ಶೇಖರ | ದಿನ | ಕನ್ನಡ | --- | ೪-೧೧-೯೩ (ಸದ್ಯ ಸ್ಥಗಿತಗೊಂಡಿದೆ) |
| ೨೪ | ಪ್ರಚಾರ ಪ್ರಪಂಚ | ದಿನ | ಕನ್ನಡ | ರಮೇಶ ಖಮೀತಕರ್ | ೧೧-೮-೯೫ (ವಾರಪತ್ರಿಕೆಯಾಗಿದ್ದು ೨೬-೧೧-೯೫ರಿಂದ ದಿನಪತ್ರಿಕೆ) |
| ೨೫ | ನಿತ್ಯ ಸಂಗಾತಿ | ದಿನ | ಕನ್ನಡ | ಲಿಂಗಾರೆಡ್ಡಿ | ೧೧-೦೬-೧೯೯೩ |
| ೨೬ | ಕಲಬುರ್ಗಿ ಪ್ರತಿನಿಧಿ | ದಿನ | ಕನ್ನಡ | ರವಿಕುಮಾರ ಹೊನ್ನ | ಸದ್ಯ ಸ್ಥಗಿತವಾಗಿದೆ. |
| ೨೭ | ನಾಡಸೇವೆ | ದಿನ | ಕನ್ನಡ | ಬಸವರಾಜ | ೬-೫-೧೯೯೪ |
| ೨೮ | ಸುವಿಚಾರ | ದಿನ | ಕನ್ನಡ | ರಘುನಾಥರಾವ್ ಮುಗಳಿ | ಸದ್ಯ ಸ್ಥಗಿತಗೊಂಡಿದೆ. |
| ೨೯ | ರಹನುಮಾ-ಎ-ಗುಲ್ಬರ್ಗಾ | ದಿನ | ಉರ್ದು | ಎಂ.ಎ. ಹುಸೇನ್ | ಸ್ಥಗಿತಗೊಂಡಿದೆ |
| ೩೦ | ಇಂಕಿಲಾಬ-ಎ-ಡೆಕ್ಕನ್ | ದಿನ | ಉರ್ದು | ಅಲ್ಲಾವುದ್ದೀನ್ ಪಾಶಾ | ೧೨-೧೧-೯೫ |
| ೩೧ | ಉದಯಗರ್ಜನೆ | ದಿನ | ಕನ್ನಡ | ಪರಶುರಾಮ ಮಹೇಶ್ವರಿ | ೧೫-೮-೯೫ |
| ೩೨ | ಎಸ್. ಚಿತ್ರ ಅಮೃತ್ | ದಿನ | ಕನ್ನಡ | ಯಡ್ಡಳ್ಳಿ ವೀರನಗೌಡ | ೨೧-೫-೯೨ (ಪಾಕ್ಷಿಕವಾಗಿದ್ದು ೨೧-೧೨-೯೪ರಿಂದ ದಿನಪತ್ರಿಕೆ) |

| ೧ | ೨ | ೩ | ೪ | ೫ | ೬ |
|---|---|---|---|---|---|
| ೩೩ | ವಾಹಿನಿ ವಾರ್ತೆಗಳು | ದಿನ | ಕನ್ನಡ | ಪ್ರಭಾಕರ ಜೋಷಿ | ವಾರಪತ್ರಿಕೆಯಾಗಿದ್ದು ದಿನಪತ್ರಿಕೆಯಾಗಿ ಸ್ಥಗಿತಗೊಂಡಿದೆ. |
| ೩೪ | ಗ್ರಾಮವಾಣಿ | ದಿನ | ಕನ್ನಡ | ಅಪ್ಪಾರಾವ್ ಬಿರಾದಾರ್ | ಸ್ಥಗಿತಗೊಂಡಿದೆ. |
| ೩೫ | ದಿ ವಿಕಾಸ್ ವೀಕ್ಲಿ | ವಾರ | ಉರ್ದು | ಜಮೀದ್ ಅಕ್ಮಲ್ | ೧೦-೨-೯೧ ಸ್ಥಗಿತಗೊಂಡಿದೆ. |
| ೩೬ | ಕನ್ನಡ ಶಕ್ತಿ | ವಾರ | ಕನ್ನಡ | ರಾಜೇಂದ್ರ ಪಾಟೀಲ | ೬-೨-೯೪ ಸ್ಥಗಿತಗೊಂಡಿದೆ. |
| ೩೭ | ಕ್ಷತ್ರಿಯ ಕಿರಣ | ವಾರ | ಕನ್ನಡ | ರಮೇಶ್.ಎನ್. ಖಮೀತಕರ್ | ೨೭-೨-೯೫ ಸ್ಥಗಿತಗೊಂಡಿದೆ. |
| ೩೮ | ಸುದ್ದಿವಾಹಕ (ಜೇವರ್ಗಿ) | ವಾರ | ಕನ್ನಡ | ಕೆ.ಎಸ್. ಕೋಬಾಳ | ಸ್ಥಗಿತಗೊಂಡಿದೆ. |
| ೩೯ | ಶೆಳ್ಳಗಿ ಪತ್ರಿಕೆ | ವಾರ | ಕನ್ನಡ | ದೇವೇಂದ್ರ ಶೆಳ್ಳಗಿ | ೧೯೯೩ (ಮೊದಲು ಮಾಸಿಕವಾಗಿ ನಂತರ ವಾರಪತ್ರಿಕೆಯಾಯಿತು) |
| ೪೦ | ಯಾದಗಿರಿ ವಾರ್ತೆ | ವಾರ | ಕನ್ನಡ | ಅನಿಲ ದೇಶಪಾಂಡೆ | ೮-೧೧-೯೪ |
| ೪೧ | ಅಗ್ನಿ ಅಂಕುರ (ಶಹಪುರ) | ಪಾಕ್ಷಿಕ | ಕನ್ನಡ | ವಿಶ್ವಾರಾಧ್ಯ ಸತ್ಯಂಪೇಟೆ | -- |
| ೪೨ | ಶೋಷಿತರ ಕೂಗು | ಪಾಕ್ಷಿಕ | ಕನ್ನಡ | ವೀರಣ್ಣ ತಿಮ್ಮಾಜಿ | -- |
| ೪೩ | ಜನಬೆಂಬಲ | ಮಾಸಿಕ | ಕನ್ನಡ | ಹನುಮಂತ ಕೌಂಟೆ | ಆಗಸ್ಟ್ ೧೯೯೩ |
| ೪೪ | ಯುವ ಸಂಘಟನೆ | ಮಾಸಿಕ | ಕನ್ನಡ | ಶಿವಶರಣಯ್ಯ.ಬಿ. ಮಠಪತಿ | ಜುಲೈ ೧೯೯೫ |
| ೪೫ | ವಿಜಯ ಕ್ರಾಂತಿ | ಮಾಸಿಕ | ಕನ್ನಡ | ಸೂರ್ಯಕಾಂತ ಪಾಟೀಲ | ೧೯೯೫ |
| ೪೬ | ಜನಾಭಿಮಾನಿ | ಮಾಸಿಕ | ಕನ್ನಡ | ನಿರ್ಮಲಾದೇವಿ ಸಾಳುಕ್ಯ | ಫೆಬ್ರುವರಿ ೧೯೯೭ |

**ಆಧಾರ** : ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಗುಲಬರ್ಗಾ ಅವರ ಪತ್ರ ೧೨.೪.೧೯೯೬

## ಸಂಗೀತ

ಸುರಪುರ ಸಂಸ್ಥಾನ ಸಂಗೀತ ಕಲೆಗೂ ಪ್ರೋತ್ಸಾಹ ನೀಡಿತ್ತು. ಆನಂದದಾಸರು (೧೮೪೦-೧೯೧೦) ಆಸ್ಥಾನ ನರ್ತಕಿಯರಿಗೆ ಸಂಗೀತ ಕಲಿಸುತ್ತಿದ್ದರಲ್ಲದೆ ಅನೇಕ ಕೀರ್ತನೆ, ಆಖ್ಯಾನ ಹಾಗೂ ಕಾವ್ಯಗಳನ್ನು ರಚಿಸಿದ್ದಾರೆ. ಭಗವದ್ಗೀತೆಯನ್ನು ಕೀರ್ತನ ಗೀತೆಯಾಗಿ ರೂಪಾಂತರಿಸಿದ್ದರು. ಇವರ ಹಾಡುಗಳಲ್ಲಿ ಹಿಂದೂಸ್ಥಾನಿ ಹಾಗೂ ಕರ್ನಾಟಕ ಗಾಯನ ಪದ್ಧತಿಯ ಸಾಮರಸ್ಯವಿದೆಯೆಂದು ವಿದ್ವಾಂಸರ ಅಭಿಪ್ರಾಯ. ಸುರಪುರದ ಭೀಮಾಬಾಯಿ, ಬಂಗಾರಮ್ಮ, ಕನಕಾಬಾಯಿ ಅವರುಗಳು ಹಿಂದೂಸ್ಥಾನಿ ಸಂಗೀತಗಾರರಾಗಿದ್ದರು.

ಪಂಡಿತ ಸಿದ್ಧರಾಮ ಜಂಬಲದಿನ್ನಿ ಅವರು ಗುಲಬರ್ಗಾದ ಶರಣ ಬಸವೇಶ್ವರ ಕಲಾ ಮಹಾವಿದ್ಯಾಲಯಕ್ಕೆ ೧೯೭೦ರ ಸುಮಾರಿನಲ್ಲಿ ಬಂದ ಮೇಲೆ ಜಿಲ್ಲೆಯ ಸಂಗೀತ ಕ್ಷೇತ್ರದಲ್ಲಿ ಹೊಸ ಚೈತನ್ಯ ಮೂಡುವಂತಾಯಿತು. ಜಂಬಲದಿನ್ನಿ ಅವರು ಮೂಲತಃ ರಾಯಚೂರಿನ ಮಾನ್ವಿಯವರಾದರೂ, ಗದುಗಿನ ಪಂಚಾಕ್ಷರಿ ಗವಾಯಿ ಹಾಗೂ ಮಲ್ಲಿಕಾರ್ಜುನ ಮನ್ಸೂರ ಅವರ ಬಳಿ ಕಲಿತು, ತಮ್ಮ ಜೀವಿತಾವಧಿಯ ಕೊನೆಯ ಹದಿನೆಂಟು ವರ್ಷಗಳು ಗುಲಬರ್ಗಾದಲ್ಲಿ ಕಳೆದಿದ್ದು ಜಿಲ್ಲೆಯವರಲ್ಲಿಯೇ ಒಬ್ಬರಂತಿದ್ದರು. ಅವರು ಶಾಸ್ತ್ರೀಯ ಹಿಂದೂಸ್ಥಾನಿ ಸಂಗೀತ ಹಾಡುತ್ತಿದ್ದುದಲ್ಲದೆ, ಶಿವಶರಣರ ಹಾಡುಗಳು, ಶೂನ್ಯ ಸಂಪಾದನೆ ಇತ್ಯಾದಿಗಳನ್ನು ಶಾಸ್ತ್ರೀಯವಾಗಿ ಹಾಡಿ ಸಂಗೀತವನ್ನು ಜನಪ್ರಿಯಗೊಳಿಸಿದರು. ಗುಲಬರ್ಗಾದಲ್ಲಿ ನೆಲೆಸಿದಾಗಿನಿಂದ ಕೊನೆಯವರೆಗೂ ಜಂಬಲದಿನ್ನಿ ಅವರೊಂದಿಗೆ ಕೆ.ಎಸ್. ಹಡಪದ ಅವರು ತಬಲಾ ಸಾಥಿಯಾಗಿದ್ದರು ಹಾಗೂ ಸಂಗೀತ ಕ್ಷೇತ್ರದಲ್ಲಿ ಜಂಬಲದಿನ್ನಿ ಅವರು ಸಾಕಷ್ಟು ಕಲಾವಿದರನ್ನು ರೂಪಿಸಿದರು. ಜಂಬಲದಿನ್ನಿ ಅವರ ಶಿಷ್ಯರಾದ, ರಾಯಚೂರಿನವರಾದ ನರಸಿಂಹಲು ವಡಿವಾಟಿ ಅವರು ಜಂಬಲದಿನ್ನಿ ಅವರ ಹೆಸರಿನಲ್ಲಿ ಸಂಗೀತ ಶಾಲೆ ನಡೆಸುತ್ತಿರುವುದಲ್ಲದೆ ವಾರ್ಷಿಕ ಸ್ವರಾಂಜಲಿ ಕಾರ್ಯಕ್ರಮ ಸಹ ಏರ್ಪಡಿಸುತ್ತಿದ್ದು ಗುಲಬರ್ಗಾ ಜಿಲ್ಲೆಯ ಬಹಳಷ್ಟು ಕಲಾವಿದರು ಕಾರ್ಯಕ್ರಮದಲ್ಲಿ ಪಾಲುಗೊಳ್ಳುತ್ತಾರೆ. ಜಂಬಲದಿನ್ನಿ ಅವರಿಗೆ ೧೯೮೧ರಲ್ಲಿ ಸಾಹಿತ್ಯ ಅಕಾಡಮಿಯಿಂದ ಹಾಗೂ ೧೯೮೫-೮೬ರಲ್ಲಿ ಸಂಗೀತ ನೃತ್ಯ ಅಕಾಡಮಿಯಿಂದ ಪ್ರಶಸ್ತಿ ಹಾಗೂ 'ಕರ್ನಾಟಕ ಕಲಾತಿಲಕ' ಬಿರುದು ಬಂದಿತ್ತು.

ಇದಕ್ಕೂ ಮೊದಲೇ ಸ್ವಾತಂತ್ರ್ಯ ಪೂರ್ವದಲ್ಲಿ ಪಾಂಡುರಂಗರಾವ್ ಪದಕಿ ಅವರು ಸ್ವಂತವಾಗಿ ಸಂಗೀತ ಕಲಿತು ಮೈಸೂರು, ಗುಲಬರ್ಗಾ ಅಲ್ಲದೆ ಉತ್ತರ ಭಾರತದ ಕೆಲವು ಸ್ಥಳಗಳಲ್ಲೂ ಸಂಗೀತ ಕಾರ್ಯಕ್ರಮ ನೀಡಿದ್ದರು. ಆಕಾಶವಾಣಿ ಕಲಾವಿದರೂ ಆಗಿದ್ದರು. ಹಾರ್ಮೋನಿಯಂ ವಾದ್ಯಗಾರ ಕೃಷ್ಣರಾವ್ ಅವರೊಂದಿಗೆ ಸೇರಿ 'ಕಲಾಮಂದಿರ' ಸ್ಥಾಪಿಸಿ ಹಲವಾರು ಶಿಷ್ಯರನ್ನು ರೂಪಿಸಿದ್ದರು. ಜಿಲ್ಲೆಯ ಇನ್ನೊಬ್ಬ ಸಂಗೀತಗಾರ್ತಿ ಸರೋಜ ಅನಗರಕರ್ ಅವರೂ ಮೊದಲಿಗೆ ಪದಕಿ ಅವರಲ್ಲಿ ಅಭ್ಯಾಸ ಮಾಡಿದವರು. ಹಾಡುಗಾರರಾಗಿದ್ದ ಆನಂದರಾವ್ ಪೂಜಾರಿ, ಸಿತಾರ್ ವಾದಕರಾಗಿದ್ದ ಫಕ್ರುದ್ದೀನ್, ತಬಲಾ ವಾದಕರಾಗಿದ್ದ ಸುಮನ್ ರಾವ್ ಕುಲಕರ್ಣಿ, ಶಹಬಾದ್‌ನಲ್ಲಿರುವ ತಬಲಾ ವಾದಕ ಗುರುನಾಥರಾವ್ ಅಂಗೂರ್‌ಕರ್ ಅವರುಗಳು ಆ ಕಾಲದ ಕಲಾವಿದರು.

ಮೂಲತ ಮುಂಬೈಯಲ್ಲಿ ಪಂಡಿತ್ ಪ್ರತಾಪ ಸರಣಿ ಅವರಲ್ಲಿ ಹಿಂದೂಸ್ಥಾನಿಯ ಮೇವಾತಿ ಘರಾಣ ಶೈಲಿಯನ್ನು ಅಭ್ಯಸಿಸಿದ ತಾರಾಬಾಯಿ ಕುಲಕರ್ಣಿ ಅವರು ಗುಲಬರ್ಗಾದಲ್ಲಿ ೧೯೭೮ರಿಂದಲೇ ಕಛೇರಿ ನೀಡಲಾರಂಭಿಸಿದರು. ೧೯೯೧ರಲ್ಲಿ ಸರಸ್ವತಿ ಸಂಗೀತ ವಿದ್ಯಾಲಯ ಪ್ರಾರಂಭಿಸಿದರು. ಇದಲ್ಲದೆ ವಿ. ಜೆ. ಮಹಿಳಾ ಕಾಲೇಜಿನಲ್ಲಿ ಸಂಗೀತ ವಿಭಾಗವನ್ನು ಪ್ರಾರಂಭಿಸಿ ಅಲ್ಲಿಯೇ ಪ್ರಾಧ್ಯಾಪಕಿಯೂ ಆಗಿದ್ದರು. ನಳಿನಿಬಾಯಿ ಖಣ್ಣೆ, ವಾಣಿ ಪ್ರಮೋದ್ ದೇಸಾಯಿ, ಕವಿತಾ ಜವಳಿ, ಉಮಾ ಪುರಾಣಿಕ್, ರಮೇಶ್ ಕುಲಕರ್ಣಿ, ಸುಧಾಕರ್, ವೆಂಕಟರಾವ್ ಕುಲಕರ್ಣಿ ಮುಂತಾದ ಹಲವಾರು ಕಲಾವಿದರನ್ನು ತಯಾರಿಸಿದರು. ಇದರೊಂದಿಗೆ ಪಕ್ಕವಾದ್ಯ ಕಲಾವಿದರಾಗಿ ಸರ್ಬಣ್ಣ ಪಾಟೀಲ್, ಶ್ರೀಕಾಂತ್ ದೇವಿಪುರ ಮುಂತಾದವರಿದ್ದರು. ತಾರಾಬಾಯಿ ಅವರು ಕುಟುಂಬದ ಸದಸ್ಯರೊಂದಿಗೆ ಗೀತ ರಾಮಾಯಣದ ಕಛೇರಿಗಳನ್ನು ಗುಲಬರ್ಗಾ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆಸಿದ್ದರು. ಇವರಿಗೆ ಯುವಜನ ಕಾರ್ಯಾಲಯದಿಂದ ೧೯೮೮ರಲ್ಲಿ ನಡೆದ ಅಂತರ ವಿಶ್ವವಿದ್ಯಾಲಯ ಯುವ ಜನೋತ್ಸವದಲ್ಲಿ ಹಾಗೂ ೧೯೯೧ರಲ್ಲಿ ಬಳ್ಳಾರಿಯಲ್ಲಿ ನಡೆದ ಯೂನಿಫೆಸ್ಟ್-೯೧ ನಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸರೋಜ ಅನಗರಕರ್ ಅವರು ೧೯೭೦ರ ಸುಮಾರಿನಲ್ಲೇ ಸಂಗೀತಾಭ್ಯಾಸ ಮಾಡಿದ್ದು ೧೯೮೮ರಲ್ಲಿ 'ಸ್ವರಾಂಜಲಿ' ಸಂಗೀತ ಶಾಲೆಯನ್ನು ಪ್ರಾರಂಭಿಸಿದರು. ಶಾಲೆ ಅಖಿಲಬಾರತ ಮಟ್ಟದಲ್ಲಿ ಮಾನ್ಯತೆ ಹೊಂದಿದ್ದು ಸ್ನಾತಕ ಮಟ್ಟದ ಪರೀಕ್ಷೆಗೆ ತರಬೇತಿ ನೀಡಲಾಗುತ್ತದೆ. ಸರೋಜ ಅವರು ಸಂಗೀತ ಭೂಷಣ ಪದವಿ ಪಡೆದಿದ್ದು ಇವರ ಶಿಷ್ಯರಾದ ಉಷಾ ಬಟವಾಡಿ, ರಮೇಶ್ ಕುಲಕರ್ಣಿ, ಶ್ರೀಕಾಂತ ದೇವಿಪುರ ಅವರುಗಳು ಸ್ನಾತಕೊತ್ತರ ಪದವಿಗೆ ಸಮವಾದ ಸಂಗೀತಾಲಂಕಾರ ಪದವಿ ಪಡೆದಿದ್ದಾರೆ. ಇನ್ನೊಬ್ಬ ಶಿಷ್ಯರಾದ ಪೂರ್ಣಿಮಾ ರಾಮಾಚಾರ್ ಅವರು ಹಿಂದುಸ್ಥಾನಿ ಹಾಡುಗಾರಿಕೆಯಲ್ಲಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ರಾಷ್ಟ್ರಕ್ಕೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸರೋಜ ಅವರು ವಿದ್ಯಾಭ್ಯಾಸ ಇಲಾಖೆಯಲ್ಲಿ ವಿಭಾಗೀಯ ಸಂಗೀತ ಪರೀಕ್ಷಾಧಿಕಾರಿಯಾಗಿದ್ದು, ಈವರೆಗೆ ೭೫ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತರಬೇತಿ ಗೊಳಿಸಿದ್ದಾರೆ. ವಿಭಾಗದಲ್ಲಿ ವರ್ಷಕ್ಕೆ ಸುಮಾರು ೪೦ ವಿದ್ಯಾರ್ಥಿಗಳು ಸಂಗೀತ ಪರೀಕ್ಷೆ ತೆಗೆದುಕೊಳ್ಳುತ್ತಾರೆ. ಸರೋಜ ಅವರು ೧೯೯೩ ಹಾಗೂ ೧೯೯೪ರಲ್ಲಿ ದಿನವಿಡೀ (೨೪ ತಾಸುಗಳ) ಸ್ವರಾಂಜಲಿ ಕಾರ್ಯಕ್ರಮ ಏರ್ಪಡಿಸಿದ್ದರು.

ಗುಲಬರ್ಗಾದ ಹಲವಾರು ಶಾಲಾ ಕಾಲೇಜುಗಳಲ್ಲಿ ಸಂಗೀತ ತರಗತಿಗಳಿದ್ದು ಗಣನೀಯ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಗೀತಾ ಗಾಯಿತ್ರಿ ಅವರು. ಗೋದುತಾಯಿ ಕಿರಿಯ ಹಾಗೂ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲಾವತಿ ಗೋರೆ ಅವರು. ಎಸ್. ಬಿ. ಕಲಾ ಕಾಲೇಜಿನಲ್ಲಿ ತಬಲಾಗೆ ಎಂ. ಎಸ್. ಪಾಟೀಲ್ ಅವರು ವಿ. ಜಿ. ಮಹಿಳಾ ಕಾಲೇಜಿನಲ್ಲಿ ಸಂಗೀತಕ್ಕೆ ಮಾಹುಕರ್ ಹಾಗೂ ತಬಲಾವಿಗೆ ಮಹಮದ್ ಮಿಯ ಅವರುಗಳು ಬೋಧಕರಾಗಿದ್ದಾರೆ.

ಸಂಗೀತಗಾರ ಹನುಮಣ್ಣ ನಾಯಕ ದೊರೆ ಅವರು ಬಸವಾದಿ ಶರಣರ ವಚನಗಳನ್ನು ಹಿಂದೂಸ್ಥಾನಿ ಶೈಲಿಯಲ್ಲಿ ಹಾಡಿ ಜನಪ್ರಿಯಗೊಳಿಸಿದ್ದಾರೆ. ೧೯೯೨ರಲ್ಲಿ ರಾಜ್ಯ ಪ್ರಶಸ್ತಿ ಪಡೆದಿರುವ ಇವರಿಗೆ ಗಾನಗಂಧರ್ವ ಪ್ರಶಸ್ತಿ ಬಂದಿದೆ. ಇವರ ಬಗ್ಗೆ ಶಿವರಾಜ ಪಾಟೀಲರು 'ಲೇಸಬಯಸುವವರು' ಎಂಬ ಪುಸ್ತಕ ಬರೆದಿದ್ದಾರೆ. ಪ್ರಸ್ತುತ ದೊರೆಯವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಶರಣರ ವಚನಗಳನ್ನು ದಾಸರ ಕೀರ್ತನೆಗಳನ್ನು ಹಿಂದೂಸ್ತಾನಿಯಲ್ಲಿ ಹಾಡುವುದರ ಮೂಲಕ ಜನರ ಮೆಚ್ಚುಗೆ ಗಳಿಸಿದ ಇನ್ನೊಬ್ಬರೆಂದರೆ ಪಂಚಾಕ್ಷರಿ ಕಣವಿ ಅವರು. ಹಲವಾರು ಅಪೂರ್ವರಾಗಗಳೊಂದಿಗೆ ಭಾವಾರ್ಥ ಹಿನ್ನೆಲೆಗಳನ್ನು ನೀಡಿ ಶ್ರೋತೃಗಳಲ್ಲಿ ಸಂಗೀತ ಪ್ರೇಮ ಬೆಳೆಸಿದ್ದಾರೆ. ಹಲವಾರು ಶಿಷ್ಯರನ್ನು ರೂಪಿಸಿದ್ದಾರೆ. ಪಕ್ಕವಾದ್ಯವಾದ ತಬಲವಿನಲ್ಲಿ ಖ್ಯಾತಿ ಹೊಂದಿದವರೆಂದರೆ ಕೆ. ಎಸ್. ಹಡಪದ ಅವರು. ಸುಮಾರು ೩೦ ವರ್ಷಗಳಿಂದ ಪ್ರಖ್ಯಾತ ಕಲಾವಿದರುಗಳಿಗೆ ಸಾಥಿ ನೀಡುತ್ತಿರುವ ಹಡಪದ ಅವರು ಹಿಂದೆ ಸಂಗೀತ ನೃತ್ಯ ಅಕಾಡಮಿಯ ಸದಸ್ಯರಾಗಿದ್ದು ೧೯೯೭ರಲ್ಲಿ ಅಕಾಡಮಿ ಅವರಿಗೆ ಪ್ರಶಸ್ತಿ ನೀಡಿದೆ.

ಜಿಲ್ಲೆಯಲ್ಲಿ ಮೊದಲಿನಿಂದಲೂ ಕರ್ನಾಟಕ ಸಂಗೀತಕ್ಕೆ ಹೆಚ್ಚಿನ ಒಲವು ಇಲ್ಲವಾದರೂ ೧೯೫೭ರಲ್ಲೇ ಗುಲಬರ್ಗಾಕ್ಕೆ ಬಂದು ನೆಲಸಿದ ಪಿ. ಸರಸ್ವತಿ ತಂತ್ರಿ ಅವರು ಇಲ್ಲಿಗೆ ಬರುವ ಮೊದಲು ಮಣಿಪಾಲದ ಮಾಧವ ಪೈ ಅವರ ಅಕಾಡಮಿಯಲ್ಲಿ ಕರ್ನಾಟಕ ಸಂಗೀತ ಅಭ್ಯಸಿಸಿದ್ದರು. ಇಲ್ಲಿ ನೆಲೆಸಿದ ಮೇಲೆ ರಾಮನವಮಿ, ಗಣೇಶ ಚತುರ್ಥಿಗಳಲ್ಲಿ ಹಾಗೂ ಆಕಾಶವಾಣಿಯಲ್ಲೂ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇಪ್ಪತ್ತು ವರ್ಷಗಳ ಹಿಂದೆ ಕರ್ನಾಟಕ ಸಂಗೀತ ಸಭಾ ಎಂಬ ಸಂಸ್ಥೆ ಆರಂಭಿಸಿದರು. ಈ ಸಂಸ್ಥೆಯ ವತಿಯಿಂದ ತ್ಯಾಗರಾಜ ಹಾಗೂ ಪುರಂದರದಾಸರ ಆರಾಧನೆಗಳು, ರಾಮನವಮಿ ಉತ್ಸವಗಳು ಜರಗುತ್ತಿದ್ದು, ಆ ವೇಳೆಯಲ್ಲಿ ಸಂಗೀತೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ಸರಸ್ವತಿ ತಂತ್ರಿ ಅವರ ಪತಿ ದಿವಂಗತ ಪಾದೂರು ರಾಮಕೃಷ್ಣ ತಂತ್ರಿ ಅವರ ಹೆಸರಿನಲ್ಲಿರುವ ದತ್ತಿ ಸಮಿತಿಯಿಂದ ರಾಮಮಂದಿರವೊಂದು ನಿರ್ಮಿಸಲಾಗಿದ್ದು ಆಗಾಗ್ಗೆ ಇಲ್ಲಿ ಸಂಗೀತ ಕಛೇರಿಗಳು ನಡೆಯುತ್ತವೆ. ಹೊರಗಿನ ಪ್ರಸಿದ್ಧ ಕಲಾವಿದರನ್ನು ಸಹ ಇಲ್ಲಿ ಆಹ್ವಾನಿಸಿ ಕಛೇರಿ ನಡೆಸಲಾಗುತ್ತಿದೆ. ಇವರ ವಿದ್ಯಾರ್ಥಿನಿಯರ ಪೈಕಿ ಕಾಳಿಂದಿ ಅವರು ಖ್ಯಾತರಾಗಿದ್ದಾರೆ. ಸರೋಜ ಅನಗರಕರ್ ಅವರ 'ಸ್ವರಾಂಜಲಿ' ಸಂಸ್ಥೆಯಿಂದ ಸರಸ್ವತಿ ತಂತ್ರಿ ಅವರಿಗೆ ಭೀಮಸೇನ ಜೋಶಿ ಅವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು.

ಕೊಳಲುವಾದಕ ಶೇಕ ಅಬ್ದುಲ್ಲಾ ಖಾಜಿ, ತಬಲವಾದಕ ಕೆ. ಎಸ್. ಹಡಪದ, ಸಂಗೀತಗಾರರಾದ ಫಕೀರೇಶ್ ಕಣವಿ, ಶಿವಣ್ಣ, ದೇಸಾಯಿ ಮುಂತಾದವರ ಪ್ರಯತ್ನದಿಂದಾಗಿ ಶ್ರೀಗಾನಯೋಗಿ ಪಂಚಾಕ್ಷರಿ ಗವಾಯಿಗಳವರ

ಕಲಾಸಂಘವೊಂದು ೧೯೯೦ರಲ್ಲಿ ಗುಲಬರ್ಗಾದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಫೆಬ್ರವರಿ ೧೯೯೫ರಲ್ಲಿ ಅದರ ಐದನೇ ಸಮ್ಮೇಳನ ನಡೆಯಿತು. ಎರಡು ದಿನಗಳ ಸಮ್ಮೇಳನದಲ್ಲಿ ಜಿಲ್ಲೆಯ ಹಾಗೂ ಹೊರಗಿನ ಅನೇಕ ಕಲಾವಿದರು ಭಾಗವಹಿಸಿದ್ದರು.

'ಸ್ವರಾಂಜಲಿ' ಅವರಿಂದ ಪದಕಿ ಅವರ ಹಾಗೂ ಹನುಮಣ್ಣ ನಾಯಕ ದೊರೆ ಅವರಿಂದ ಬಸವರಾಜ ರಾಜಗುರು ಅವರ - ಸ್ವರಾಂಜಲಿ ಕಾರ್ಯಕ್ರಮ ನಡೆಯುತ್ತದೆ.

**ಆಕಾಶವಾಣಿ**

ಗುಲಬರ್ಗಾದಲ್ಲಿ ೧೯೬೬ ರಲ್ಲಿ ಆಕಾಶವಾಣಿ ಕೇಂದ್ರ ಆರಂಭವಾಗಿದ್ದು ಸ್ಥಳೀಯ ಕಲಾವಿದರು ಪಾಲುಗೊಳ್ಳುವಂತಾಯಿತು. ಪಾಂಡುರಂಗರಾವ್ ಪದಕಿ, ಸಿದ್ದರಾಮ ಜಂಬಲದಿನ್ನಿ,ಗುರನಾಥರಾವ್ ಅಲಗರಕರ್ ಅವರುಗಳು ಆರಂಭದ ದಿನಗಳಲ್ಲಿ ನಿಲಯದ ಕಲಾವಿದರಾಗಿದ್ದರು. ಆಕಾಶವಾಣಿಯ ನಿಯಮದಂತೆ ನಿಲಯದ ಕಲಾವಿದರಾಗಿ ಆಯ್ಕೆಯಾಗಿರುವವರಲ್ಲದೆ, ನಿಲಯದಲ್ಲಿ ಕಾರ್ಯಕ್ರಮಗಳನ್ನು ನೀಡಿರುವ ಅನೇಕ ಕಲಾವಿದರು ಜಿಲ್ಲೆಯಲ್ಲಿದ್ದಾರೆ. ಕೆ. ಎಸ್. ಹಡಪದ್, ಗುಂಡ ಭಟ್ಟ ಜೋಶಿ, ರಾಮರಾವ್ ಪದಕಿ, ಸೋಮಶೇಖರ ಹಾಗರಗಿ, ಶೇಖ ಅಬ್ದುಲ್ಲ ಖಾಜಿ, ಫಕೀರೇಶ್ ಕಣವಿ, ರೇವಣಪ್ಪ ಕುಂಕುಂಗಾರ್, ಶಫೀರ್, ಎ ಖಾನ್, ಹನುಮಣ್ಣನಾಯಕದೊರೆ, ಸರೋಜ ಅನಗರಕರ್, ನಿರ್ಮಲಾ ರಾಜಗುರು, ಗೀತಾ ಹಾಗೂ ಗಾಯತ್ರಿ ಚಕ್ರವರ್ತಿ, ಪಂಚಾಕ್ಷರಿ ಸ್ವಾಮಿ, ಶಾಂತಲಿಂಗ ದೇಸಾಯಿ ಕಲ್ಲೂರ್, ಸಿದ್ದಣ್ಣ ದೇಸಾಯಿ ಕಲ್ಲೂರ ಮುಂತಾದ ಅನೇಕರನ್ನು ಹೆಸರಿಸಬಹುದು ಇವರುಗಳಲ್ಲಿ ಹಾಡುಗಾರಿಕೆಯ ಕಲಾವಿದರಲ್ಲದೆ ವಿವಿಧ ವಾದ್ಯಗಳನ್ನು ನುಡಿಸುವ ಕಲಾವಿದರೂ ಇದ್ದಾರೆ.

ಆಕಾಶವಾಣಿಯಲ್ಲಿ ಜನಪದ ಕಲಾವಿದರ ತಂಡವೂ ಇದೆ. ಗೀಗೀ ಪದಕ್ಕೆ ಕಾಶಿನಾಥ, ಅಮೃತನಾಥ್ ಚವಾಣ, ವಿಠಲದಾಸ ಅಂಬಾದಾಸ ಜತೋರಿ, ಶಿವಶರಣಯ್ಯ ಸ್ವಾಮಿ ಮಂಟಾಳಕರ್, ಗಿರಿಜಾಬಾಯಿ ಬಾಲಪ್ಪ ನಾಗೂರ, ಶಕುಂತಲ ಎಚ್. ರಾಠೋಡ್, ಕಲ್ಯಾಣಪ್ಪ ಶಾಂತಪ್ಪ ಶೀಲವಂತ, ಸಂಪ್ರದಾಯದ ಹಾಡುಗಳಿಗೆ ಮಾದೇವಿ ಮರತೂರ, ಕಲ್ಯಾಣಮ್ಮ ತುಳಜಾರಾವ್ ಭಾಸ್ಕರ್, ಲಕ್ಷ್ಮೀಬಾಯಿ ಶಿವಶರಣ, ಸಿದ್ದಮ್ಮ ಕೈಲಾಸಯ್ಯ ಸಾಲಿಮಠ, ಬಸಮ್ಮ ಹಲಗನ್‌ನವರ, ಶಾಂತಾಬಾಯಿ ಮಾಡಗಿ, ಗುರುಬಾಯಿ ದ್ವಾಮಣಿ, ಕೋಲುಪದಕ್ಕೆ ರಾಚಯ್ಯ ಹಿರೇಮಠ, ಬಸಣ್ಣ ಮರೆಪ್ಪ ಇಬ್ರಾಯಿಂಪುರ, ದೊಡ್ಡಾಟಕ್ಕೆ ಚಂದ್ರಶೇಖರ ಎಂ. ಹೊಸೂರ್‌ಕರ್, ಶಿವಲಿಂಗಯ್ಯ ಆರ್. ಸಾಲಿಮಠ ಅವರುಗಳು ಇದ್ದಾರೆ. ಉಳಿದಂತೆ ರಾಮಲಿಂಗಯ್ಯ ವಿ. ಕಲಬುರ್ಗಿ (ತತ್ವಪದ), ಮೈಲಾರಪ್ಪ ಶರಣಪ್ಪ ಪಾಟೀಲ (ಡಪ್ಪಿನಾಟ) ಜೀತಪ್ಪ ರಾಮಚಂದ್ರ ಭಜಂತ್ರಿ (ಕರಡಿ ಮಜಲು), ಭೀಮಶಾ ಚಂದ್ರಮಪ್ಪ (ಡೊಳ್ಳಿನ ಪದ), ಚಂದ್ರಕಾಂತ್ ಮೈಲಾರಪ್ಪ ಕಂಡೋಜಿ (ಭಜನೆ), ಶರಣಪ್ಪ, ವಡಗೇರಿ (ಜನಪದ ಗೀತೆ), ದೇವರಾವ್ (ಗೊಂದಲಿಗರ ಮೇಳ), ಈಶ್ವರಾವ್ ಎಂ. ಕರುಣಸಾಗರ್ (ಭಜನೆ), ಶರಣಪ್ಪ ಪಿ. ಗೋಟೆ (ರಿವಾಯತ್ ಪದಗಳು) ಹಾಗೂ ಗುಂಡಪ್ಪ ಶಿವಯೋಗೆಪ್ಪ ಹೊಗಾರ ಅವರುಗಳನ್ನು ಉದಾಹರಿಸಬಹುದು.

ಆಕಾಶವಾಣಿಯ ವತಿಯಿಂದ ವಿಶೇಷ ಸಂದರ್ಭಗಳಲ್ಲಿ 'ರಾಗ ಮಾಧುರ್ಯ' ಇತ್ಯಾದಿ ಕಾರ್ಯಕ್ರಮಗಳನ್ನು ಜಿಲ್ಲೆಯ ವಿವಿದೆಡೆಗಳಲ್ಲಿ ಹಮ್ಮಿಕ್ಕೊಂಡು ನಂತರ ಪ್ರಸಾರ ಮಾಡುವುದುಂಟು. ಹಿಂದೆ ರಾಜ್ಯಮಟ್ಟದ ರೇಡಿಯೋ ನಾಟಕ ಸ್ಪರ್ಧೆಯನ್ನೂ ಏರ್ಪಡಿಸುತ್ತಿದ್ದು, ರೇವಣಸಿದ್ದಯ್ಯ ರುದ್ರಸ್ವಾಮಿಮಠ ಅವರ 'ಪ್ರಸಾರವಾಗದ ಒಂದು ನಾಟಕ' ಎಂಬ ಕೃತಿಗೆ ರಾಜ್ಯಮಟ್ಟದ ಬಹುಮಾನ ದೊರೆತಿದೆಯಲ್ಲದೆ ಅವರಿಗೆ ನಾಟಕ ಹಸ್ತಪ್ರತಿ ರಚನೆಯಲ್ಲಿ ರಾಷ್ಟ್ರಮಟ್ಟದಲ್ಲಿ 'ಮಾತನಾಡುವ ಟೊಂಗೆಗಳು' ಹಸ್ತಪ್ರತಿಗೆ ಮೂರನೇ ಬಹುಮಾನವೂ ದೊರೆತಿದೆ. ಸರಿತಾ ಕುಸುಮಾಕರ ದೇಸಾಯಿ ಅವರ 'ಭೀಮೇಶ ಕೃಷ್ಣ' ಕೃತಿಗೆ ಆಕಾಶವಾಣಿ ಬಹುಮಾನ ಬಂದಿದೆ.

**ದೂರದರ್ಶನ**

ರಾಜ್ಯದಲ್ಲಿಯೇ ಪ್ರಥಮವಾಗಿ ೧೯೭೭ ರಲ್ಲಿ ಗುಲಬರ್ಗಾದಲ್ಲಿ ದೂರದರ್ಶನ ಪ್ರಸರಣ ಕೇಂದ್ರ ಆರಂಭವಾದರೂ ಸ್ವತಂತ್ರವಾದ ಸ್ಟುಡಿಯೋ ಸೌಲಭ್ಯ ಬಂದುದು ೧೯೯೪ರಲ್ಲಿ. ಆನಂತರ ಸಮ್ಮೇಳನ, ವಿಚಾರ ವಿನಿಮಯ, ಸಂದರ್ಶನಗಳು, ನಾಗಾವಿ, ಸನ್ನತಿ ಇತ್ಯಾದಿ ಐತಿಹಾಸಿಕ ಸ್ಥಳಗಳ ಪರಿಚಯಗಳಾದ 'ನಾಗಘಟಕ', 'ಚಂದ್ರಲಾ ಪರಮೇಶ್ವರಿ' 'ಬುದ್ಧ

ಕೇಂದ್ರ' 'ಕಡಕೋಳ ಮಡಿವಾಳಪ್ಪ' ಇತ್ಯಾದಿಯಾಗಿ ಹಲವಾರು ಸಾಕ್ಷ್ಯ ಚಿತ್ರಗಳನ್ನು ತಯಾರಿಸಿದೆ. ಇವರು ರೂಪಿಸಿದ 'ಪಿಂಜರ ಬಡಾಸಾಬ್' 'ಬಿಜಾಪುರ ಉತ್ಸವ' 'ರಾಷ್ಟ್ರೀಯ ಯುವಜನೋತ್ಸವ'ಗಳು ರಾಷ್ಟ್ರೀಯ ಜಾಲದಲ್ಲಿ ಪ್ರಸಾರವಾಗಿವೆ. ಕೆಲವು ಸಾಕ್ಷ್ಯ ಚಿತ್ರಗಳು ಬೆಂಗಳೂರು ಕೇಂದ್ರದಿಂದಲೂ ಪ್ರಸಾರವಾಗಿವೆ.

## ನೃತ್ಯ

ಜಿಲ್ಲೆಯಲ್ಲಿ ಮುಖ್ಯವಾಗಿ ವಿಶಾಲ ಕರ್ನಾಟಕವಾದ ಮೇಲೆ ಹೊರಗಿನಿಂದ ಕಲಾಸಕ್ತರು ಜಿಲ್ಲೆಗೆ ಬಂದಿದ್ದು, ಅವರೊಂದಿಗೆ ನೃತ್ಯಕ್ಕೂ ಇಲ್ಲಿ ಅವಕಾಶವಾಯಿತು. ಸುಮಾರು ೧೯೭೦ರಲ್ಲಿ ಸುರೇಖ ಎಂಬುವವರು ನೃತ್ಯ ತರಗತಿಯೊಂದನ್ನು ಆರಂಭಿಸಿ ಕೆಲಕಾಲ ನಡೆಸಿದರು. ಇದೇ ವೇಳೆಯಲ್ಲಿ ಸಂಗಮೇಶ್ವರ ಮಹಿಳಾ ಮತ್ತು ಯುವತಿ ಮಂಡಳದವರು ಉಳಿದ ಕಾರ್ಯಕ್ರಮಗಳೊಂದಿಗೆ ನೃತ್ಯ ಶಿಕ್ಷಣ ನೀಡಲು ಆರಂಭಿಸಿದ್ದು ಇಂದಿಗೂ ಮುಂದುವರೆದಿದೆ. ಶಿವಾನಂದ ಮಾನ್ವಿಕರ್ ಅವರ 'ರಂಗಭಾರತಿ' ವಿಶೇಷವಾಗಿ ನಾಟಕ ಪ್ರದರ್ಶನಗಳಿಗೆ ಮೀಸಲಾದರೂ ನೃತ್ಯ ಕಾರ್ಯಕ್ರಮಗಳನ್ನು ನೀಡಿದ್ದು, ೧೯೮೦-೮೫ರ ಅವಧಿಯಲ್ಲಿ ಸುಚಿತ್ರ ದೇಶಪಾಂಡೆ, ಆರ್. ಕಿರಣ್, ಕವಿತಾ ಕುಲಕರ್ಣಿ, ನಾಗರೇಖ ಕುಲಕರ್ಣಿ, ಸುರೇಖ ಮಾಮಡಿ, ಸುಧಾ ಪಾಟೀಲ್, ಉಪಾಧ್ಯಾಯ ವಾಣಿ ದೀಪಕ್ ಮುಂತಾದವರು ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ.

ವ್ಯವಸ್ಥಿತವಾದ ನೃತ್ಯ ಶಾಲೆಯೊಂದು ಗುಲಬರ್ಗಾದಲ್ಲಿ ಆರಂಭವಾದುದು, ಶುಭಾಂಗಿ ಅವರಿಂದ. ಓಂಕಾರ ನೃತ್ಯ ಸಾಧನಾ ಎಂಬ ಹೆಸರಿನ ನೃತ್ಯಶಾಲೆ ೧೯೮೭ರಲ್ಲಿ ಗುಲಬರ್ಗಾದ ಜೇವರ್ಗಿ ಕಾಲೋನಿಯಲ್ಲಿ ಆರಂಭವಾಗಿ ಅನೇಕ ವಿದ್ಯಾರ್ಥಿಗಳು ನೃತ್ಯ ಕಲೆಯನ್ನು ಅಭ್ಯಸಿಸಿದ್ದಾರೆ. ಈ ವರೆಗೆ ಹತ್ತು ವಿದ್ಯಾರ್ಥಿಗಳು ಪೂರ್ಣವಾಗಿ ನೃತ್ಯಾಭ್ಯಾಸ ಕಲಿತಿದ್ದು, ಪ್ರಸ್ತುತ ವರ್ಷದಲ್ಲಿ (೧೯೯೫-೯೬) ೫೫ ವಿದ್ಯಾರ್ಥಿಗಳು ನೃತ್ಯಾಭ್ಯಾಸ ಮಾಡುತ್ತಿದ್ದಾರೆ.

ನೃತ್ಯ ಶಾಲೆಯಿಂದ ಜಿಲ್ಲೆಯ ಹಲವಾರು ತಾಲೂಕು ಕೇಂದ್ರಗಳಲ್ಲಿ ನೃತ್ಯ ಪ್ರದರ್ಶನ ಏರ್ಪಡಿಸಿದೆಯಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನೃತ್ಯ ಕಾರ್ಯಕ್ರಮಗಳನ್ನು ನಿರಂತರವಾಗಿ ಕಳೆದ ಹತ್ತು ವರ್ಷಗಳಿಂದ ನೀಡುತ್ತಿದ್ದಾರೆ. ಬೀದರ್ ಬೆಂಗಳೂರಲ್ಲದೆ ಕಲ್ಕತ್ತಾದಲ್ಲೂ ಶುಭಾಂಗಿ ಅವರ ನೃತ್ಯ ತಂಡ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದೆ. ೧೯೯೨-೯೩ ಹಾಗೂ ೧೯೯೩-೯೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದೆ. ವಿವಿಧ ಶಾಲೆಗಳಿಂದ ಆರಿಸಿದ ವಿದ್ಯಾರ್ಥಿಗಳಿಗೆ ಅಲ್ಪಾವಧಿ ಕಾಲದ ನೃತ್ಯ ಶಿಕ್ಷಣವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ನೀಡುವ ವ್ಯವಸ್ಥೆಯೂ ಶಾಲೆಯಲ್ಲಿದೆ.

ಓಂಕಾರ ನೃತ್ಯ ಶಾಲೆಯ ವಿದ್ಯಾರ್ಥಿಗಳ ಪೈಕಿ ಗಿರಿಜಾ ಜುಂಜರವಾಡ ಅವರು ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದಿದ್ದಾರೆ, ವಾಣಿ, ದೀಪಾಶ್ರೀ, ಶೀಲಾ ಜೆಮಶೆಟ್ಟಿ ಅವರುಗಳು ವಿಶ್ವವಿದ್ಯಾಲಯದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನೂ ಕಲ್ಪನಾ ಸೋಮಯಾಜಿ ಅವರು ತ್ರಿತೀಯ ಸ್ಥಾನವನ್ನೂ ಗಳಿಸಿದ್ದಾರೆ. ಉಳಿದಂತೆ ಪ್ರಿಯ ನಂದಾನಂದನ, ತಹಸೀನ ಆಲಿ, ಚೇತನಾರಾವ್ ಅವರುಗಳನ್ನು ಹೆಸರಿಸಬಹುದು. ಏಳನೇ ತರಗತಿಯ ಬಾಲಿಕೆ ಹಾಗೂ ಓಂಕಾರ ಶಾಲೆಯ ವಿದ್ಯಾರ್ಥಿನಿ ಪೂರ್ಣಿಮಾ ಕಮಲಾಪುರಕರ ಐವತ್ತಕ್ಕೂ ಹೆಚ್ಚು ಪ್ರದರ್ಶನ ನೀಡಿ ಜನಮೆಚ್ಚುಗೆ ಗಳಿಸಿದ್ದಾರೆ. ಉಳಿದಂತೆ ವಿ. ಮೀರ, ಸೌಮ್ಯ, ಭಾವನಾರಾವ್, ರೂಪಾಲಿ ದೇಶಪಾಂಡೆ, ರಶ್ಮಿ ಕುಲಕರ್ಣಿ, ಸುಮಾ ಮುತ್ತಗಿ, ಕಲಾ ಚೆನ್ನಶೆಟ್ಟಿ, ರೀಜೆಟ್ ಬೆಂಜಮಿನ್, ಶ್ವೇತಾನಾಗೂರ್, ಶ್ರದ್ಧಾ ಹಟ್ಟಿ, ವಿನೀತಾ ಷರಾಫ್, ಜಗೀಪಾ ಮೆಹತಾ, ಛಾಯಾ ಕುಲಕರ್ಣಿ, ಕುಮಾರ್ ನಾಗರಾಜ್, ದತ್ತರಾಜ್, ಮೊದಲಾದ ಅನೇಕರು ಓಂಕಾರ ನೃತ್ಯ ಶಾಲೆಯಿಂದ ಹೊರ ಬಂದವರು. ಇವರಲ್ಲದೆ ಗುಲಬರ್ಗಾದ ಉಷಾ ಕುಲಕರ್ಣಿ, ವೈಶಾಲಿ ಕಾಸರವಳ್ಳಿ (ಸಿನಿಮಾ : ನಾಟಕ ತಾರೆ) ಅನೂಪಮ ಹೇರೂರ್, ವಾಸುದೇವ ಕಪಟರಾಳ, ಗಿರಿಜಾ ಕುಲಕರ್ಣಿ, ನರ್ಮದ, ಕೀರ್ತನ,ಸಹನಾ, ಶೃತಿ ಅವರುಗಳು ಭರತನಾಟ್ಯ ಕಲಾವಿದರು.

## ಪುರಾಣ, ಪ್ರವಚನ, ಕೀರ್ತನೆ

ಜಿಲ್ಲೆಯಲ್ಲಿ ವೀರಶೈವ ಹಾಗೂ ವೈಷ್ಣವ ಮತಗಳ ಬೆಳವಣಿಗೆ ಜೊತೆಗೂಡಿಯೇ ಆಗಿದ್ದು ಆ ಸಂಬಂಧವಾದ ಕೀರ್ತನೆ, ಭಜನೆ, ಹರಿಕಥೆ, ಶಿವಕಥೆ ಮೊದಲಾದ ಕಲಾ ಪ್ರಕಾರಗಳೂ ಕಂಡು ಬರುತ್ತವೆ. ಸುರಪುರದ ಅರಸರೂ ಈ

ಕಲಾವಿದರಿಗೆ ಹೆಚ್ಚಿನ ಪೋಷಣೆ ನೀಡಿದ್ದರು. ಮಹಾರಾಷ್ಟ್ರದಿಂದ ಬರುತ್ತಿದ್ದ ಕೀರ್ತನಕಾರರು ಮರಾಠಿಯಲ್ಲಿಯೇ ಪ್ರಚಾರ ನಡೆಸುತ್ತಿದ್ದರು. ಜಿಲ್ಲೆಯಲ್ಲಿಯ ಕಲಾವಿದರಿಗಿಂತ ನೆರೆಯ ಜಿಲ್ಲೆಯಿಂದ ಬರುತ್ತಿದ್ದ ಪ್ರವಚನಕಾರರೇ ಅಧಿಕ. ಸುರಪುರದ ಆನಂದದಾಸರು (೧೮೪೦-೧೯೧೯) ಗಮಕಿಗಳೂ ಆಗಿದ್ದು ಹಲವಾರು ಕೀರ್ತನೆಗಳನ್ನೂ ರಚಿಸಿದ್ದಾರೆ. ರಾಮಾಯಣ ಭಾರತಗಳಲ್ಲದೆ ಭಗವದ್ಗೀತೆಯನ್ನು ಅವರು ಕೀರ್ತನಾಗೀತೆಯಾಗಿ ಪರಿವರ್ತಿಸಿದ್ದು ಅವರ ಹಾಡುಗಳಲ್ಲಿ ಹಿಂದೂಸ್ಥಾನಿ ಹಾಗೂ ಕರ್ನಾಟಕ ಎರಡೂ ಪದ್ಧತಿಗಳ ಮಧುರ ಮಿಶ್ರಣವಿದೆಯೆಂದು ಅಭಿಪ್ರಾಯಪಡಲಾಗಿದೆ. ಆನಂದದಾಸರಲ್ಲದೆ ಭೀಮದಾಸರು, ವಿಠಲದಾಸರು, ಜನ್ನಿ ದಾಸರು, ಮದ್ದೂರ ಶ್ರೀಕಾಂತ ವಿಠಲರು, ಅಫಜಲಪುರದ ಮಣ್ಣೂರುದಾಸರು ಮೊದಲಾದವರನ್ನು ಹೆಸರಿಸಬಹುದು. ಮುರಗಾನೂರಿನ ಶ್ರೀಕಾಂತ ವಿಠಲರಿಂದ ಹರಿದಾಸ ಪರಂಪರೆಯೊಂದು ರೂಪುಗೊಂಡುದಾಗಿ ತಿಳಿದು ಬರುತ್ತದೆ. ಈ ಭಾಗದ ಪ್ರಸಿದ್ಧ ಗಮಕಿಗಳಾದ ಭಾರತದ ಬಿಂದುರಾಯರು ನಾಲ್ಕನೇ ದಶಕದಲ್ಲಿ ಜಿಲ್ಲೆಯಾದ್ಯಂತ ಹಲವಾರು ತಿಂಗಳುಗಳು ಸಂಚರಿಸಿ 'ಭಾರತ ವಾಚನ' ಮಾಡುತ್ತಿದ್ದರು.

ಉಳಿದಂತೆ ಸಗರ ರಾಮಾಚಾರ್, ಸಗರ ಸುಬ್ಬಣ್ಣ, ದೇವದುರ್ಗದ ಗಿರಾಚಾರ್ಯ, ಬಡೆಗುಂಬಳ ಗುರು ವೆಂಕಟಾಚಾರ್ಯ, ಹೋಳಿ ಶೇಷಗಿರಿರಾಯರು, ಕೀರ್ತನ ಕೇಸರಿ ಜಯರಾಮಾಚಾರ್ಯ, ಬಳೂರ್ಗಿಯ ಬಿಂದಾಚಾರ್ ಪುರಾಣಿಕ್, ಹನುಮಂತರಾವ್ ಬಡದಾಳ್, ಗಾಣಗಾಪುರದ ಕಿಶನ್‌ರಾವ್ ಚೌಪಾಟಿ, ನೆಲವಿಗೆಯ ಮಾಧವರಾವ್ ಮುಂತಾದವರನ್ನು ಉದಾಹರಿಸಬಹುದು.

ವೀರಶೈವ ಪರವಾದ ಮಠ ಮಾನ್ಯಗಳು ಪ್ರವಚನ ಇತ್ಯಾದಿಗಳನ್ನು ಆಗಿಂದ್ದಾಗ್ಗೆ ಏರ್ಪಡಿಸುತ್ತಿರುತ್ತವೆ. ಈ ಬಗೆಯ ಕಾರ್ಯಕ್ರಮ ಪ್ರೋತ್ಸಾಹಿಸಲು ಶರಣಬಸಪ್ಪ ಅಪ್ಪ ಅವರು ಒಂದು ಲಕ್ಷ ರೂಪಾಯಿಗಳ ದತ್ತಿ ನಿಧಿ ಇರಿಸಿದ್ದು ಪ್ರತಿವರ್ಷ ಅರ್ಹ ಕೀರ್ತನಕಾರರಿಗೆ 'ಪುರಾಣ, ಪ್ರವಚನ ಪ್ರವೀಣ' ಎಂಬ ಬಿರುದು ಹಾಗೂ ಹತ್ತು ಸಾವಿರ ರೂಪಾಯಿಗಳ ನಗದು ಬಹುಮಾನ ನೀಡುತ್ತಿದ್ದಾರೆ. ಶರಣ ಬಸವೇಶ್ವರ ಸಂಸ್ಥಾನ ಸೇರಿದಂತೆ ಜಿಲ್ಲೆಯ ಹಲವಾರು ವೀರಶೈವಪರ ಮಠಗಳು ಸ್ವರವಚನ, ಕೀರ್ತನೆಗಳ ಧ್ವನಿಸುರಳಿ (ಕ್ಯಾಸೆಟ್)ಗಳನ್ನು ಹೊರತಂದಿವೆ. ಸಗರದ ಊರ್ಕಾಯಿ ಮೈಲಾರಪ್ಪ ಅವರು ರೈತ ಜಾಗ್ರತಿ ಕುರಿತು ಹಾಡಿದ ಜನಪದ ಹಾಡುಗಳ ಧ್ವನಿಸುರಳಿಗಳು ಹೊರಬಂದಿವೆ.

## ಚಿತ್ರಕಲೆ

ಗುಹಾ ಅಥವಾ ಶಿಲಾಶ್ರಯ ಚಿತ್ರಗಳು ನೆರೆಯ ರಾಯಚೂರು ಜಿಲ್ಲೆಯಲ್ಲಿ ಅಧಿಕವಾಗಿ ಕಂಡು ಬಂದರೂ ಗುಲಬರ್ಗಾ ಜಿಲ್ಲೆಯಲ್ಲಿ ಈ ವರೆಗೆ ಪತ್ತೆಯಾಗಿರುವುದು ಯಾದಗಿರಿ ತಾಲೂಕಿನ ಬಲಚಕ್ರದಲ್ಲಿ ಮಾತ್ರ. ವಿಸ್ತಾರವಾದ ಕಲ್ಲಾಸರೆಯಲ್ಲಿ ವಿಶಾಲವಾದ ಹರಹಿನಲ್ಲಿ ಒತ್ತೊತ್ತಾಗಿ ಪ್ರಾಣಿ, ಮನುಷ್ಯ ಹಾಗೂ ರೇಖಾ ಚಿತ್ರಗಳು ಇಲ್ಲಿದ್ದು, ಇವುಗಳ ಶೈಲಿ, ವಿನ್ಯಾಸ ವಿಷಯಗಳ ಬಗ್ಗೆ ವಿವರವಾಗಿ ಅ. ಸುಂದರ ಅವರು ವಿವರಣೆ ನೀಡಿದ್ದಾರೆ. ಹಾಗೂ ಚಿತ್ರಗಳ ಸಮೂಹದೊಳಗೇ ಬಾದಾಮಿ ಚಾಳುಕ್ಯರ ಕಾಲದ ಲಿಪಿಯಲ್ಲಿ ಹೆಸರೊಂದು ಇರುವುದರಿಂದ ಈ ಚಿತ್ರಗಳ ಕಾಲವನ್ನು ಐತಿಹಾಸಿಕ ಕಾಲಕ್ಕೆ (ಸು ೬ ರಿಂದ ೮ ನೇ ಶತ) ಸೇರಿಸಿದ್ದಾರೆ. ಮಾನವಾಕಾರಗಳು ನೀಳವಾಗಿದ್ದು, ಕಡ್ಡಿಯಂತಹ ಕೈಕಾಲುಗಳು, ಚೌಕನಾದ ಶಿರೋಭಾಗ ಹೊಂದಿವೆ. ದೇಹದ ಭಾಗವನ್ನು ಅಡ್ಡ ಅಥವಾ ವಜ್ರಾಕೃತಿಯ ಅಥವಾ ಅಲೆಯಂತಹ ಗೆರೆಗಳಿಂದ ತುಂಬಿಸಿದೆ. ಐದು ಬೇರೆ ಬೇರೆ ಪ್ರಕಾರದ ಹಾಗೂ ಮೂರು ವಿಭಿನ್ನ ಕಾಲಘಟ್ಟದ ಚಿತ್ರಗಳಿವು.ಪ್ರಾಣಿಗಳ ಚಿತ್ರಗಳು ನೈಜವಾಗಿದ್ದು, ಹಸು, ಚಿಂಕೆ, ಹಂದಿ ಇತ್ಯಾದಿಗಳನ್ನು ಗುರುತಿಸಲಾಗಿದೆ. ಇವುಗಳ ಮೇಲೂ ರೇಖಾಚಿತ್ರದ ಅಲಂಕಾರವಿದೆ. ಇವುಗಳಲ್ಲದೆ ಚತುರ್ಭುಜ ಇತ್ಯಾದಿ ಬಿಡಿ ರೇಖಾಕೃತಿಗಳೂ ಇವೆ.

ಬಹಮನಿ ಸುಲ್ತಾನರು ಅವರ ಮತ ಧರ್ಮದಂತೆ ಮಾನವಾಕಾರಗಳ ಚಿತ್ರಗಳಿಗೆ ಪ್ರೋತ್ಸಾಹ ನೀಡಲಿಲ್ಲವಾದರೂ ಸುಂದರವಾದ ಅಕ್ಷರ ವಿನ್ಯಾಸಗಳಿಗೆ (ಕ್ಯಾಲಿಗ್ರಾಫಿ) ಹಾಗೂ ಆಲಂಕಾರಯುತ ಸುಳಹು ಹೊಳಹುಗಳಿಗೆ (ಡಿಸೈನ್) ವಿಶೇಷ ಪ್ರೋತ್ಸಾಹ ನೀಡಿದರು. ಗುಲಬರ್ಗಾದ ಬಂದೇ ನವಾಜರ ಸಮಾಧಿ ಮಂದಿರದ ಆವರಣದಲ್ಲಿರುವ ಹಲವಾರು ಕಟ್ಟಡಗಳಲ್ಲಿ ನಾಲ್ಕರಿಂದ ಎಂಟು ಮೂಲೆಗಳ, ನಕ್ಷತ್ರಾಕಾರದ, ಜೇನುಗೂಡಿನಂತಹ ಬಲೆ ನೇಯ್ದಂತೆ ಹಾಸು ಹೊಕ್ಕಿರುವ ರೇಖೆಗಳ ಹಲವಾರು ವರ್ಣಮಯ ನಮೂನೆಗಳನ್ನು ಕಾಣಬಹುದು. ಜಿಲ್ಲೆಯ ದಕ್ಷಿಣ ಭಾಗವು ಸುರಪುರ ನಾಯಕರ

ರಾಜಧಾನಿಯಾಗಿದ್ದು, ಈ ಅರಸರು ಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ನೀಡಿದರು. ಇವರಿಗೆ ಬಿಜಾಪುರ ಅಲ್ಲದೆ ಮರಾಠ ಹಾಗೂ ಮುಗಲ್ ಅರಸರ ಸಂಬಂಧ ಇದ್ದುದು ಅಲ್ಲಿಯ ಚಿತ್ರಕಲೆಯಿಂದ ಪ್ರಭಾವಿತರಾದ ಸುರಪುರದ ನಾಯಕರು ತಮ್ಮ ಹಾಗೂ ತಮ್ಮ ಪರಿವಾರದವರ ಚಿತ್ರಗಳನ್ನು ರಚಿಸಿಕೊಂಡಿದ್ದಾರೆ. 'ಗರುಡಾದ್ರಿ' ಎಂಬ ಕಲಾವಿದ ಮನೆತನಕ್ಕೆ ಇಲ್ಲಿ ರಾಜಾಶ್ರಯ ಇರುವಂತೆ ಕಂಡು ಬರುತ್ತದೆ. ಸುಮಾರು ಎರಡು ಶತಮಾನಗಳ ಕಾಲ ಈ ಕಲಾವಿದರ ಮನೆತನದ ಹೆಸರು ಉಳಿದು ಬಂದಿದ್ದು, ಇಂದಿಗೂ ಈ ವಂಶದವರಿದ್ದಾರೆ. ಇವರಲ್ಲಿ ಹೆಚ್ಚು ಕೇಳಿ ಬರುವ ಹೆಸರು ಬಾನಯ್ಯ ಗರುಡಾದ್ರಿ ಎಂಬಾತನದು. ಇಂದು ದೊರೆಯುವ ಹಲವಾರು ಚಿತ್ರಗಳ ಕೆಳಭಾಗದಲ್ಲಿ ಆತನ ಅಂಕಿತವಿದೆ. ದಕ್ಕನಿ ಶೈಲಿಯಿಂದ ಮುಂದುವರಿದ, ವಿಜಯನಗರ ಶೈಲಿಗೆ ಹತ್ತಿರವಾದ ಮೈಸೂರು ಸಾಂಪ್ರದಾಯಿಕ ಕಲೆಯ ಪೂರ್ವದೆನ್ನಬಹುದಾದ ಸುರಪುರದಲ್ಲಿ ರಚಿತವಾದ ಅನೇಕ ಚಿತ್ರಗಳು ದೇಶವಿದೇಶದ ಕಲಾ ಸಂಗ್ರಹಾಲಯಗಳಲ್ಲಿ ಸಂಗ್ರಹಿತವಾಗಿವೆ. ಇವುಗಳಲ್ಲಿ ಹೆಚ್ಚಿನವು ದೇವಾನು ದೇವತೆಗಳ ಚಿತ್ರಗಳು, ರಾಜರ, ರಾಜ ಪರಿವಾರದವರ, ಇಲ್ಲಿಗೆ ಬಂದಿದ್ದ ಬ್ರಿಟಿಷ್ ಪ್ರತಿನಿಧಿಗಳ ಭಾವಚಿತ್ರಗಳೂ ಇವೆ.

ಸುರಪುರದ ಈಗಿರುವ ಅರಮನೆಯಲ್ಲಿ ಒಂದೆರಡು ಸಣ್ಣ ಪ್ರಮಾಣದ ಭಿತ್ತಿ ಚಿತ್ರಗಳ ವಿನಾ ಬೇರೆನೂ ಉಳಿದು ಬಂದಿಲ್ಲ. ಆದರೆ ಬಳಿಯ ರಂಗಂ ಪೇಟೆಯ ರುದ್ರಸ್ವಾಮಿ ಮಠವು ಸಾಕಷ್ಟು ಜೀರ್ಣವಾಗಿದ್ದು ಪಕ್ಕದ ಗೋಡೆಗಳ ಮೇಲೆ ಚಿತ್ರಕಲೆ ಇದ್ದ ಗುರುತುಗಳಿವೆ. ಆದರೆ ಎಲ್ಲವೂ ಸಂಪೂರ್ಣವಾಗಿ ನಾಶವಾಗಿದೆ. ಈ ಸ್ಥಳದಲ್ಲಿರುವ ಅಣ್ಣಯ್ಯನ ಮಠದಲ್ಲಿ ವಿಶಾಲ ಹರಹಿನಲ್ಲಿ ಹಲವಾರು ಭಿತ್ತಿಚಿತ್ರ ಸಂಯೋಜನೆಗಳಿವೆ. ಇವುಗಳನ್ನು ಸಮುದ್ರ ಮಥನ, ಗಿರಿಜಾಕಲ್ಯಾಣ ವಲ್ಲದೆ ದ್ರೌಪದಿ ಸ್ವಯಂವರಗಳೆಂದು ಗುರುತಿಸಲಾಗಿದೆ. ಕಡುಪಾದ ವರ್ಣಗಳಿಂದ ದಿಟ್ಟವಾದ ರೇಖೆಗಳಿಂದ ಕೂಡಿದ ಇವು ಜನಪದ ಶೈಲಿಯಂತೆ ಕಂಡರೂ ಉತ್ತಮವಾದ ಕಲಾ ಮೌಲ್ಯದಿಂದ ಕೂಡಿವೆ.

ಸುರಪುರದ ಅರಸರಲ್ಲಿ ರಾಜ ವೆಂಕಟಪ್ಪ ನಾಯಕ (೧೭೭೩-೧೮೦೨) ಹಾಗೂ ಮುಮ್ಮಡಿ ವೆಂಕಟಪ್ಪನಾಯಕ (೧೮೧೮-೨೭) ಅವರುಗಳು ಕಲೆ ಸಾಹಿತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದು, ಅವರ ಆಸ್ಥಾನದಲ್ಲಿ ಚಿತ್ರ ಕಲಾವಿದರಿದ್ದು ಅವರಿಗೆ ಜಹಗೀರಿ ಸಹ ನೀಡಲಾಗಿತ್ತು. ಮುಂದೆ ೧೮೪೨ ರಿಂದ ೫೩ರ ವರೆಗೆ ಇಲ್ಲಿಗೆ ಬಂದಿದ್ದ ಮೆಡೋಸ್ ಟೈಲರ್ ಒಬ್ಬ ವಿದ್ವಾಂಸ, ಲೇಖಕ, ಚಿತ್ರಗಾರ ಅಲ್ಲದೆ ಛಾಯಾಚಿತ್ರ ಗ್ರಾಹಕನೂ ಆಗಿದ್ದ.

ಚಿತ್ರಕಲೆಯಲ್ಲಿ ಆಧುನಿಕತೆಯ ಗಾಳಿ ಗುಲಬರ್ಗಾಕ್ಕೆ, ಈ ಶತಮಾನದ ಆರಂಭದಿಂದಲೇ ಬಂದಂತೆ ತೋರುತ್ತದೆ. ಅದರಲ್ಲಿ ಮುಖ್ಯವಾಗಿ ಶಾಂತಲಿಂಗಪ್ಪ ಪಾಟೀಲ, ಶಂಕರರಾವ್ ಆಳಂದಕರ್ ಹಾಗೂ ಎಂ. ಟಿ. ಭೋಪಲೆ ಮುಂತಾದವರನ್ನು ಉದಾಹರಿಸಬಹುದು. ಶಾಂತಲಿಂಗಪ್ಪ ಪಾಟೀಲರು (೧೮೮೨-೧೯೭೬) ಆಳಂದ ತಾಲೂಕಿನ ನಿಂಬಾಳದವರಾಗಿದ್ದು, ಮುಂಬಯಿಯ ಜೆ. ಜೆ. ಕಲಾಶಾಲೆಯಲ್ಲಿ ಅಭ್ಯಸಿಸಿದವರು (೧೯೦೯) ಹೈದರಾಬಾದ್ ನಿಜಾಮರ ಪರಿವಾರದವರೂ ಸೇರಿದಂತೆ ಜನ ಸಾಮಾನ್ಯರ ನೂರಾರು ಭಾವಚಿತ್ರಗಳನ್ನು ರಚಿಸಿದ್ದಾರೆ. ಶರಣರ ಧಾರ್ಮಿಕ ಕಾರ್ಯಗಳ ಚಿತ್ರಣಗಳಲ್ಲದೆ ರಾಷ್ಟ್ರಭಕ್ತಿ ಮೂಡಿಸುವಂತಹ ಚಿತ್ರಗಳನ್ನು ರೂಪಿಸಿದ್ದಾರೆ. ಅವರು ಶಿಲ್ಪಕಲಾವಿದರೂ ಆಗಿದ್ದರು. ತೆಳುವಾದ ಜಲವರ್ಣದ ಭಾವಪೂರ್ಣವಾದ ಅವರ ವ್ಯಕ್ತಿ ಚಿತ್ರಗಳು ಅಂದಿಗೆ ಹೊಸ ಪರಂಪರೆಯೊಂದನ್ನು ಆರಂಭಿಸಿದವೆಂದೇ ಹೇಳಬಹುದು. ಶಂಕರರಾವ್ ಆಳಂದಕರ (೧೯೦೫-೭೧) ಅವರೂ ಜೆ. ಜೆ.ಯಲ್ಲಿ ಕಲಿತು ಗುಲಬರ್ಗಾದ ನೂತನ ವಿದ್ಯಾಲಯದಲ್ಲಿ ಕಲಾ ಪ್ರಾಧ್ಯಾಪಕರಾಗಿದ್ದು, ಎಸ್. ಎಂ. ಪಂಡಿತ್, ವಿದ್ಯಾ ಭೂಷಣ, ಕುಮಾರ ಚಂದ್ರಶೇಖರ್ ಅವರುಗಳಿಗೆ ಮಾರ್ಗದರ್ಶನ ಮಾಡಿದ್ದವರು. ಇಂದು ಗುಲಬರ್ಗಾದಲ್ಲಿ ಕಲಾವಾತಾವರಣ ನೆಲೆಗೊಳ್ಳುವಂತೆ ಮಾಡಿದವರು. ಅವರು ಸಾಕಷ್ಟು ವಿದ್ಯಾರ್ಥಿಗಳಿಗೆ ಕಲೆಯಲ್ಲಿ ಆಸಕ್ತಿ ಮೂಡಿಸಿ ಕಲಾವಿದರಾಗಲು ಪ್ರೋತ್ಸಾಹಿಸಿದರು. ಅವರು ಹಲವಾರು ಚಿತ್ರಸಂಪುಟಗಳನ್ನು ರಚಿಸಿದ್ದಾರೆ. ರವೀಂದ್ರನಾಥ ಟಾಗೂರರನ್ನು ಕುರಿತು "ನನ್ನ ದೃಷ್ಟಿಯಲ್ಲಿ ಗುರುದೇವ", ನಿಜಾಮರ ಪೂರ್ವಜ ಅಸಫಜಹಾರರ ಜೀವನ ಚರಿತ್ರೆ, ನೆಹರು ಕುರಿತು, 'ಜೀವಂತ ಕೋಹಿನೂರ್' 'ಭಾರತೀಯ ಸಾಂಸ್ಕೃತಿಕ ಪ್ರತೀಕಗಳು', 'ಶಿಲ್ಪಕಾವ್ಯ', (ಚಿಸಲ್ಡ್ ಪೊಯಮ್ಸ್) 'ಮಹಾತ್ಮರ ಹದಿನಾಲ್ಕು ಸೂತ್ರಗಳು' 'ನಮ್ಮ ಕಥೆ' ಇತ್ಯಾದಿಗಳಲ್ಲದೆ ಭಗವತ್ ಗೀತೆಯನ್ನು ಆಧರಿಸಿ ಚಿತ್ರ ಮಾಲಿಕೆಯೊಂದನ್ನು ರೂಪಿಸಿದರು. ಬೇಂದ್ರೆಯವರ ಭಾವಗೀತೆಗಳನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಕೆಲವು ವರ್ಣಚಿತ್ರ ಮಾಲಿಕೆಯಾಗಿದ್ದು, ಉಳಿದವು ರೇಖಾಚಿತ್ರಗಳು. ಈ ರೇಖಾ ಚಿತ್ರ ಮಾಲಿಕೆಯಲ್ಲಿ

ಕೆಲವು ಮುದ್ರಣಗೊಂಡಿವೆ. ಶುದ್ಧ ಜಲವರ್ಣಗಳಲ್ಲಿ ಬಂಗಾಳಿ ಶೈಲಿಯಲ್ಲಿ ಕೆಲವು ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾರಾದರೂ, ನವ್ಯ ಕಲೆಯಲ್ಲೂ ಕೆಲವು ಗಮನಾರ್ಹ ಪ್ರಯೋಗಗಳನ್ನು ಮಾಡಿದ್ದಾರೆ. ಆಳಂದಕರ್ ಅವರು ಕೆಲಕಾಲ ನೈಜಾಂ ಸರಕಾರದ ವಾರ್ತಾ ಇಲಾಖೆಯಲ್ಲೂ ಕಲಾವಿದರಾಗಿ ಕಾರ್ಯನಿರ್ವಹಿಸಿದ್ದರು. ೧೯೬೫ರಲ್ಲಿ ಇವರಿಗೆ ರಾಜ್ಯ ಲಲಿತ ಕಲಾ ಅಕಾಡೆಮಿ ಪ್ರಶಸ್ತಿಯನ್ನು ನೀಡಿತು. ಎಂ. ಟಿ. ಭೂಪಲೆ (೧೯೧೯-೬೬) ಗುಲಬರ್ಗಾದಲ್ಲಿ ಜನಿಸಿ ಮುಂಬಯಿಯ ಜೆ. ಜೆ. ಶಾಲೆಯಲ್ಲಿ ಅಭ್ಯಸಿಸಿ ಅಲ್ಲಿಯೇ ಸ್ಟುಡಿಯೋ ತೆರೆದು ನಾನೂರಕ್ಕೂ ಮಿಕ್ಕಿ ಪ್ರಕೃತಿ ಚಿತ್ರ, ಭಾವಚಿತ್ರ, ಸಂಯೋಜನೆ, ರೇಖಾಚಿತ್ರ ಇತ್ಯಾದಿ ರಚಿಸಿ ಹಲವಾರು ಪ್ರಶಸ್ತಿಗಳಿಸಿ ಕಾರಣಾಂತರದಿಂದ ಮರಳಿ ಗುಲಬರ್ಗಾಕ್ಕೆ ಬಂದರು. ಇವರ ಶೈಲಿಯಲ್ಲಿ ಜೆ. ಜೆ. ಶಾಲೆಯಲ್ಲಿ ಕಲಿಸುತ್ತಿದ್ದ ಪಾಶ್ಚಿಮಾತ್ಯ ಪದ್ಧತಿಯ ಪ್ರಭಾವವನ್ನು ಕಾಣಬಹುದಾದರೂ ವಿಷಯದ ಆಯ್ಕೆ ಭಾರತೀಯ ಪರಿಸರದ್ದೇ ಆಗಿವೆ. ಕೆಲಕಾಲ ಮುಂಬಯಿಯ ಜೆ. ಜೆ. ಯಲ್ಲಿ ಅಭ್ಯಸಿಸಿದ ಪೇಂಟರ್ ಪರೂತೆ ಅವರು (೧೯೧೧) ಇಂದಿಗೂ ಕ್ರಿಯಾಶೀಲ ಕಲಾವಿದರಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದವರು.

ಇದೇ ಅವಧಿಯಲ್ಲಿ ಇನ್ನೂ ಕೆಲವು ಕಲಾವಿದರು ಜಿಲ್ಲೆಯಲ್ಲಿ ಕ್ರಿಯಾಶೀಲರಾಗಿದ್ದರು. ಕಲಾಪರೀಕ್ಷರಾಗಿದ್ದ ಸರೋದೆ, ಕುಶಲಕರ್ಮಿ ಭೀಮಸೇನ, ನೂತನ ಶಾಲೆಯಲ್ಲಿದ್ದ ಶ್ಯಾಮರಾವ್, ಕೃಷ್ಣ ಕನ್ನಾಳ, ತಿಪ್ಪಣ್ಣ ಕಣದಾಳ, ಗುರುಪಾದಪ್ಪ ಪಡಸಾಂಗೀಕರ್, ಎಸ್. ಎಸ್. ಮುನೋಳಿ, ಮುಂತಾದವರನ್ನು ಹೆಸರಿಸಬಹುದು. ಚಿತ್ರ ಪ್ರದರ್ಶನ ಹಾಗೂ ಕಲಾ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರಿಸುತ್ತಿದ್ದ ಬಿ. ಎಸ್. ಭಂಕೂರ್‌ಕರ್ ಅವರ ಹಲವಾರು ಕಲಾಕೃತಿಗಳು ಶರಣ ಬಸವೇಶ್ವರ ದೇವಾಲಯದಲ್ಲಿವೆ. ಇವರ ಜೊತೆಯವರಾದ ರೇವಣಸಿದ್ದಯ್ಯ ರುದ್ರಸ್ವಾಮಿಮಠ ಅವರು ನಾಟಕ, ಸಾಹಿತ್ಯದೊಂದಿಗೆ ಚಿತ್ರಕಲೆಯನ್ನು ಅಭ್ಯಸಿಸಿದ್ದು, ಹಲವಾರು ಭಾವಚಿತ್ರ, ಪ್ರಕೃತಿ ಚಿತ್ರರಚನೆಗಳನ್ನು ಮಾಡಿದ್ದಾರೆ. ಜಿಲ್ಲೆಯಲ್ಲಿ ಕಲಾ ಪ್ರದರ್ಶನವನ್ನು ನೀಡಿದ್ದಾರೆ.

ಜಿಲ್ಲೆಗಷ್ಟೇ ಅಲ್ಲ ರಾಜ್ಯಕ್ಕೆ, ರಾಷ್ಟ್ರಕ್ಕೆ ಗೌರವ ತಂದ ಕಲಾವಿದರೆಂದರೆ ಎಸ್. ಎಂ. ಪಂಡಿತ್ ಅವರು (೧೯೧೬-೯೫) ಗುಲಬರ್ಗಾದಲ್ಲಿ ಜನಿಸಿ ಮುಂಬಯಿಯ ಜೆ. ಜೆ. ಯಲ್ಲಿ ಪದವಿ ಪಡೆದು ಕೊನೆಯವರೆಗೂ ಮುಂಬಯಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿಸಿ ಕೊಂಡಿದ್ದರು. ಭಾವಚಿತ್ರ ಹಾಗೂ ಸಂಯೋಜನಾ ಚಿತ್ರಗಳಲ್ಲಿ ಸಿದ್ದ ಹಸ್ತರಿದ್ದು, ಜಲ ಹಾಗೂ ತೈಲ ವರ್ಣದ ಬಳಕೆಯಲ್ಲಿ ಅದ್ವಿತೀಯರೆಂಬಂತಿದ್ದರು. ಶೃಂಗಾರ ಪರ ಪೌರಾಣಿಕ ದೃಶ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಅವರ ಕೃತಿಗಳಿಗೆ ಅಪಾರ ಬೇಡಿಕೆಯಿತ್ತು. ಹಲವಾರು ಪ್ರಶಸ್ತಿಗಳನ್ನು ಗೌರವಗಳನ್ನು ಪಡೆದಿದ್ದ ಪಂಡಿತರಿಗೆ ೧೯೮೨ರಲ್ಲಿ ರಾಜ್ಯ ಲಲಿತ ಕಲಾ ಅಕಾಡಮಿ ಪ್ರಶಸ್ತಿ ಬಂದಿತ್ತು. ಗುಲಬರ್ಗಾ ವಿಶ್ವವಿದ್ಯಾಲಯದವರು ಗೌರವ ಡಾಕ್ಟರೇಟ್ ನೀಡಿದ್ದರು.

ಮುಂದಿನ ಪೀಳಿಗೆಯವರಲ್ಲಿ ಜೆ. ಎಸ್. ಖಂಡೇರಾವ್, ವಿ. ಜಿ. ಅಂದಾನಿ ಹಾಗೂ ವಿಜಯ ಹಾಗರಗುಂಡಗಿ ಅವರನ್ನು ಪ್ರಮುಖವಾಗಿ ಗುರುತಿಸಬಹುದು. ಇವರುಗಳ ವಯೋಮಾನ, ಕೃತಿರಚನೆಯ ಮನೋಭಾವಗಳಲ್ಲಿ ಭಿನ್ನವಾಗಿದ್ದರೂ ಜಿಲ್ಲೆಯ ಕಲಾವಾತಾವರಣವನ್ನು ರಾಷ್ಟ್ರೀಯ ಮಟ್ಟದ ವ್ಯಾಪ್ತಿಗೆ ತಂದವರು. ಖಂಡೇರಾವ್ (೧೯೪೦) ಜೆ. ಜೆ. ಯಿಂದ ಪದವಿಪಡೆದು ಗುಲಬರ್ಗಾದಲ್ಲಿ ಕಲಾಶಾಲೆ ತೆರೆದು ನಂತರ ಎಸ್. ಬಿ. ಕಾಲೇಜಿನಲ್ಲಿ ಚಿತ್ರಕಲಾ ವಿಭಾಗದ ಮುಖ್ಯಸ್ಥರಾದರು. ಭೂದೃಶ್ಯ ರಚನೆ ಅವರಿಗೆ ಪ್ರಿಯವಾಗಿದ್ದು ನೂರಾರು ಚಿತ್ರಗಳನ್ನು ವಿವಿಧ ಶೈಲಿಗಳಲ್ಲಿ ಚಿತ್ರಿಸಿದ್ದಾರೆ. ಹಲವಾರು ಗೌರವ ಪ್ರಶಸ್ತಿಗಳಿಸಿದ ಖಂಡೇರಾಯರಿಗೆ ರಾಜ್ಯ ಲಲಿತಕಲಾ ಅಕಾಡಮಿಯು ೧೯೯೩ರಲ್ಲಿ ಪ್ರಶಸ್ತಿ ನೀಡಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ೭ನೇ ಟ್ರಿನಾಲೆಯಲ್ಲಿ ಭಾಗವಹಿಸುವ ಗೌರವ ಇವರಿಗೆ ಲಭ್ಯವಾಗಿದೆ. ವಿ.ಜಿ. ಅಂದಾನಿ (೧೯೪೭) ಅವರು ಗುಲಬರ್ಗಾ ತಾಲ್ಲೂಕಿನ ಹೊನ್ನ ಕಿರಣಗಿಯವರೇ ಆಗಿದ್ದು, ಚಿತ್ರಕಲೆಯ ಪದವಿಯ ನಂತರ ಆದರ್ಶ ಕಲಾ ಶಾಲೆಯ ಮುಖ್ಯಸ್ಥರಾಗಿದ್ದು, ಪ್ರಸ್ತುತ ಎಂ.ಎಂ.ಕೆ. ದೃಶ್ಯ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ಕಲಾವಿದರಾಗಿ ಅನೇಕ ಪ್ರಯೋಗಗಳನ್ನು ಮಾಡಿದ್ದು ಹಲವಾರು ಏಕವ್ಯಕ್ತಿ ಕಲಾಪ್ರದರ್ಶನ ಸಹ ನಡೆಸಿದ್ದಾರೆ. ಗುಲಬರ್ಗಾ ಪರಿಸರದ ಐತಿಹಾಸಿಕ ಸ್ಮಾರಕಗಳು ಹಾಗೂ ಕಲ್ಲು ಬಂಡೆಗಳಿಂದ ತುಂಬಿದ ನಿಸರ್ಗ ಇರಿಸಿಕೊಂಡು ದೊಡ್ಡ ಹರಹಿನಲ್ಲಿ ರೇಖಾ ಚಿತ್ರ ರಚಿಸುತ್ತಿದ್ದು, ಈಚೆಗೆ ಮಾನವಾಕಾರಗಳಿಂದ ಕೂಡಿದ ಸಂಯೋಜನಾ ಚಿತ್ರಗಳನ್ನು ರೂಪಿಸುತ್ತಿದ್ದಾರೆ. ರಾಜಸ್ಥಾನದ ಬನಸ್ಥಳಿಯಲ್ಲಿ

ಭಿತ್ತಿ ಚಿತ್ರ ರಚನೆ ಅಭ್ಯಸಿಸಿದ ರಾಜ್ಯದ ಕೆಲವೇ ಕಲಾವಿದರಲ್ಲಿ ಇವರೂ ಒಬ್ಬರಾಗಿದ್ದಾರೆ. ರಾಜ್ಯ ಹಾಗೂ ಕೇಂದ್ರ ಲಲಿತಕಲಾ ಅಕಾಡಮಿಗಳಿಗೆ ಸದಸ್ಯರೂ ಆಗಿರುವ ಅಂದಾನಿ ಅವರಿಗೆ ೧೯೯೧ರಲ್ಲಿ ಕೇಂದ್ರ ಲಲಿತಕಲಾ ಅಕಾಡಮಿಯಿಂದ ಹಾಗೂ ೧೯೯೪ರಲ್ಲಿ ರಾಜ್ಯ ಲಲಿತಕಲಾ ಅಕಾಡಮಿಯಿಂದ ಪ್ರಶಸ್ತಿ ಲಭ್ಯವಾಗಿದೆ. ವಿಜಯ ಹಾಗರಗುಂಡಗಿ (೧೯೫೭) ಅವರು ಸಂಪ್ರದಾಯ ಚಿತ್ರಗಳ ಮುಂದುವರೆದ ರೂಪವೊಂದನ್ನು ಸೃಜಿಸಿದರು. ಸುರಪುರ ಹಾಗೂ ಗರುಡಾದ್ರಿಯ ಚಿತ್ರಗಳಿಂದ ಪ್ರೇರಿತರಾಗಿ ಅವುಗಳ ಬಣ್ಣಗಾರಿಕೆ, ಆಕಾರ, ಸಂಯೋಜನೆ ಇತ್ಯಾದಿಗಳನ್ನು ಆಳವಾಗಿ ಅಭ್ಯಸಿಸಿ ಹೊಸ ರೂಪವೊಂದನ್ನು ನೀಡಿ ಸಾಕಷ್ಟು ಸಂಖ್ಯೆಯಲ್ಲಿ ಕೃತಿ ರಚನೆ ಮಾಡಿದ್ದಾರೆ. ದೇಶಾದ್ಯಂತ ಹತ್ತಕ್ಕೂ ಹೆಚ್ಚು ಕಲಾ ಶಿಬಿರಗಳಲ್ಲಿ ಪಾಲುಗೊಂಡಿದ್ದಾರೆ. ಲಂಡನ್‌ನಲ್ಲಿ ನಡೆಯುವ ವಾರ್ಷಿಕ 'ಆರ್ಟ್ ಇನ್ ಆ್ಯಕ್ಷನ್' ಉತ್ಸವದಲ್ಲಿ ಹಲವಾರು ಬಾರಿ ಪಾಲುಗೊಂಡಿದ್ದಾರೆ. ಬೆಂಗಳೂರು, ಗುಲಬರ್ಗಾ ಸೇರಿದಂತೆ ಹೊರ ರಾಜ್ಯಗಳಲ್ಲಿ ಏಕವ್ಯಕ್ತಿ ಪ್ರದರ್ಶನ ಮಾಡಿದ್ದಾರೆ. ರಾಜ್ಯ ಅಕಾಡಮಿಯಿಂದ ನಾಲ್ಕು ಬಾರಿಯಲ್ಲದೆ ಇನ್ನೂ ಹಲವಾರು ಸಂಘ ಸಂಸ್ಥೆಗಳಿಂದ ಬಹುಮಾನ, ಪ್ರಶಸ್ತಿಗಳನ್ನು ಪಡೆದಿದ್ದಾರೆ. ಎ.ಎಸ್. ಪಾಟೀಲರು (೧೯೪೨) ಜಿಲ್ಲೆಯ ಇನ್ನೊಬ್ಬ ಪ್ರಮುಖ ಕಲಾವಿದರಾಗಿದ್ದು, ಮುಂಬಯಿಯ ಜೆ.ಜೆ.ಯಿಂದ ಅಭ್ಯಸಿಸಿ ಬಂದು ಗೋದುತಾಯಿ ಮಹಿಳಾ ಕಾಲೇಜಿನಲ್ಲಿ ಕಲಾ ಪ್ರಾಧ್ಯಾಪಕರಾಗಿದ್ದಾರೆ. ಜನಪದ ಶೈಲಿಯಿಂದ ಪ್ರಭಾವಿತರಾಗಿ ಹಲವಾರು ಕೃತಿ ರಚನೆ ಮಾಡಿದ್ದಾರೆ. ರಾಜ್ಯ ಅಕಾಡಮಿ ವತಿಯಿಂದ ೧೯೮೮ರಲ್ಲಿ ಆಂಧ್ರಪ್ರದೇಶದ ಚಿತ್ರಕಲೆ ಕುರಿತ ಅಧ್ಯಯನ ಪ್ರವಾಸ ಕೈಗೊಂಡಿದ್ದರು. ಕೆಲವು ಬಹುಮಾನ ಹಾಗೂ ಪ್ರಶಸ್ತಿ ಗಳಿಸಿರುವ ಪಾಟೀಲರಿಗೆ ೧೯೯೧ರಲ್ಲಿ ರಾಜ್ಯ ಲಲಿತಕಲಾ ಅಕಾಡಮಿ ಗೌರವ ಪ್ರಶಸ್ತಿ ನೀಡಿದೆ.

**ಕಲಾ ಶಾಲೆಗಳು**

ಗುಲಬರ್ಗಾದಲ್ಲಿ ಕಲಾಭ್ಯಾಸವನ್ನು ಹಲವಾರು ಬಗೆಯಲ್ಲಿ ಪಡೆಯುವ ಅನುಕೂಲವಿದೆ. ಪದವಿ ಪೂರ್ವ ಅಭ್ಯಾಸದ ನಂತರ ಎರಡು ವರ್ಷದ ವೃತ್ತಿಪರ ಶಿಕ್ಷಣವಾಗಿ (ಜೆ.ಒ.ಸಿ) ಚಿತ್ರಕಲೆಯನ್ನು ಅಭ್ಯಸಿಸುವ ಅವಕಾಶ ಎಸ್. ಬಿ. ಕಾಲೇಜಿನಲ್ಲಿದೆ. ಎಸ್.ಎಸ್.ಎಲ್.ಸಿ.ಯ ನಂತರ ಮೂರು ವರ್ಷ ಡಿಪ್ಲೊಮಾ ಅಥವಾ ಐದು ವರ್ಷದ ಸ್ನಾತಕ ಪದವಿಯನ್ನು (ಬಿ.ಫೈನ್) ಪಡೆಯಬಹುದು. ನಂತರ ಎರಡು ವರ್ಷಗಳ ಸ್ನಾತಕೋತ್ತರ ಪದವಿಗೂ (ಎಂ.ಫೈನ್) ಅವಕಾಶವಿದೆ. ಇದಲ್ಲದೆ ಎರಡು ವರ್ಷಗಳ ಕಲಾ ಶಿಕ್ಷಕರ ತರಬೇತಿ ಹಾಗೂ ಅದರ ನಂತರ ಇನ್ನು ಎರಡು ವರ್ಷಗಳ ಪ್ರೌಢತರಬೇತಿ ಪದವಿಗೂ ಇಲ್ಲಿಯ ಕಲಾ ಶಾಲೆಗಳಲ್ಲಿ ಸೌಲಭ್ಯವಿದೆ. ಯಾವುದೇ ಪದವಿ ಇಲ್ಲದೆ ಹವ್ಯಾಸಕ್ಕಾಗಿ ಸಂಜೆ ಅಥವಾ ಬಿಡುವಿನ ವೇಳೆಯಲ್ಲಿ ಚಿತ್ರ, ಶಿಲ್ಪಕಲೆ ಕಲಿಯಬಹುದಾಗಿದೆ.

ಈ ಶತಮಾನದ ಎರಡನೇ ದಶಕದಲ್ಲಿ ಇಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿ ಚಿತ್ರ ಕಲೆಯನ್ನು ಒಂದು ಸಾಮಾನ್ಯ ವಿಷಯವಾಗಿ ಕಲಿಸುವ ಪದ್ಧತಿ ಪಠ್ಯಕ್ರಮದಲ್ಲಿ ಸೇರಿದ್ದಂತೆ ಕಂಡು ಬರುತ್ತದೆ. ಆಳಂದಕರ ಅವರ ಬಾಲ್ಯದಲ್ಲಿ ಅವರಿಗೆ ಮಾರ್ಗದರ್ಶನ ಮಾಡಿದವರು ಅವರ ಶಾಲೆಯಲ್ಲಿ ಡ್ರಾಯಿಂಗ್ ಶಿಕ್ಷಕರಾಗಿದ್ದ ಜೋಷಿ ಅವರು. ಶಂಕರ್ ಮಾಸ್ತರ್ ಎಂಬುವವರು ಈ ಪ್ರದೇಶದಿಂದ ಚಿತ್ರಕಲೆಯ ಲೋಯರ್ ಮತ್ತು ಹೈಯರ್ ಗ್ರೇಡ್ ಪರೀಕ್ಷೆಗಳಿಗೆ (ಮುಂಬಯಿಯ) ವಿದ್ಯಾರ್ಥಿಗಳನ್ನು ತಯಾರಿಸುತ್ತಿದ್ದರು. ಮುಂದೆ ಗುಲಬರ್ಗಾದ ನೂತನ ವಿದ್ಯಾಸಂಸ್ಥೆಯಲ್ಲಿ ಆಳಂದಕರ್ ಅವರು ಕಲಾ ಶಿಕ್ಷಕರಾಗಿ ಸೇರಿದ ಮೇಲೆ ಅಲ್ಲಿಯೇ ಪ್ರತ್ಯೇಕವಾಗಿ ಲಲಿತಕಲಾ ಶಾಲೆಯೊಂದನ್ನು ತೆರೆದಿದ್ದರು. ಎಸ್. ಎಂ. ಪಂಡಿತ್, ಚಂದ್ರಶೇಖರ್, ಭೋಪಲೆ, ವಿದ್ಯಾಭೂಷಣ್, ಜೆ.ಡಿ. ಕಮಡೇಕರ್ ಮುಂತಾದ ಮುಂದೆ ಹೆಸರು ಮಾಡಿದ ಹಲವಾರು ಕಲಾವಿದರು ಈ ಕಲಾ ಶಾಲೆಯಲ್ಲಿ ಅಭ್ಯಸಿಸಿದವರು.

ಪ್ರತ್ಯೇಕವಾಗಿ ಜಿಲ್ಲೆಯಲ್ಲಿ ಮೊದಲ ಕಲಾ ಶಾಲೆಯನ್ನು ಆರಂಭಿಸಿದವರು, ಜೆ. ಎಸ್. ಖಂಡೇರಾವ್ ಅವರು. 'ಆದರ್ಶಕಲಾ ಮಂದಿರ' ಎಂಬ ಹೆಸರಿನ ಈ ಶಾಲೆಯಿಂದ ವಿ. ಜಿ. ಅಂದಾನಿ, ಶಿವಶರಣಪ್ಪ ಉಪ್ಪಿನ, ಮಂಗಳಾ ಪಂಡಿತ್ ಮುಂತಾದವರು ಇಲ್ಲಿಂದ ೧೯೦೫ರಲ್ಲಿ ಹೊರ ಬಂದವರು. ಮುಂದೆ ೧೯೭೧ರಲ್ಲಿ ಶರಣ ಬಸವೇಶ್ವರ ಕಾಲೇಜಿನಲ್ಲಿ ಕಲಾ ಶಿಕ್ಷಣ ಆರಂಭಗೊಂಡು ಖಂಡೇರಾವ್ ಅವರು ಅಲ್ಲಿ ಆಯ್ಕೆಯಾಗಿದ್ದರಿಂದ ಶಾಲೆಯ ಜವಾಬ್ದಾರಿಯನ್ನು ವಿ. ಜಿ. ಅಂದಾನಿ ಅವರಿಗೆ ೧೯೭೭ರಲ್ಲಿ ವಹಿಸಲಾಯಿತು.

## ಕಲಾನಿಕೇತನ

ಸಂಸ್ಥೆಯ ನಿರ್ದೇಶಕ ವಿ. ಜಿ. ಅಂದಾನಿಯವರ ಸ್ವಂತ ಶ್ರಮ, ದೂರದೃಷ್ಟಿ ಹಾಗೂ ಅಧ್ಯಕ್ಷರಾದ ವಿದ್ಯಾಚಂದ್ರ ಕೊಠಾರಿ ಮುಂತಾದವರ ಸಹಕಾರ, ಆರ್ಥಿಕ ನೆರವು ಇತ್ಯಾದಿಗಳಿಂದ, ನಗರಪಾಲಿಕೆಯ ಉದ್ಯಾನವನದ ತಾಣದಲ್ಲಿ ಸುಸಜ್ಜಿತವಾದ ಕಲಾ ಶಾಲೆಯನ್ನು ನಿರ್ಮಿಸಿದ್ದು ನೂರಾರು ಕಲಾವಿದ್ಯಾರ್ಥಿಗಳು ಕಲಾಭ್ಯಾಸ ಮಾಡುವಂತಾಗಿದೆ. ಸ್ನಾತಕ, ಸ್ನಾತಕೋತ್ತರ ಪದವಿಗಳು, ಡಿಪ್ಲೋಮಾ ಪದವಿ ಹಾಗೂ ಕಲಾ ಶಿಕ್ಷಕರ ಪದವಿಯ ಅಭ್ಯಾಸಕ್ಕೆ ಇಲ್ಲಿ ಅನುಕೂಲವಿದೆ. ಸ್ನಾತಕ ಪದವಿಯಲ್ಲಿ ೧೯೯೧ರಿಂದ ೧೯೯೭ರವರೆಗೆ ೪೮ ವಿದ್ಯಾರ್ಥಿಗಳು ಪದವಿಗಳಿಸಿದ್ದಾರೆ. ಸ್ನಾತಕೋತ್ತರ ಪದವಿಯಲ್ಲಿ ವರ್ಣಚಿತ್ರಕಲೆ, ಗ್ರಾಫಿಕ್ ಹಾಗೂ ವಾಣಿಜ್ಯ ಕಲೆಗಳಿಗೆ ಅವಕಾಶವಿದ್ದು ೨೦ ಜನ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇಡೀ ಗುಲಬರ್ಗಾ ವಿಭಾಗಕ್ಕೆ ಡಿಪ್ಲೊಮಾ ಪದವಿಗೆ ಅನುಕೂಲ ಇರುವುದು ಈ ಕಲಾ ಶಾಲೆಯಲ್ಲಿ ಮಾತ್ರ. 'ಐಡಿಯಲ್ ಫೈನ್ ಆರ್ಟ್ಸ್ ಸೊಸೈಟಿ' ಒಂದು ಟ್ರಸ್ಟ್‌ನಂತಿದ್ದು ಅದರ ಆಶ್ರಯದಲ್ಲಿರುವ ಕಾಲೇಜ್ ಆಫ್ ವಿಷಿಯಲ್ ಆರ್ಟ್ಸ್‌ನಲ್ಲಿ ೧೯೮೪ರಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯನ್ನು ಕೊಡಲಾಗುತ್ತಿದೆ. ಈ ವಿಭಾಗಕ್ಕೆ ೧೯೯೦ರಲ್ಲಿ 'ಮಾತೋಶ್ರೀ ಮಾಣಿಕಬಾಯಿ ಕೊಠಾರಿ ಕಾಲೇಜ್ ಆಫ್ ವಿಶುಯಲ್ ಆರ್ಟ್ಸ್' ಎಂದು ಪುನರ್ ನಾಮಕರಣ ಮಾಡಲಾಗಿದೆ. ಇದಲ್ಲದೆ ಜನಪದ ಕಲೆಗಳ ಸಂಗ್ರಹಾಲಯ, ಕಲಾ ಪ್ರದರ್ಶನಾಲಯಗಳು ಸೊಸೈಟಿಯ ಅಂಗ ಸಂಸ್ಥೆಗಳಂತಿವೆ. ಅಂದಾನಿ ಅವರು ಈ ಪ್ರದೇಶದ ಸಾಂಪ್ರದಾಯಿಕ ಹಾಗೂ ಜಾನಪದ ಕಲಾಕೃತಿಗಳನ್ನು, ಲೋಹದ ಮೂರ್ತಿ ಶಿಲ್ಪ, ಮರದ ಉಪಕರಣಗಳು, ಗಾಜಿನಫಲಕದ ಚಿತ್ರಗಳು, ಉದ್ಧರಣೆ ವಚನದ ಕಟ್ಟುಗಳು ಇತ್ಯಾದಿ ಸಾವಿರಕ್ಕೂ ಮಿಕ್ಕಿದ ಕಲಾಕೃತಿಗಳನ್ನು ಸಂಗ್ರಹಿಸಿದ್ದು, ಸಂಸ್ಥೆಗೆ ನೀಡಿದ್ದಾರೆ. ಆಗಿಂದ್ದಾಗ್ಗೆ ನಡೆಯುವ ಕಲಾ ಶಿಬಿರಗಳು, ಕಲಾಗಾರಗಳು, ಪ್ರಾತ್ಯಕ್ಷಿಕೆಗಳು ಇತ್ಯಾದಿಗಳಿಂದ ಸಂಗ್ರಹಿತವಾದ ಸಮಕಾಲೀನ ಕಲಾ ಕೃತಿಗಳ ಸಂಗ್ರಹವೂ ಸಾಕಷ್ಟಿದ್ದು, ಪ್ರದರ್ಶನಾಲಯದಲ್ಲಿ ವ್ಯವಸ್ಥಿತವಾಗಿ ಪ್ರದರ್ಶಿಸಲಾಗಿದೆ. ಕಲೆಗೆ ಸಂಬಂಧಿಸಿದಂತೆ ಸುಮಾರು ಏಳೆಂಟು ಸಾವಿರ ಪ್ರೌಢ ಗ್ರಂಥಗಳಿಂದ ಕೂಡಿದ ಸುಸಜ್ಜಿತ ಗ್ರಂಥಾಲಯವಿದೆ. ಕಲಾಕೃತಿಗಳ ವರ್ಣ ಪಾರದರ್ಶಿಕೆಗಳು, ಛಾಯಾಚಿತ್ರಗಳ ಸಂಗ್ರಹವಿದ್ದು, ಕಲಾಚರಿತ್ರೆಯ ತರಗತಿಗಳಲ್ಲಿ ಬಳಸಿಕೊಳ್ಳಲಾಗುತ್ತದೆ. ಕಲಾ ಶಾಲೆಯಲ್ಲಿ ಪ್ರಸಾರಾಂಗವೂ ಇದ್ದು ಗವೀಶ ಹಿರೇಮಠರ 'ಕಲಾವಿದರು ನಡೆದು ಬಂದ ದಾರಿ' ಎಂಬ ಈ ಪ್ರದೇಶದ ಕಲಾವಿದರ ಪರಿಚಯ ಪುಸ್ತಕವೊಂದನ್ನು ಪ್ರಕಟಿಸಿದೆ. ಅಲ್ಲದೆ ಹಲವಾರು ಶುಭಾಶಯ ಪತ್ರ ಸಹ ಪ್ರಕಟಿಸಿದೆ. ಪ್ರಾದೇಶಿಕ ಮಟ್ಟದಲ್ಲಿ ಚಿತ್ರ, ಗ್ರಾಫಿಕ್, ವಾಣಿಜ್ಯ ಕಲೆಗಳ ಕಲಾಗಾರಗಳನ್ನೂ ರಾಷ್ಟ್ರೀಯ ಮಟ್ಟದಲ್ಲಿ (ರಾಜ್ಯ, ಕೇಂದ್ರ ಅಕಾಡಮಿ ಇತ್ಯಾದಿಗಳ ಸಹಯೋಗದೊಂದಿಗೆ) ಮೃತ್ ಶಿಲ್ಪ, ಶಿಲಾ ಶಿಲ್ಪ ಹಾಗೂ ಲೋಹ ಶಿಲ್ಪಗಳ ಕಲಾಗಾರಗಳನ್ನೂ ಅಖಿಲ ಭಾರತ ಮಟ್ಟದಲ್ಲಿ ಕಲಾ ಶಿಕ್ಷಣ ಕುರಿತ ಸಂಕಿರಣವೊಂದನ್ನೂ ಏರ್ಪಡಿಸಿದೆ. ಸ್ನಾತಕೋತ್ತರ ಪದವಿಯಲ್ಲಿ "ಲಘುಶೋಧ ಪ್ರಬಂಧ" (ಡೆಸರ್‌ಟೇಷನ್)ವೊಂದನ್ನು ಕಡ್ಡಾಯವಾಗಿ ಮಂಡಿಸಬೇಕಾಗಿದ್ದು, ಕಿನ್ನಾಳದ ಕಲೆ, ಕೌದಿಯ ಕಲೆ, ಬಳೆಗಳು, ಕಲಘಟಗಿಯ ಕಲೆ, ಗ್ರಾಮ ದೇವತೆಗಳು ಇತ್ಯಾದಿ ಶೀರ್ಷಿಕೆಯಲ್ಲಿ ಐವತ್ತಕ್ಕೂ ಹೆಚ್ಚು ಪ್ರಬಂಧಗಳು ಗ್ರಂಥ ರೂಪದಲ್ಲಿ ಮಂಡಿತವಾಗಿವೆ. ಪ್ರತಿವರ್ಷ ಶಾಲೆಯ ವಿದ್ಯಾರ್ಥಿಗಳ ಕಲಾಪ್ರದರ್ಶನ ಮಾಡಿ ಬಹುಮಾನಗಳನ್ನು ಕೊಡುವುದುಂಟು. ೧೯೯೫ರಲ್ಲಿ ೫೦೦ ಕೃತಿಗಳನ್ನು ಪ್ರದರ್ಶಿಸಿ ಎ. ಬಿ. ಕಾಳಪ್ಪ ಹಾಗೂ ಎಂ. ಎನ್. ರಾಧಾಕೃಷ್ಣ ಬಹುಮಾನಿತರಾದರು. ಇಡೀ ಕಟ್ಟಡದ ಸಂಕೀರ್ಣಕ್ಕೆ 'ಕಲಾ ನಿಕೇತನ' ಎಂದು ಕರೆದಿದ್ದು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದೆ. ಡಿಪ್ಲೊಮಾ ಕಲಾ ವಿಭಾಗಕ್ಕೆ ಎಂ. ಬಿ. ಲೋಹಾರ್ ಅವರು ಮುಖ್ಯಸ್ಥರಾಗಿದ್ದು, ರಾಜ್ಯ ಹೊರ ರಾಜ್ಯಗಳ ಹಲವಾರು ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಶರಣ ಬಸವೇಶ್ವರ ಕಾಲೇಜು

ಗುಲಬರ್ಗಾದ ಶರಣ ಬಸವೇಶ್ವರ ಕಾಲೇಜಿನಲ್ಲಿ ೧೯೭೧ರಲ್ಲಿ ಚಿತ್ರಕಲಾ ಶಿಕ್ಷಣ ಪ್ರಾರಂಭವಾಯಿತು. ನಂತರ ಸ್ನಾತಕ ಕಲಾ ವಿಭಾಗ(ಬಿ.ಎ)ದಲ್ಲಿ ಚಿತ್ರಕಲೆಯನ್ನು ಒಂದು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳುವ ಅವಕಾಶವನ್ನು ವಿಶ್ವವಿದ್ಯಾಲಯ ಒದಗಿಸಿಕೊಟ್ಟಿತು. ಚಿತ್ರಕಲೆ ಒಂದೇ ವಿಷಯವನ್ನು ತೆಗೆದುಕೊಂಡು ಸ್ನಾತಕೋತ್ತರ ಪದವಿಯನ್ನು ಪಡೆಯುವ ಸೌಲಭ್ಯ ನೀಡಿತು. ಇವೆರಡೂ ಅವಕಾಶಗಳು ಇಡೀ ರಾಜ್ಯದಲ್ಲಿಯೇ ಪ್ರಥಮವಾಗಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ದೊರೆಯಿತು. ಜೆ.ಒ.ಸಿ.ಯಲ್ಲಿ ಚಿತ್ರಕಲೆಯನ್ನು ಅಭ್ಯಸಿಸಿದವರಿಗೆ, ಸ್ನಾತಕ ಪದವಿಯಲ್ಲಿ (ಬಿ.ಫೈನ್)

ಎಲ್ಲ ಮೂರು ವಿಷಯಗಳನ್ನು ಚಿತ್ರಕಲೆಗೆ ಸಂಬಂಧಿಸಿದಂತೆಯೇ ತೆಗೆದುಕೊಳ್ಳಬಹುದಾದ ಸೌಲಭ್ಯವಿದೆ. ಕಾಲೇಜಿನಲ್ಲಿ ಸುಸಜ್ಜಿತವಾದ ಸ್ಟುಡಿಯೋ, ಗ್ರಂಥಾಲಯ ಇತ್ಯಾದಿಗಳಿವೆ. ೧೯೮೩ರಲ್ಲಿ ಸ್ನಾತಕೋತ್ತರ ತರಗತಿಗಳಲ್ಲಿ ೩೫ ವಿದ್ಯಾರ್ಥಿಗಳಿದ್ದು, ಈಗ (೧೯೯೭ರಲ್ಲಿ) ಮೊದಲ ವರ್ಷದಲ್ಲಿ ಆರು ಹಾಗೂ ಎರಡನೇ ವರ್ಷದಲ್ಲಿ ಎಂಟು ಮಂದಿ ವಿದ್ಯಾರ್ಥಿಗಳು ಇದ್ದಾರೆ. ಕಾಲೇಜಿನಲ್ಲಿ (ಸಹಯೋಗದೊಂದಿಗೆ) ಅಖಿಲ ಭಾರತ ಮಟ್ಟದ ಹಲವಾರು ಕಾರ್ಯಕ್ರಮಗಳನ್ನು ಸಂಯೋಜಿಸಿದ್ದು ೧೯೯೦ರಲ್ಲಿ ಅಖಿಲ ಭಾರತ ಮಟ್ಟದ ಭಾವಚಿತ್ರ ರಚನೆ ಹಾಗೂ ೧೯೯೫ರಲ್ಲಿ ರಾಷ್ಟ್ರೀಯ ಚಿತ್ರಕಲಾ ಶಿಬಿರ ಏರ್ಪಡಿಸಿದ್ದು, ದೇಶದ ವಿವಿಧ ಕಡೆಗಳಿಂದ ಸುಮಾರು ೧೫ ಕಲಾವಿದರು ಭಾಗವಹಿಸಿದ್ದರು. ಲಕ್ಷ್ಮಿ ಜಂಬಲದಿನ್ನಿ, ಜಿ. ಪಿ. ಶಿವಪುತ್ರ, ವೈ. ಪಿ. ಶಿವಕುಮಾರ್, ರೇಣುಕ ಬಿ. ಮಾಲಿಪಾಟೀಲ ಅವರುಗಳೂ ಎಸ್.ಬಿ. ಕಾಲೇಜಿನಿಂದ ಪದವೀಧರರು.

ಇವಲ್ಲದೆ ಗುಲಬರ್ಗಾದಲ್ಲಿ 'ಇಂಟಿಗ್ರೇಷನ್ ಕಲಾ ಶಾಲೆ' (೧೯೯೩) ಹಾಗೂ ಯಾದಗಿರಿಯಲ್ಲಿ ಬ್ಲುಸ್ಟಾರ್ 'ಕಲಾ ಶಾಲೆಗಳು' (1995) ಚಿತ್ರಕಲೆ ಶಿಕ್ಷಣ ನೀಡುತ್ತಿವೆ.

**ಕಲಾ ಸಂಘಟನೆಗಳು : ಪ್ರದರ್ಶನಗಳು**

ಗುಲಬರ್ಗಾದಲ್ಲಿ ೧೯೭೪ರಲ್ಲಿಯೇ ರೈನ್‌ಬೋ ಎಂಬ ಕಲಾ ಸಂಘಟನೆಯಿದ್ದು ಹಲವಾರು ಪ್ರದರ್ಶನಗಳನ್ನು ಮಾಡಿದ್ದರು. ೧೯೭೮ರಲ್ಲಿ ವಿ. ಜಿ. ಅಂದಾನಿ, ಎಸ್. ಬಿ. ಉಪ್ಪಿನ್, ಎಂ.ಬಿ. ಲೋಹಾರ್ ಹಾಗೂ ಬಿ. ಆರ್. ಉಪ್ಪಿನ ಅವರುಗಳು 'ಪ್ರತಿಭೆಯ ಪ್ರತಿ ರೂಪ' ಎಂಬ ಹೆಸರಿನಿಂದ ಕಲಾ ಪ್ರದರ್ಶನ ಏರ್ಪಡಿಸಿದ್ದರು. ಶರಣ ಬಸವೇಶ್ವರ ಕಲಾ ಕಾಲೇಜಿನ ಕಲಾ ಉಪಾಧ್ಯಾಯರುಗಳು ೧೯೮೧ರಲ್ಲಿ 'ಕಲಾ ಪ್ರಗತಿ' ಎಂಬ ಹೆಸರಿನಲ್ಲಿ ಸಂಘಟನೆಯನ್ನು ಮಾಡಿಕೊಂಡಿದ್ದು, ಖಂಡೇರಾವ್ ಅವರೂ ಸೇರಿದಂತೆ ಎ. ಎಸ್. ಪಾಟೀಲ್, ವಿ. ಬಿ. ಬಿರಾದಾರ, ಎಂ. ಬಿ. ಪಾಟೀಲ್, ಎಸ್. ಬಿ. ಉಪ್ಪಿನ್, ಪಿ. ಎಸ್. ಮಾಲಿಪಾಟೀಲ್, ಸಿ. ಎಸ್. ಚಕ್ಕಿ, ವಿಜಯ ಹಾಗರಗುಂಡಗಿ, ಎಸ್. ಎಂ. ನೀಲ, ಎಂ. ಎಂ. ವಾಡೀಕರ್, ಮಂಗಳ ಉಪ್ಪಿನ್, ಎ. ಡಿ. ಪತ್ತಾರ ಮುಂತಾದವರು ಸಂಘಟಿಸಿ ಹಲವಾರು ಪ್ರದರ್ಶನಗಳನ್ನು ನೀಡಿದ್ದಾರೆ. ಎಸ್. ನೀಲಾ ಅವರು ೧೯೮೯ರಲ್ಲಿ ತಮ್ಮ ಇನ್ನೂರು ಕೃತಿಗಳನ್ನು ಒಂದೇ ಎಡೆ ಪ್ರದರ್ಶಿಸಿದ್ದರು. 'ಫೈನ್ ಫೈವ್' ಎಂಬ ಹೆಸರಿನಲ್ಲಿ ವಿ. ಬಿ. ಬಿರಾದಾರ, ಎಂ. ಸಿ. ಚೆಟ್ಟಿ, ಶಂಕರ್ ನವಲಾಬ, ಎಸ್. ರಘುಪಾಲ ರೆಡ್ಡಿ, ಎಂ. ಜಿ. ಬಂಗ್ಲೆವಾಲೆ ಅವರುಗಳು (ಇದರಲ್ಲಿ ಕೆಲವರು ಈ ಜಿಲ್ಲೆಯವರಲ್ಲ) ತಂಡವೊಂದನ್ನು ರೂಪಿಸಿ ಕಲಾ ಪ್ರದರ್ಶನ ನೀಡಿದರು.

ಆದರ್ಶ ಕಲಾ ಸಂಸ್ಥೆಯಿಂದ ಹೊರ ಬಂದ ವಿದ್ಯಾರ್ಥಿಗಳು ಒಂದೆಡೆ ಸೇರಿ ಮಿಕ್ಸೆಡ್ ಬ್ಯಾಗ್ ಎಂಬ ಹೆಸರಿನಲ್ಲಿ ಆಗಾಗ್ಗೆ ವಿವಿಧ ಸ್ಥಳಗಳಲ್ಲಿ ಕಲಾ ಪ್ರದರ್ಶನಗಳನ್ನು ಮಾಡುತ್ತಾರೆ. ೧೯೯೩ರಲ್ಲಿ ೧೧ನೇ ಮಿಕ್ಸೆಡ್ ಬ್ಯಾಗ್ ಪ್ರದರ್ಶನ ಬೆಂಗಳೂರಿನಲ್ಲಿ ನಡೆಯಿತು.

ಇವಲ್ಲದೆ ಗುಲಬರ್ಗಾದ ಆದರ್ಶ ಕಲಾ ಶಾಲೆ ೧೯೯೦ರಲ್ಲಿ ಅಖಿಲ ಕರ್ನಾಟಕ ಮಟ್ಟದ ವರ್ಣ ಚಿತ್ರ ಪ್ರದರ್ಶನ ಹಾಗೂ ೯೧-೯೨ರಲ್ಲಿ ಅಖಿಲ ಭಾರತ ಮಟ್ಟದ ಚಿಕಣಿ ಚಿತ್ರಕಲಾ (ಮಿನಿಯೇಚರ್) ಪ್ರದರ್ಶನ ಏರ್ಪಡಿಸಿದ್ದು, ಇದು ಆ ಬಗೆಯ ಐದನೆಯ ಪ್ರದರ್ಶನವಾಗಿದ್ದಿತು. ಅಂತೆಯೇ ೧೯೯೭ರಲ್ಲಿ ಅಖಿಲ ಭಾರತ ಮಟ್ಟದ ಐದನೆಯ ರೇಖಾಚಿತ್ರ ಪ್ರದರ್ಶನ ಸಹ ಏರ್ಪಡಿಸಿತ್ತು.

೧೯೯೭ರಲ್ಲಿ ೮ನೇ ರಾಷ್ಟ್ರೀಯ ಕಲಾಮೇಳ ಬೆಂಗಳೂರಿನಲ್ಲಿ ನಡೆದಾಗ ಜಿಲ್ಲೆಯಿಂದ ಆದರ್ಶ ಕಲಾ ಶಾಲೆಯ ವತಿಯಿಂದ ಪ್ರದರ್ಶನ ಮಳಿಗೆಗಳು ಇದ್ದುವು. ರಾಷ್ಟ್ರೀಯ ಕಲಾಮೇಳದಲ್ಲಿ ಆರ್ಟ್ ಇನ್‌ವೆಂಟ್ ಗ್ರೂಪ್, ಎಸ್. ಬಿ. ಕಾಲೇಜಿನ ಕಲಾವಿದರ ತಂಡ, 'ಆರಂಭ - ೯೭', 'ಯಂಗ್ ಆರ್ಟಿಸ್ಟ್ ಗ್ರೂಪ್', 'ಕಲಾಶ್ರೀ', 'ಎಂ. ಎಂ. ಸಿ. ಪಿ-೯೭' ಮುಂತಾದ ಕಲಾ ತಂಡಗಳೂ ಭಾಗವಹಿಸಿದ್ದವು.

ಜಿಲ್ಲೆಯಿಂದ ಹೊರಬಂದ ಕಲಾವಿದರಲ್ಲಿ ಜ್ಯೋತಿ ಜವಳೀಕರ್, ಬಸವರಾಜ ಮುಸವಳಗಿ, ಬಸವರಾಜಜಾನೆ, ವೀರೇಂದ್ರ ಶಹ, ಎಂ. ವಿ. ಕಂಬಾರ, ಕಿಶೋರ್ ಕುಮಾರ ನಾಗೋರೆ, ಪಿ. ಬಿ. ಕುರ್ಚಗಿ, ಎ. ಕೆ. ಜೋಶಿ, ಅಮರಮ್ಮ , ಅನಸೂಯ ಪಾಟೀಲ್, ಮಂಜುಳಜಾನೆ, ವಿವೇಕರಾವ್, ಎ.ಡಿ. ಪತ್ತಾರ್, ಮೋಹನ ಸಿತನೂರ, ವಿಜಯ ಬಾಗೋಡಿ,

ಕುಪ್ಪಣ್ಣ ಕುಂದಗಾಲ್, ಪ್ರಕಾಶ್ ಗಡಕರ್ ಎಸ್. ರಾಜಶೇಖರ್, ಪೂರ್ಣಿಮ ಪಾಟೀಲ್, ಟಿ. ದೇವೇಂದ್ರ, ವೈ. ಜೆ. ಚಂದ್ರಹಾಸ, ಶಶಿರಾವ, ಆರ್. ಬಿರಾದಾರ, ಅಮೃತ ಎಂ. ಸಾಹು, ಜಿ. ಆರ್. ಈರಣ್ಣ ಮಲ್ಲಿಕಾರ್ಜುನ, ಎಸ್. ಶೆಟ್ಟಿ ಮುಂತಾದ ಅನೇಕರನ್ನು ಹೆಸರಿಸಬಹುದು. ಇವರಲ್ಲಿ ಕೆಲವರು ಹೆಚ್ಚಿನ ಅಭ್ಯಾಸ ಮಾಡಿ ರಾಜ್ಯ, ಹೊರ ರಾಜ್ಯಗಳಲ್ಲಿ ಕ್ರಿಯಾಶೀಲರಾಗಿದ್ದಾರೆ.

ಕೇಂದ್ರ ಲಲಿತ ಕಲಾ ಅಕಾಡಮಿಯ ೧೯೯೭ರ ಅಖಿಲ ಭಾರತ ಪ್ರದರ್ಶನದಲ್ಲಿ ಜಿಲ್ಲೆಯ ವಿಜಯ ಬಾಗೋಡಿ ಎಸ್. ಆರ್. ಬಿರಾದಾರ ಅವರುಗಳಿಗೆ ರಾಷ್ಟ್ರ ಪ್ರಶಸ್ತಿಯು, ಎಂ. ಬಿ. ಲೋಹಾರ್, ವೀರೇಂದ್ರ ಶಹ ಅವರಿಗೆ ಗೌರವ ಪ್ರಶಸ್ತಿಯು ಲಭ್ಯವಾಯಿತು. ಜಿಲ್ಲೆಯ ಸುಮಾರು ೧೫ ಕಲಾವಿದರ ಕೃತಿಗಳು ಪ್ರದರ್ಶನಕ್ಕೆ ಆಯ್ಕೆಯಾದವು.

ಜಿಲ್ಲೆಯಲ್ಲಿ ಕಲಾಕೃತಿಗಳು ಹಾಗೂ ವಿವಿಧ ಕುತೂಹಲಕಾರಿ ವಸ್ತುಗಳನ್ನು ಸಂಗ್ರಹಿಸಿ ಮನೆಯಲ್ಲಿ ಅಥವಾ ಶಾಲೆಯಲ್ಲಿ ಪ್ರದರ್ಶಿಸಿರುವುದುಂಟು. ವಿ.ಜಿ. ಅಂದಾನಿ ಅವರು ತಾವು ಸಂಗ್ರಹಿಸಿದ ಜನಪದ ಹಾಗೂ ಇನ್ನಿತರ ಕಲಾವಸ್ತುಗಳನ್ನು ಆದರ್ಶ ಕಲಾ ಶಾಲೆಯಲ್ಲಿ ಪ್ರದರ್ಶಿಸಿದ್ದಾರೆ. ವಿದ್ಯಾಚಂದ್ರ ಕೊಠಾರಿ ಅವರಲ್ಲಿ ನಾಣ್ಯಗಳು, ಕಲಾ ಕೃತಿಗಳು ಲೋಹದ ವಿಗ್ರಹಗಳು ಹಾಗೂ ಪುಸ್ತಕಗಳ ದೊಡ್ಡ ಸಂಗ್ರಹವೇ ಇವೆ. ಅಪೂರ್ವದಾನಿಗಳೂ ಆಗಿರುವ ಕೊಠಾರಿಯವರ ಹೆಸರು ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯವಾದುದು. ಈ ಪ್ರದೇಶದ ಗಣ್ಯ ವ್ಯಕ್ತಿಯಾದ ಪೂಜ್ಯ ಶರಣಬಸಪ್ಪ ಅಪ್ಪ ಅವರು ಸಾಂಸ್ಕೃತಿಕ ಕ್ಷೇತ್ರಕ್ಕೆ ಉದಾರ ನೆರವು ನೀಡಿದ್ದಾರೆ. ಶರಣ ಬಸವೇಶ್ವರ ಸಂಸ್ಥಾನದಲ್ಲಿ ಕಲಾಕೃತಿಗಳ ಸಂಗ್ರಹವಿದೆ. ಗುಲಬರ್ಗಾ ಊರಿನ ರಂಗರಾವ್ ಬಡಶೇಷಿ ಅವರು ನಿರುಪಯೋಗಿ ವಸ್ತುಗಳಿಂದ ಹಲವಾರು ಆಕರ್ಷಕ ಕಲಾಕೃತಿಗಳನ್ನು ಸುಮಾರು ೪೦ ವರ್ಷಗಳಿಂದ ರಚಿಸುತ್ತಿದ್ದು, ಮನೆಯಲ್ಲಿಯೇ ಪ್ರದರ್ಶಿಸಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಗಾಜಿನ ಚಿತ್ರಗಳು, ಚಿತ್ರಿತ ಹಸ್ತ ಪ್ರತಿಗಳು, ತಾಳೆಯೋಲೆಗಳು ಹಾಗೂ ಜನಪದ ಸಾಮಗ್ರಿಗಳ ಉತ್ತಮ ಸಂಗ್ರಹವಿದೆ. ಗುಲಬರ್ಗಾ ತಾಲೂಕಿನ ಪಟ್ಟಣ ಗ್ರಾಮದ ವಿಠಲ ಗುರುನಾಥ ಪಟ್ಟಣ್‌ಕರ್‌ರವರು ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ ಚಿತ್ರಾಲಂಕಾರಗಳಿಂದ ಕೂಡಿದ ೨೦೦ಕ್ಕೂ ಹೆಚ್ಚು ಪುಸ್ತಕಗಳನ್ನು ಕೈಬರಹದಲ್ಲಿ ನಕಲು ಮಾಡಿದ್ದು, ಕೆಲವು ಲಭ್ಯವಿದೆ. ಗೋಗಿಯ ಡಿ. ಎನ್. ಅಕ್ಕಿ, ಮುಂತಾದ ಅನೇಕರಲ್ಲಿ ನಾಣ್ಯಗಳು ಹಳೆಯ ಪತ್ರಿಕೆಗಳು ಇತ್ಯಾದಿ ಅಪೂರ್ವ ವಸ್ತುಗಳನ್ನು ನೋಡಬಹುದು. ಅಫಜಲ್‌ಪುರದ ಹರಿಹರರಾವ್ ಮೊಹರೇರ ಅವರಲ್ಲಿ ಹಳೆಯ ನಾಣ್ಯಗಳು, ನಕ್ಷೆಗಳು, ಸರ್ಕಾರಿ ದಾಖಲೆಗಳು, ಚಿತ್ರಗಳು, ಪತ್ರಿಕೆಗಳು ಇತ್ಯಾದಿ ಅನೇಕ ಅಪೂರ್ವ ವಸ್ತುಗಳ ಸಂಗ್ರಹವಿದ್ದು ಅವುಗಳನ್ನು ರಕ್ಷಿಸಿಡಬೇಕಾದ ತೀವ್ರ ಅಗತ್ಯವಿದೆ.

ಗುಲಬರ್ಗಾ ಜಿಲ್ಲೆಯ ಕಲಾವಿದರಾದ ಬಾಬುರಾವ್ ಅವರು ಪ್ರಾಂಶುಪಾಲರಾಗಿ ಪಿ.ಬಿ. ಹರಸೂರ ಅವರು ಪ್ರಾಧ್ಯಾಪಕರಾಗಿ ತುಮಕೂರಿನಲ್ಲಿ ಕಲಾ ಶಾಲೆಯೊಂದನ್ನೂ, ಎಂ. ಜಿ. ದೊಡ್ಡಮನಿ ಅವರು ಬೆಂಗಳೂರಿನಲ್ಲಿ ಕಲಾ ಗ್ಯಾಲರಿಯೊಂದನ್ನು ನಿರ್ವಹಿಸುತ್ತಿದ್ದಾರೆ. ಜೇವರ್ಗಿಯ ಕಲಾವಿದ ಕಾಳೇಶ ಅವರು ಕಲೆ ಸಾಹಿತ್ಯ ಕುರಿತಂತೆ 'ಚಲುವು ಕರ್ನಾಟಕ' ಎಂಬ ಪತ್ರಿಕೆಯನ್ನು ಬೆಂಗಳೂರಿನಿಂದ ಹೊರತರುತ್ತಿರುವುದಲ್ಲದೆ ಸಾಂಘಟಿಕ ಚಟುವಟಿಕೆಗಳನ್ನು ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದಾರೆ. ರಾಜ್ಯ ಲಲಿತ ಕಲಾ ಅಕಾಡಮಿಯ ಸದಸ್ಯರಾಗಿದ್ದ ಬಸವರಾಜ್ ಉಪ್ಪಿನ್ ಅವರು 'ಬಾನಯ್ಯ ಗರುಡಾದ್ರಿ' ಎಂಬ ಹಾಗೂ ಗವೀಶ ಹಿರೇಮಠ ಅವರು, 'ಕಲಾವಿದರು ನಡೆದು ಬಂದದಾರಿ' ಮತ್ತು 'ಸೃಜನಶೀಲ ಕಲಾವಿದರು', ಎಂಬ ಪುಸ್ತಕಗಳನ್ನು ರಚಿಸಿದ್ದಾರೆ.

ಗುಲಬರ್ಗಾ ವಿಶ್ವವಿದ್ಯಾನಿಲಯ ತನ್ನ ವ್ಯಾಪ್ತಿಯಲ್ಲಿರುವ ನಾಲ್ಕು ಜಿಲ್ಲೆಗಳ ಸಾಹಿತಿ, ಕಲಾವಿದರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಪ್ರತಿವರ್ಷ ಪುಸ್ತಕ ಹಾಗೂ ಕಲಾಕೃತಿಗಳನ್ನು ಆಹ್ವಾನಿಸಿ ೨೦೦೦ ರೂ.ಗಳ ಬಹುಮಾನ ನೀಡುತ್ತದೆ. ನಂತರ ಕಲಾಕೃತಿಗಳ ಪ್ರದರ್ಶನ ಸಹ ಏರ್ಪಡಿಸುತ್ತದೆ. ೧೯೮೩ರಲ್ಲಿ ಆರಂಭವಾದ ಈ ಗೌರವಧನ ಯೋಜನೆಯಲ್ಲಿ ೧೯೯೫ ರಲ್ಲಿ ರುದ್ರೇಗೌಡ ಎಸ್. ಪಾಟೀಲ್, ಪೋಪುರಿ ರಾಜಾರಾವ್, ಎಂ. ಜಗದೀಶ್, ಮಂಜುಳ ಕಾಳಗಿ ಹಾಗೂ ಓಂಪ್ರಕಾಶ ಮಡಪತಿ ಅವರುಗಳು ಬಹುಮಾನಿತರಾಗಿದ್ದರು.

ಮೇ ೧೯೯೭ರಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಚಿತ್ರಕಲಾವಿದರ ಶಿಬಿರವನ್ನು ಆದರ್ಶ ಕಲಾಶಾಲೆಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನೊಂದಿಗೆ ಭಾಲ್ಕಿಯಲ್ಲಿ ಏರ್ಪಡಿಸಿದ್ದು ಜಿಲ್ಲೆಯ ಕಲಾವಿದರೂ ಪಾಲುಗೊಂಡಿದ್ದರು.

ಜಿಲ್ಲೆಯ ವಿವಿಧ ಭಾಗಗಳಲ್ಲೂ ಕಲಾ ಚಟುವಟಿಕೆಗಳು ಆಗಾಗ್ಗೆ ನಡೆಯುತ್ತಿದ್ದು ೧೯೯೫ ರಲ್ಲಿ ಜೇವರ್ಗಿಯಲ್ಲಿ ಗ್ರಾಮೀಣ ಸಂಸ್ಕೃತಿಯ ಅಂಗವಾಗಿ ಕಲಾ ಉತ್ಸವ ನಡೆಸಲಾಯಿತು. ಅಧಿಕ ಸಂಖ್ಯೆಯಲ್ಲಿ ಜಿಲ್ಲೆಯಿಂದ ಕಲಾವಿದರು ಕಲಾ ಶಿಕ್ಷಕರು ಹೊರ ಬರುತ್ತಿರುವುದು ಸಂತೋಷಕರ ವಿಷಯವಾದರು, ಅವರದೇ ಆದ ಸಮಸ್ಯೆ ಇಲ್ಲದಿಲ್ಲ. ಕಲಾ ಶಿಕ್ಷಕರ ಸಂಖ್ಯೆಗೆ ತಕ್ಕನಾಗಿ ಹುದ್ದೆಗಳು ಇಲ್ಲದಾಗಿ 'ಜಿಲ್ಲಾ ನಿರುದ್ಯೋಗಿ ಚಿತ್ರಕಲಾ ಶಿಕ್ಷಕರ ಸಂಘ'ವೊಂದು ರೂಪುಗೊಂಡು ಆಗಸ್ಟ್ ೧೯೯೬ರಲ್ಲಿ ಸರ್ಕಾರದ ಗಮನ ಸೆಳೆಯಲು ಧರಣಿ ನಡೆಸಿದರು.

## ಶಿಲ್ಪ

ಶಿಲ್ಪ, ವಾಸ್ತುಶಿಲ್ಪಗಳ ದೃಷ್ಟಿಯಿಂದ ಗುಲಬರ್ಗಾ ಜಿಲ್ಲೆಯಲ್ಲಿ ಕಾಲಕಾಲದ ಅನೇಕ ದೇವಾಲಯಗಳನ್ನು ಅವುಗಳಲ್ಲಿ ಶಿಲ್ಪಕಲೆಗಳನ್ನು ನೋಡಬಹುದು. ಮುಖ್ಯವಾಗಿ ಶಿರವಾಳ, ಮಳಖೇಡ, ಸನ್ನತಿ, ಕಾಳಗಿ, ಹುಡುಗಿ, ಕಾಳಗೇರಿ, ಹಗರಟಗಿ, ಪಾದಸ್ವಾರಿ,ಗುಲಬರ್ಗಾ ಕೋಟೆಯೊಳಗೆ ಭಗ್ನಗುಡಿ, ಅತ್ತೂನುರು, ಏವೂರು, ಸೇಡಂ, ಚಿಂಚೋಳಿ, ದುಮ್ಮನಗೂಡ, ಮುಂತಾದ ಅನೇಕ ಸ್ಥಳಗಳಲ್ಲಿ ಶಿಲ್ಪಕಲಾ ವೈಭವದಿಂದ ಕೂಡಿದ ದೇವಾಲಯಗಳನ್ನು ಕಾಣಬಹುದು. ಭೀಮರಾಯನ ಗುಡಿಯ ಮಾರುತಿ ದೇವಾಲಯದಲ್ಲಿ ಗಂಗರ ವಾಸ್ತು ಶೈಲಿಯಂತೆ ಕಂಡು ಬರುವ ಸಿಂಹದೊಂದಿಗೆ ಇರುವ ಕಂಬಗಳಿವೆ. ಏವೂರಿನ ಬುದ್ಧ, ಸನ್ನತಿಯಲ್ಲಿ ದೊರೆತ ರೋಮನ್ ಲಿಪಿ ಹಾಗೂ ಅರಸರ ಚಿತ್ರವುಳ್ಳ ಪದಕಗಳು ಈಚಿನ ಮುಖ್ಯ ಶೋಧನೆಗಳು. ಮುಂದೆ ಮೊಹಮ್ಮದ್ದೀಯ ಅರಸು ಮನೆತನಗಳು ಆಳ್ವಿಕೆ ನಡೆಸಿದ್ದು, ಶಿಲ್ಪಕಲೆಗೆ ಪ್ರೋತ್ಸಾಹ ದೊರೆಯಲಿಲ್ಲ. ಆದರೆ ಅವರು ಬೃಹದಾಕಾರದ ಪ್ರಾರ್ಥನಾ ಮಂದಿರ ಹಾಗೂ ಸಮಾಧಿ ಮಂದಿರಗಳನ್ನು ರಚಿಸಿದ್ದು ವಾಸ್ತು ಶಿಲ್ಪದ ದೃಷ್ಟಿಯಿಂದ, ಮಹತ್ವ ಪೂರ್ಣ ಕಾಣಿಕೆಗಳು. ಹಸನ ಗಂಗುವಿನ ಸಮಾಧಿ ಮಂದಿರದ ಓರೆಯಾದ ಭಿತ್ತಿ ರಚನೆ, ಬಂದೇ ನವಾಜ ಸಮಾಧಿ ಮಂದಿರ ಸಮುಚ್ಚಯದಲ್ಲಿರುವ ಇತರ ಮಂದಿರಗಳು, ಬಳಿಯ ಸಪ್ತಗುಂಬಜ್‌ಗಳು ಇತ್ಯಾದಿ ಮಹಮ್ಮದೀಯರ ಅನೇಕ ಧಾರ್ಮಿಕ ಮಂದಿರಗಳನ್ನು ಜಿಲ್ಲೆಯಾದ್ಯಂತ ಕಾಣಬಹುದು. ಗುಲಬರ್ಗಾ ಕೋಟೆಯೊಳಗೆ ಇರುವ ಜಾಮಿಯ ಮಸೀದಿ, ಆ ಬಗೆಯ ರಚನೆಗಳಲ್ಲಿ ಅದ್ಭುತವೆನಿಸುವಂತಿದೆ. ಕಂಬಗಳು, ಕಮಾನುಗಳು ಮಧ್ಯದ ಗುಮ್ಮಟ, ಹೊಳಪಾದ ಗಚ್ಚಿನ ನೆಲ ಇತ್ಯಾದಿಗಳಿಂದ ಕೂಡಿದ ಈ ಮಸೀದಿಯ ವಾಸ್ತುಶಿಲ್ಪ ಆಕರ್ಷಕವಾಗಿದೆ. ಫಿರೋಜಾಬಾದ್, ಚಿಂಚೋಳಿಗಳಲ್ಲೂ ಚಿತ್ತಾಪುರ ಕೋಟೆಯಲ್ಲೂ ಇಸ್ಲಾಂ ವಾಸ್ತು ಶಿಲ್ಪಗಳನ್ನು ಕಾಣಬಹುದು.

ಗುಲಬರ್ಗಾದ ಸರ್ಕಾರಿ ವಸ್ತು ಸಂಗ್ರಹಾಲಯವು ಮೂಲತ ಧಾರ್ಮಿಕ ಮಂದಿರವಾಗಿದ್ದು, ಇಂದು ಅವುಗಳಲ್ಲಿ ಚಿತ್ರ, ಶಿಲ್ಪ ಇತ್ಯಾದಿ ಪುರಾತತ್ವ ವಸ್ತುಗಳನ್ನು ಇರಿಸಿದೆ. (ಬದಿಯಲ್ಲಿಯೇ ಇದಕ್ಕಾಗಿ ಆಧುನಿಕ ಪ್ರದರ್ಶನಾಲಯವೊಂದನ್ನು ನಿರ್ಮಿಸಿದ್ದು ಜನವರಿ ೧೯೯೭ರಲ್ಲಿ ಉದ್ಘಾಟನೆಯಾಯಿತು) ಇಲ್ಲಿ ಜಿಲ್ಲೆಯ ಹಲವಾರು ಸ್ಥಳಗಳಲ್ಲಿ ದೊರೆತ ಶಿಲ್ಪಗಳನ್ನು ಇರಿಸಿದ್ದು ಅವುಗಳಲ್ಲಿ ಸನ್ನತಿ ಹಾಗೂ ಉಳಿದೆಡೆಯಲ್ಲಿ ದೊರೆತ ಶಾತವಾಹನರ ಶಿಲ್ಪಗಳೇ ಅಧಿಕವಾಗಿವೆ. ಇಲ್ಲಿ ಬುದ್ಧ ಪಾದ ಹಾಗೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಪಟ್ಟಿಕೆಗಳನ್ನು ಕಾಣಬಹುದು. ಇದಲ್ಲದೆ ಜೈನ ಹಾಗೂ ವೈಷ್ಣವ ಧರ್ಮದ ಶಿಲ್ಪಗಳು, ಚಾಳುಕ್ಯರ ಕಾಲದ ತೋರಣಗಂಬಗಳೂ ಇಲ್ಲಿವೆ.

ಗುಲಬರ್ಗಾ ಜಿಲ್ಲೆಯ ಶಾಸನಗಳಲ್ಲಿ ಹಲವಾರು ಶಿಲ್ಪಿಗಳ ಹೆಸರುಗಳು ಅವರಿಗೆ ನೀಡಿದ ಸಂಭಾವನೆ ಇತ್ಯಾದಿ ವಿವರಗಳು ದೊರೆಯುತ್ತವೆ. ಸುರಪುರದ ಕೆಂಬಾವಿಯ ೧೦೫೪ರ ಶಾಸನವಲ್ಲದೆ, ದೇವಾಲಯ ಸಹ ರೂಪಿಸಿರಬಹುದಾದ ಅಜಮೋಜ ಹಾಗೂ ಕಾಳೋಜರು : ಬೈಜಬಾಳದ ೧೦೭೪ ಹಾಗೂ ಹಿರಿಯ ಹೆಬ್ಬಾಳದ ೧೦೮೧ರ ಶಾಸನೋಕ್ತ ಮಾರೋಜ : ಸೇಡಂನ ೧೦೭೨ರ ಶಾಸನದಲ್ಲಿರುವ ಮಲ್ಲೋಜನ ಮಗ ರಾಮೋಜ, ೧೦೮೬ರಲ್ಲಿ ನಾಗಾಯಿಯ ರಾಮೇಶ್ವರ ದೇವಾಲಯ ನಿರ್ಮಿಸಿದ ಕಲ್ಲುಕುಟಿಕ ನಾಗೋಜ, ೧೨ನೇ ಶತಮಾನದಲ್ಲಿ ಏವೂರ ಶಾಸನ ನಿರ್ಮಿಸಿದ ಒಡ್ಡರ ಕೋಟಿಬೋವ ಇತ್ಯಾದಿ ಹಲವಾರು ರೂವಾರಿಗಳನ್ನು ಉದಾಹರಿಸಬಹುದು. ಇವರ ಕಾರ್ಯಕ್ಕೆ ತಕ್ಕಂತೆ ಭೂಮಿ ಹಾಗೂ ಗದ್ಯಾಣಗಳನ್ನು ನೀಡಲಾಗಿದೆ. ಸುರಪುರದ ಅರಸರು ಸಹ ದೇವಾಲಯ ನಿರ್ಮಿಸಿ ಶಿಲ್ಪಕಲೆಗೆ ಪ್ರೋತ್ಸಾಹ ನೀಡಿದರು. ಅವರ ಕಾಲದ ಗಾರೆಯ ಶಿಲ್ಪಗಳನ್ನು ಅರಸರ ಪ್ರಾಂತ್ಯಗಳಲ್ಲಿ ಅಲ್ಲಲ್ಲಿ ನೋಡಬಹುದು.

ಜಿಲ್ಲೆಯ ಆಧುನಿಕ ಶಿಲ್ಪ ಕಲೆಗೆ ಒಂದು ರೂಪ ನೀಡಿದವರು ಧನಂಜಯ ಶಿಲ್ಪಿ (೧೯೩೪) ಅವರು. ಮೂಲತ ಬೆಳಗಾವಿ ಜಿಲ್ಲೆಯ ಅಥಣಿಯವರಾದರೂ ಜೆ. ಜೆ. ಯಲ್ಲಿ ಅಭ್ಯಸಿಸಿ ಕೆಲಕಾಲಾನಂತರ ಗುಲಬರ್ಗಾಕ್ಕೆ ಬಂದು ಅಲ್ಲಿಯೇ

ನೆಲೆಸಿರುವರು. ಇವರು ರಚಿಸಿದ ತಾಯಿ - ಮಗು ಶಿಲ್ಪದ ಚಿತ್ರವನ್ನು ಭಾರತೀಯ ವೈದ್ಯಕೀಯ ಇಲಾಖೆಯು ಹಾಗೂ ವಿಶ್ವ ಆರೋಗ್ಯ ಸಂಘಟನೆಯ ಒಂದು ವಿಭಾಗದವರು ಅಧಿಕೃತ ಚಿನ್ಹೆಯಾಗಿ ಪಡೆದಿದ್ದಾರೆ. ಮುಂಬಯಿ ಹಾಗೂ ಗುಲಬರ್ಗಾದ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಬಹುಮಾನ, ಗೌರವಗಳು ಇವರ ಕಲೆಗೆ ಸಂದಿವೆ.ಚಿತ್ರದುರ್ಗದ ಮದಕರಿ ನಾಯಕನ ಆಳೆತ್ತರವನ್ನು ಮೀರಿದ ಪ್ರತಿಮೆ ಇವರ ಹಲವಾರು ಉತ್ಕೃಷ್ಟ ಕೃತಿಗಳಲ್ಲಿ ಒಂದಾಗಿದೆ. ದೇಶ-ವಿದೇಶದ ಅನೇಕ ಸಂಘ ಸಂಸ್ಥೆಗಳಿಗೆ ಶಿಲ್ಪ ರಚಿಸಿಕೊಟ್ಟಿರುವ ಶಿಲ್ಪಿ ಅವರು ೧೯೮೧-೮೪ರಲ್ಲಿ ರಾಜ್ಯ ಅಕಾಡೆಮಿಯ ಸದಸ್ಯರು ಆಗಿದ್ದು, ಅವರಿಗೆ ೧೯೮೪ರಲ್ಲಿ ಅಕಾಡೆಮಿಯ ರಾಜ್ಯ ಪ್ರಶಸ್ತಿಯೂ ದೊರೆತಿದೆ. ೧೯೯೬ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯೂ ಶ್ರೀಯುತರಿಗೆ ನೀಡಿ ಗೌರವಿಸಲಾಯಿತು. ಜುಲೈ ೧೯೯೬ರಲ್ಲಿ ಗುಲಬರ್ಗಾದ ಉದಯೋನ್ಮುಖ ಯುವ ಬರಹಗಾರರ ಬಳಗದವರು ಅವರಿಗೆ ಸನ್ಮಾನ ಮಾಡಿ ಗೌರವಿಸಿದರು.

ಆದರ್ಶ ಕಲಾ ವಿದ್ಯಾಲಯದಲ್ಲಿ ಶಿಲ್ಪ ಕಲೆಯ ಅಭ್ಯಾಸಕ್ಕೂ ಅನುಕೂಲವಿದ್ದು, ಸ್ವತಃ ವಿ. ಜಿ. ಅಂದಾನಿ ಅವರು ಕೆಲವು ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಶಿಲ್ಪ ರಚನೆಯಲ್ಲಿ ಅಶೋಕ್ ಕಡಗಂಚಿ, ನಾಗನಗೌಡ. ಎ. ಪಾಟೀಲ, ಪ್ರತಾಪ ಸಿಂಗ್, ಭಾರತಿ ಮುಂತಾದವರನ್ನು ಉದಾಹರಿಸಬಹುದು. ವಿವೇಕರಾವ್ ಅವರು ನಿರುಪಯೋಗಿ ವಸ್ತುಗಳನ್ನು ಬಳಸಿ ಉಬ್ಬು ಶಿಲ್ಪದಂತೆ ರೂಪಿಸಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ನಿಂಗಪ್ಪ, ಎಂ.ಪೂಜಾರಿ ಹಾಗೂ ಮರಿಯಪ್ಪ ರಾಮಣ್ಣ ಅವರು ಥರ್ಮೋಕೋಲ್‌ನಲ್ಲಿ ಶಿಲ್ಪ ರಚಿಸುತ್ತಾರೆ.

ಜಿಲ್ಲೆಯಲ್ಲಿ ಅಂದವಾದ ಬಾಗಿಲುವಾಡಗಳನ್ನು ರಚಿಸುವ ಅನೇಕ ಶಿಲ್ಪಿಗಳಿದ್ದು ಸಿದ್ದಣ್ಣ ಶಿರವಾಳ, ಚಂದ್ರೂದೇವರ ರಾಮತೀರ್ಥ, ಶಿವಲಿಂಗಪ್ಪ ಬಡಿಗೇರ್ ಮುಂತಾದವರನ್ನು ಉದಾಹರಿಸಬಹುದು. ಜುಲೈ ೧೯೯೫ರಲ್ಲಿ ಗುಲಬರ್ಗಾದಲ್ಲಿ ರಾಷ್ಟ್ರಮಟ್ಟದ ಲೋಹಶಿಲ್ಪ ಕಾರ್ಯಾಗಾರ ನಡೆಯಿತು.

**ಛಾಯಾಚಿತ್ರ**

ಸುರಪುರದ ಕೊನೆಯ ಅರಸು ನಾಲ್ವಡಿ ವೆಂಕಟಪ್ಪ ನಾಯಕ (೧೮೪೨-೫೮) ಹಾಗೂ ಆಗ ರಾಜಕೀಯ ಪ್ರತಿನಿಧಿಯಾಗಿದ್ದ ಮೆಡೋಸ್ ಟೈಲರ್‌ಗಳು ಉತ್ತಮ ಛಾಯಾಚಿತ್ರಗ್ರಾಹಕರಾಗಿದ್ದರು. ಸುರಪುರದ ಅರಮನೆಯ ಒಂದು ಭಾಗದಲ್ಲಿ ಛಾಯಾಚಿತ್ರ ಸಂಸ್ಕರಣಕ್ಕೆ ಬಳಸುತ್ತಿದ್ದ ಕೊಠಡಿ ಹಾಗೂ ಕೆಲವು ವಿಷಮ ಚಿತ್ರಗಳು (ನೆಗೆಟಿವ್) ಉಳಿದು ಬಂದಿವೆ. ಮುಂದೆ ೧೯೦೪ರಲ್ಲಿ ಜಿ. ಬಿ. ಭವಾನಿಸಿಂಗ್ ಹನುಮಾನ್ ಸಿಂಗ್ ದೇವಕರಣ ಎಂಬುವವರು ಗುಲಬರ್ಗಾದಲ್ಲಿ ಛಾಯಾಚಿತ್ರ ಸ್ಟೂಡಿಯೋ ಸ್ಥಾಪಿಸಿದ್ದರು. ಸುಮಾರು ೧೯೨೫ರ ವೇಳೆಯಲ್ಲಿ ಶಾಂತಲಿಂಗಪ್ಪ ಪಾಟೀಲರು ಛಾಯಾ ಚಿತ್ರಗಳಿಗೆ ವರ್ಣ ತುಂಬುವ ಸ್ಟುಡಿಯೋ ನಡೆಸುತ್ತಿದ್ದರು.

ಗುಬ್ಬಿ ಕಂಪನಿಯಲ್ಲಿ ನಟರೂ ಆಗಿದ್ದ ಛಾಯಚಿತ್ರ ಗ್ರಾಹಕ ಬಸಪ್ಪ ಸಿರವಾಳಕರ ಅವರು ೧೯೨೬ ರಲ್ಲಿ ಗುಲಬರ್ಗಾದಲ್ಲಿ ಸ್ಟುಡಿಯೋ ತೆರೆದಿದ್ದು ನಂತರ ಅವರ ಮಗ ದಿವಾಕರ ಬಿ. ಸಿರವಾಳಕರ ಅವರು ಮುಂದುವರೆಸಿದರು. ನಂತರ ೧೯೪೨ರಲ್ಲಿ ಲಕ್ಷ್ಮಣರಾವ್ ಎಸ್. ಕುಲಕರ್ಣಿ, ೧೯೪೩ರಲ್ಲಿ ಫಕೀರಯ್ಯ ವೀರಭದ್ರಯ್ಯ ಅಂತೂರ ಮಠ, ೧೯೬೮ರಲ್ಲಿ ಮಡಿವಾಳಪ್ಪ ಎಸ್. ಹತ್ತೋರೆ, ೧೯೭೦ ರಲ್ಲಿ ಮಹಮದ್ ಇಸ್ಮಾಯಿಲ್ ಅವರೂ, ೧೯೮೩ ರಲ್ಲಿ ಶ್ರೀಪಾದರಾವ್ ಎಸ್. ಕುಲಕರ್ಣಿಯವರೂ ಗುಲಬರ್ಗಾ ಶಹರದಲ್ಲಿ ಸ್ಟುಡಿಯೋಗಳನ್ನು ತೆರೆದರು. ಪ್ರಸ್ತುತ ಗುಲಬರ್ಗಾ ಶಹರದಲ್ಲಿ ೫೮ ಸ್ಟುಡಿಯೋಗಳಿದ್ದು ಕೆಲವು ಛಾಯಾ ಚಿತ್ರಗ್ರಾಹಕರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಸ್ಪರ್ಧೆಗಳಿಗೆ ತಮ್ಮ ಕೃತಿಗಳನ್ನು ಕಳಿಸಿಕೊಡುವುದುಂಟು. ಅಪರೂಪದ ಸಮುದ್ರ ವಸ್ತುಗಳ ಸಂಗ್ರಹಮಾಡಿರುವ ಬಿ. ಜಿ. ಅಣ್ಣಿಗೇರಿ ಅವರು ಈಚೆಗೆ ಛಾಯಾ ಚಿತ್ರಗಳ ಪ್ರದರ್ಶನ ಮಾಡಿದ್ದರು. ಚಂದ್ರಶೇಖರ ಬ್ಯಾಕೋಡ್ ಛಾಯಾಚಿತ್ರದಲ್ಲಿ ಹಲವಾರು ಪ್ರಯೋಗ ಮಾಡಿರುವ, ಕ್ರಿಯಾಶೀಲ ದೃಷ್ಟಿಯಿಂದ ಈ ಮಾಧ್ಯಮವನ್ನು ಬಳಸಿಕೊಂಡಿರುವ ಕಲಾವಿದರು. ಇವರಿಗೆ ನಾಗಪುರವೂ ಸೇರಿದಂತೆ ಹಲವಾರು ಛಾಯಾಚಿತ್ರ ಸ್ಪರ್ಧೆಗಳಲ್ಲಿ ಬಹುಮಾನ ದೊರೆತಿವೆ. ಗುಲಬರ್ಗಾದಲ್ಲಿ 'ಫೋಟೋಗ್ರಾಫರ್ಸ್ ಎಸೋಸಿಯೋಷನ್' ಒಂದಿದ್ದು ಕ್ರಿಯಾಶೀಲವಾಗಿದೆ.

## ಜನಪದ

ಗುಲಬರ್ಗಾ ಜಿಲ್ಲೆಯ ಪರಿಸರದ ಜನಪದ ಕಲೆಗಳು, ಕಲಾವಿದರು, ಜನಪದ ಗೀತೆ, ಗದ್ಯ ರೂಪದ ಬರವಣಿಗೆ, ನಾಟಕ ಮುಂತಾದ ಸಾಹಿತ್ಯಗಳ ಸಂಗ್ರಹಣೆ, ಅಧ್ಯಯನ, ಪ್ರಕಟಣೆ, ಜನಪದ ಕುರಿತು ವಿಚಾರ ಗೋಷ್ಠಿ, ಕಲಾ ಪ್ರದರ್ಶನ ಇತ್ಯಾದಿಗಳನ್ನು ಈ ಉಪ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ನೋಡಲಾಗಿದೆ. ಸಾಕಷ್ಟು ವರ್ಷ ಉರ್ದು ಆಡಳಿತ ಭಾಷೆಯಾದರೂ ಕನ್ನಡವೇ ಜನಸಾಮಾನ್ಯರ ಭಾಷೆಯಾಗಿದ್ದು ಜನಪದ ಸಾಹಿತ್ಯ, ಜನಪದ ಆಚರಣೆಗಳಂತೆಯೇ ಉಳಿದುಕೊಂಡು ಬಂದಿತು. ಅಲ್ಲದೆ ಉರ್ದು ಅಥವಾ ಮೊಹಮ್ಮದ್ದೀಯ ಸಂಸ್ಕೃತಿಯ ಕೆಲವು ಜನಪದ ಗೀತೆಗಳು ಕನ್ನಡ ಭಾಷೆಯಲ್ಲಿಯೂ ರಚನೆಯಾಗಿದ್ದು ಗಮನಾರ್ಹ ಅಂಶ.

ಗುಲಬರ್ಗಾ ಜಿಲ್ಲೆಯ ಜಾನಪದ ಅಂಶಗಳು ನರೆಯ ಉತ್ತರ ಕರ್ನಾಟಕದ ಭಾಗಕ್ಕಿಂತ ಹೆಚ್ಚು ಭಿನ್ನವಾಗಿಲ್ಲ. ಆದರೂ ಅಧ್ಯಯನದ ದೃಷ್ಟಿಯಿಂದ ಜಿಲ್ಲೆಯಲ್ಲಿ ಪ್ರಚಲಿತವಿರುವ ಪ್ರದರ್ಶಕ ಜನಪದ ಕಲೆಗಳನ್ನು ಈ ರೀತಿ ವಿಭಾಗಿಸಬಹುದು. ನಾಟಕಗಳು, ಗೊಂಬೆಯಾಟ, ಕುಣಿತಗಳು, ಮಾಟದಾಟಗಳು, ವೃತ್ತಿ ಕಲಾವಿದರು, ಜಟ್ಟಿ ಪ್ರದರ್ಶನಗಳು, ಮನರಂಜಕಗಳು ವೃತ್ತಿಗಾಯಕರು, ವಾದ್ಯ ಮೇಳ, ಪ್ರಾಣಿ ಪ್ರದರ್ಶನಗಳು ಇತ್ಯಾದಿ.

ಬಯಲಾಟದಲ್ಲಿ ಸಣ್ಣಾಟ ಹೆಚ್ಚು ಪ್ರಚಲಿತವಾಗಿದ್ದು ಕೃಷ್ಣ ಪಾರಿಜಾತ, ರಾಧಾನಾಟ, ಗೌಳಗಿತ್ತಿ ಇತ್ಯಾದಿ ಪೌರಾಣಿಕ, ನಿಜಗುಣ ಶಿವಯೋಗಿ, ಅಲ್ಲಮ ಪ್ರಭು ಮುಂತಾದ ಐತಿಹಾಸಿಕ, ಸಂಗ್ಯಾಬಾಳ್ಯ, ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ್, ಸೋಮ್ರಾಯ ಭೀಮ್ರಾಯ ಇವೇ ಮುಂತಾದ ಸಾಮಾಜಿಕ ನಾಟಕಗಳು ಜನಪ್ರಿಯವಾಗಿವೆ.

ಗ್ರಾಮ ದೇವತೆಗಳಲ್ಲಿ ದ್ಯಾಮವ್ವ, ದುರ್ಗವ್ವ, ಚೌಡಮ್ಮ, ಕಾಳಮ್ಮ, ಮಾರಮ್ಮ, ಲಕ್ಕವ್ವ, ಹುಲಗಮ್ಮ ಮಕ್ಕಳಿಗೆ ಹಾಲುಕೊಟ್ಟು ಸಾಕುವ ಪಾಲಕಮ್ಮ ಹಾಗೂ ಎಲ್ಲಮ್ಮ ಮುಂತಾದ ದೇವಿಯರ ಗುಡಿಗಳು ಜಿಲ್ಲೆಯಾದ್ಯಂತ ಇದ್ದು ಅವರಿಗೆ ಸಂಬಂಧಿಸಿದ ಆಚರಣೆಯೊಂದಿಗೆ ಜನಪದ ಕಥೆ ಗೀತೆ ಇತ್ಯಾದಿಗಳು ದೊರಕುತ್ತವೆ. ಆಳಂದ ತಾಲೂಕಿನ ಚಿಂಚನಸೂರು ಮಾಪುರ ತಾಯಿ (ದೇವತೆ)ಗೆ ಸಂಬಂಧಿಸಿದಂತೆ ಗೀತೆ ಸ್ಥಳ ಪುರಾಣ ಇತ್ಯಾದಿಯಿದ್ದು, ದೇವಿಯೊಂದಿಗೆ ಅನೇಕ ಸಣ್ಣಸಣ್ಣ ವಿಗ್ರಹಗಳು ಕಟ್ಟೆಗೆಯಲ್ಲಿ ರೂಪಿಸಿದ್ದು ದೇವಾಲಯದಲ್ಲಿವೆ.

ಜಿಲ್ಲೆಯಲ್ಲಿ ಮೊಹಮ್ಮದ್ದೀಯರು ಸಾಕಷ್ಟು ಕಾಲ ಪ್ರಬಲ ರಾಜಕೀಯ ವ್ಯವಸ್ಥೆ ಹೊಂದಿದ್ದರಿಂದ ಇವರ ಆಚರಣೆಗಳು ಹಬ್ಬಗಳು ಸಾಮಾಜಿಕವಾಗಿ ಸೇರ್ಪಡೆಗೊಂಡು ಹಿಂದೂಗಳು ಐಕ್ಯಮತ್ಯದಿಂದ ಅವುಗಳಲ್ಲಿ ಪಾಲುಗೊಳ್ಳುವುದನ್ನು ಇಲ್ಲಿ ಕಾಣಬಹುದು. ಧರ್ಮ ಸಹಿಷ್ಣತೆಗೆ ಸಾಂಸ್ಕೃತಿಕ ಕೊಡಕೊಳ್ಳುವಿಕೆಯ ಕುರುಹಾಗಿ ರಂಜಾನ್, ಬಕ್ರೀದ್, ಶಬ್ಬೆಬರಾತ್ ಮೊಹರಂ ಇತ್ಯಾದಿ ಹಬ್ಬಗಳು ಜಿಲ್ಲೆಯಾದ್ಯಂತ ನೆರವೇರುತ್ತವೆ. ಮೂಲತಃ ಮಕ್ಕಾದಲ್ಲಿ ಯಜೀದ ಹಾಗೂ ಇಮಾಂ ಹುಸೇನರ ಮಧ್ಯೆ ನಡೆದ ಕರ್ಬಲಾ ಕಾಳಗದ ನೆನಪಿಗಾಗಿ ಆಚರಿಸಲಾಗುವ ಮೊಹರಂ ಹಬ್ಬದ ಕಾಲದಲ್ಲಿ ಇಮಾಮ ಸಾಹೇಬರು ಜನತೆಯ ಮಾತನ್ನು ಪರಿಪಾಲಿಸುವ ಸಲುವಾಗಿ ಕಷ್ಟಪಟ್ಟ ಪ್ರಸಂಗ ಇಸ್ಲಾಂ ಧರ್ಮ ರಕ್ಷಣೆಗಾಗಿ ಹಸನ ಹುಸೇನ ಸೋದರರ ಆತ್ಮಾಹುತಿ, ಬಾಲಕ ಕಾಸೀಮನ ಅಮರ ಜೀವತ್ವ ಇತ್ಯಾದಿ ಪ್ರಸಂಗಗಳು ಕಥೆ ಮಾಡಿ ಹೇಳುವ ರೀತಿ ಕನ್ನಡ ಜನಪದ ಕಥನ ಗೀತಕ್ಕೆ ಸಂದ ಕೊಡುಗೆ ಹಾಗೂ ಭಾವೈಕ್ಯತೆಯ ಸಾಂಸ್ಕೃತಿಕ ಕೊಡು ಕೊಳಗೆಯ ಸಂಕೇತ. ಒಟ್ಟು ಪದಗಳು ಬಿಡಿಯಾಗಿಯು ಇದ್ದು ಅವುಗಳಲ್ಲಿ ಯುದ್ಧ ಮೂಲವಾದ ಕಾಳಗ ಪದಗಳು, ಐತಿಹ್ಯ ಸಂಪ್ರದಾಯ ಸಾರುವ ಧಾರ್ಮಿಕ ಪದಗಳು, ನೀತಿಬೋಧೆಯಂತಹ ಸಾಮಾಜಿಕ ಪದಗಳು ಇತ್ಯಾದಿಗಳನ್ನು ಗುರುತಿಸಲಾಗಿದೆ. ಸೋಮ್ರಾಯ ಭೀಮ್ರಾಯದಂತಹ ಸಾಮಾಜಿಕ ಕಥನ ಗೀತಗಳನ್ನು ಮೊಹರಂ ಹಾಡಿನೊಂದಿಗೆ ಗುರುತಿಸಬಹುದು.

**ಸಂಗ್ರಹ : ಅಧ್ಯಯನ :** ಜನಪದ ಕಲೆ ಹಾಗೂ ಸಾಹಿತ್ಯಪ್ರಕಾರಗಳು ಜಿಲ್ಲೆಯಲ್ಲಿ ವಿಪುಲವಾಗಿದ್ದರೂ ಅವುಗಳ ಸಂಗ್ರಹ ಪ್ರಕಟಣೆ ಅಧ್ಯಯನ ಕಾರ್ಯಗಳು ಈಚಿನವರೆಗೂ ನಡೆದಿರಲಿಲ್ಲ. ಕಪಟರಾಳ ಕೃಷ್ಣರಾವ್, ಡಿ. ಕೆ. ಭೀಮಸೇನರಾವ್, ಮಾನ್ವಿ ನರಸಿಂಗರಾವ್ ಮುಂತಾದವರು ಈ ಕುರಿತು ಗಮನ ಹರಿಸಿದ್ದರು. ಆದರೆ ವ್ಯವಸ್ಥಿತವಾಗಿ ಸಂಗ್ರಹಣೆ, ಅಧ್ಯಯನ ಆಗಿದ್ದು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಗುಲಬರ್ಗಾದಲ್ಲಿ ೧೯೭೦ರಲ್ಲಿ ಪ್ರಾರಂಭಗೊಂಡಾಗ, ಇಲ್ಲಿ ಜನಪದವೂ ಒಂದು ಪಠ್ಯ ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದಿತ್ತು. ನಂತರ ೧೯೮೧-೮೨ರಲ್ಲಿ ಜಾನಪದ ಕುರಿತೇ ಪ್ರತ್ಯೇಕ ಸ್ನಾತಕೋತ್ತರ ಪದವಿ ಪ್ರಾರಂಭವಾಯಿತು.

ಬಿ. ಬಿ. ಹೆಂಡಿ ಅವರು ಇಲ್ಲಿಯ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ೧೯೭೨-೮೬ ಜಿಲ್ಲೆಯ ಜನಪದ ಸಂಗ್ರಹಣೆ ಅಧ್ಯಯನ ಮಾಡಿದ್ದಲ್ಲದೆ ಹಲವಾರು ಸಂಶೋಧಕರನ್ನು ರೂಪಿಸಿದರು. ಕಲುಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ ಹಾಗೂ ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ ಮತ್ತು ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟಣೆ ಎಂಬ ಎರಡು ಯೋಜನೆಗಳನ್ನು ಸಿದ್ದಪಡಿಸಿ ಅದರಂತೆ ಆ ಪ್ರದೇಶದ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ವಿವರಗಳನ್ನು ಅಧಿಕ ಪ್ರಮಾಣದಲ್ಲಿ ಸಂಗ್ರಹಿಸಲಾಯಿತು. 'ತ್ರಿಪದಿತ್ರಯ'ವನ್ನು ಸ್ವಂತವಾಗಿಯೂ 'ನೂರೆಂಟು ಜನಪದ ಕಥೆಗಳು' 'ಯಮಾತಿ' ಬಯಲಾಟವನ್ನು ಇತರರೊಂದಿಗೂ ಸಂಗ್ರಹಿಸಿದ್ದಾರೆ. ಎಂ. ಎಸ್. ಲಠ್ಠೆ ಅವರು ೧೯೭೭ರಲ್ಲಿ ಗುಲಬರ್ಗಾಕ್ಕೆ ಬಂದನಂತರ ಜನಪದ ಕ್ಷೇತ್ರಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದು ಉತ್ತರ ಕರ್ನಾಟಕದ ಗಾದೆಗಳು ಪುಸ್ತಕವನ್ನು ಹೆಂಡಿ ಅವರೊಂದಿಗೂ ಒಗಟು ಹಾಗೂ ಒಡಪುಗಳ ಸಂಗ್ರಹವನ್ನು ಸ್ವಂತವಾಗಿಯೂ ಸಂಪಾದಿಸಿ ಪ್ರಕಟಿಸಿದರು. ಉತ್ತರ ಕರ್ನಾಟಕದ ಹಂತಿಯ ಹಾಡುಗಳು, ಚುಕ್ಕೋಳ ಪದಗಳು, ಮಾಹಿತಿಗಳ ಸಂಗ್ರಹವಾದ ಜನಪದ ಕವಿ ಚರಿತೆ, ಬಯಲಾಟದ ಸಾರಥಿ, ಜನಪದ ನುಡಿಗಟ್ಟುಗಳು ಇತ್ಯಾದಿಯಾಗಿ ಜನಪದದ ವಿವಿಧ ಮುಖಗಳನ್ನು ಅಧ್ಯಯನ ಮಾಡಿ ಮುವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಹೆಂಡಿಯವರ ಯೋಜನೆಯಲ್ಲಿ ಸಹಾಯಕ ಸಂಶೋಧಕರಾಗಿದ್ದ ಬಸವರಾಜ ಪೋಲಿಸ್ ಪಾಟೀಲರು ಹೈದರಾಬಾದ್ ಕರ್ನಾಟಕದ ಜನಪದ ಸಾಹಿತ್ಯ ಕುರಿತು ಪ್ರೌಢ ಪ್ರಬಂಧವನ್ನು ಹಾಗೂ ಜನಪದ ಭಾರತಿ, ಜಾನಪದಸಿರಿ ಎಂಬೆರಡು ಬಿಡಿ ಲೇಖನಗಳ ಸಂಗ್ರಹ ಹೊರತಂದಿದ್ದಾರೆ. ದಂಡೆಯವರು ಕಲುಬರ್ಗಿ ಜಿಲ್ಲೆಯಲ್ಲಿ ಜನಪದ ಕಥೆಗಳ ಆಶಯ ಮತ್ತು ಮಾದರಿ, ಕುರಿತು ಪ್ರೌಢ ಅಧ್ಯಯನ ಮಾಡಿದ್ದಲ್ಲದೆ ಜನಪದ ಕಥೆ ವಸ್ತು ಮತ್ತು ತಂತ್ರ, ಜನಪದ ಕಾವ್ಯ ಮೀಮಾಂಸೆ, ಆಯ್ದ ಗಾದೆಗಳು ಹಾಗೂ ಒಗಟುಗಳು, ಕನ್ನಡ ಜನಪದ ಪ್ರಜ್ಞೆ ಮುಂತಾದ ಗ್ರಂಥ ಹಾಗೂ ಲೇಖನ ಸಂಗ್ರಹಗಳನ್ನು ಹೊರತಂದಿದ್ದಾರೆ. ಜನಪದ ಕಾವ್ಯ ಪ್ರಥಮ ವಿಮರ್ಶೆ, ಬೀದಿ ಬಯಲಾಟಗಳು, ಅಷ್ಟಾವರಣ ತಿಲಕಗಳಲ್ಲದೆ, 'ಕನ್ನಡ ಗಾದೆಗಳ ಹಾಗೂ ಒಗಟುಗಳ ಸೂಚಿ'ಯನ್ನು ಸ್ವಂತವಾಗಿಯೂ ಇತರರೊಂದಿಗೆ ಸೇರಿ 'ಜನಪದ ನುಡಿಗಟ್ಟನ್ನು' ಸಂಪಾದಿಸಿದ್ದಾರೆ.

ಜಿಲ್ಲೆಯ ಜನಪದ ಕ್ಷೇತ್ರದಲ್ಲಿ ವ್ಯಾಪಕವಾಗಿ ಕಾರ್ಯ ನಿರ್ವಹಿಸಿದ ಚೆನ್ನಣ್ಣ ವಾಲಿಕಾರ ಅವರು ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳು ಪ್ರೌಢ ಪ್ರಬಂಧವಲ್ಲದೆ ಗುಲಬರ್ಗಾ ಜಿಲ್ಲೆಯ ಮೊಹರಂ ಪದಗಳು, ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು, ಒಂದು ಗ್ರಾಮದ ಜನಪದೀಯ ಅಧ್ಯಯನ ಇತ್ಯಾದಿ ಜಿಲ್ಲೆಗೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಶಶಿಕಲಾ ಮೋಳ್ದಿ ಅವರ ಹರದೆಯರ ಹಾಡುಗಳು, ಜಾಜದ ಹಾಡುಗಳು ಈ ಕ್ಷೇತ್ರಕ್ಕೆ ಗಣನೀಯ ಕೊಡುಗೆ, ಪಿ. ಕೆ. ಖಂಡೋಬಾ ಅವರು ಲಂಬಾಣಿ ಜನಾಂಗ ಕುರಿತು ವಿಶೇಷವಾಗಿ ಅಧ್ಯಯನ ಮಾಡಿದ್ದಾರೆ. 'ಕರ್ನಾಟಕದ ಲಂಬಾಣಿಗಳು' ಪ್ರೌಢ ಪ್ರಬಂಧ ಸೇರಿದಂತೆ ಲಂಬಾಣಿ ಸಂಸ್ಕೃತಿ ಲಂಬಾಣಿ ಒಗಟುಗಳು, ತಾಂಡ ಸಂಸ್ಕೃತಿ, ಸುಡುಗಾಡು ಸಿದ್ದರು, ಜನಪದ ಮುನ್ನೋಟ ಇತ್ಯಾದಿ ಅವರ ಕೃತಿಗಳು ಜನಪದ ಕ್ಷೇತ್ರಕ್ಕೆ ನೀಡಿದ ಕಾಣಿಕೆಗಳಾಗಿವೆ.

ಸಂಗಮೇಶ ಸವದತ್ತಿಮಠ ಅವರ ಜನಪದ ಭಾಷಾ ಸಮೀಕ್ಷೆ, ವಿ. ಜಿ. ಪೂಜಾರ ಅವರ ಪ್ರೌಢ ಪ್ರಬಂಧ ವೀರಶೈವ ಕಾವ್ಯದಲ್ಲಿ ಪವಾಡ ಕಥೆಗಳು ಹಾಗೂ ಗುಲಬರ್ಗಾ ತಾಲೂಕಿನ ಸ್ಥಳನಾಮಗಳು ಒಂದು ಭಾಷಿಕ ಸಾಂಸ್ಕೃತಿಕ ಅಧ್ಯಯನ, ಮ. ಗು. ಬಿರಾದಾರ ಅವರ ಜಾನಪದ ಸಮಾಲೋಕ, ಸಂಗಮೇಶ ಬಿರಾದಾರ ಅವರ ಚ್ಯಾಪೆಹಾಕ್‌ತೀವಿ ಡಪ್ಪಿನ ಮ್ಯಾಲ ಡಿ.ಬಿ. ನಾಯಕರ ಉತ್ತರ ಕರ್ನಾಟಕದ ಲಂಬಾಣಿ ಜನಪದ ಸಾಹಿತ್ಯ, ಕರಿಸಿದ್ದಪ್ಪ ಅವರ ಮ್ಯಾಸ ನಾಯಕರು, ಬಿ. ಎಸ್. ಕೋಟ್ಯಾಳ ಅವರ ಬೀ. ಬೀ. ಇಂಗಳಗಿ ಸಾಂಪ್ರದಾಯದ ಗೀಗೀ ಪದಗಳು, ಪೋತೆ ಹನುಮಂತ ತಿಪ್ಪಣ್ಣ ಅವರ ಹೈದರಾಬಾದ್ ಕರ್ನಾಟಕ ಜನಪದ ಪ್ರದರ್ಶನ ಕಥೆಗಳು ಮತ್ತು ಗುಲಬರ್ಗಾ ಜಿಲ್ಲೆಯ ಕಥೆಗಳು, ಭಾಸ್ಕರ ತಿಪ್ಪಣ್ಣ ಅವರ ಸುಡಗಾಡ ಸಿದ್ದರು ಒಂದು ಸಾಂಸ್ಕೃತಿಕ ಅಧ್ಯಯನ, ಎಂ. ಆರ್. ನಾಯಕ ಅವರ ಸುರಪುರದ ಬೇಡರ ನಂಬಿಕೆಗಳು ಮತ್ತು ಸಂಪ್ರದಾಯಗಳು, ನಾಗಗೌಡ ಪಾಟೀಲ್ ಅವರ ಗುಲಬರ್ಗಾ ಜಿಲ್ಲೆಯ ಜನಪದ ವೃತ್ತಿ ಗಾಯಕರು, ಸುಭಾಶ್ ದಾರ ಅವರ ಗುಲಬರ್ಗಾ ಜಿಲ್ಲೆಯ ಬಯಲಾಟಗಳು, ಗೋವಿಂದ ಅವರ ಹೈದರಾಬಾದ್ ಕರ್ನಾಟಕದ ಜನಪದ ಪರಂಪರೆ, ಹರಿಶ್ಚಂದ್ರ ಡಿ. ನಾವಳಗಿ ಅವರ ಮಹಮ್ಮದ್ ಸಾಬ್ ಅವರ ಲಾವಣಿಗಳು ಇತ್ಯಾದಿ ಅನೇಕ ಗ್ರಂಥಗಳನ್ನು ಉಲ್ಲೇಖಿಸಬಹುದು.

ಹಲಕೆಲವು ಪ್ರಕಾರದ ಜನಪದ ಪ್ರದರ್ಶನ ಕಲೆಗಳು ಜಿಲ್ಲೆಯಲ್ಲಿ ಕೆಲವಡೆ ಮಾತ್ರ ವಿಶೇಷವಾಗಿ ನೋಡಸಿಗುತ್ತವೆ. ಉದಾಹರಣೆಗೆ ಪುರವಂತರ ಮೇಳದವರು ತಿಂಥಿಣಿಯ ಮೌನೇಶ್ವರದ ಜಾತ್ರೆಯಲ್ಲಿ ಒಂದು ಸಮ್ಮೇಳನದಂತೆ ನೆರೆಯುತ್ತಾರೆ. ಮಾಟ, ಕೈಚಳಕ ಮುಂತಾದ ಆಟ ಆಡುವ ಸುಡಗಾಡು ಸಿದ್ದರು ಶಹಾಪುರ ತಾಲೂಕಿನ ಮೂಡಬಾಳದಲ್ಲೂ, ಹಾವಾಡಿಗರು ಚಿಂಚೋಳಿ, ಸೇಡಂ, ಯಾದಗಿರಿಯ ಆಂಧ್ರ ಪ್ರದೇಶದ ಗಡಿಯಲ್ಲಿಯೂ ದೊಂಬರಾಟದ ಕಲಾವಿದರು ಆಳಂದ ತಾಲೂಕಿನ ದರ್ಗಾ ಶಿರೂರಿನಲ್ಲಿಯೂ ಜಟ್ಟಿಗಳು ಹಾಗೂ ಮಲ್ಲಕಂಬ ಸುರಪುರದಲ್ಲಿಯೂ, ಯಾದಗಿರಿಯ ಮೈಲಾಪುರದ ಮಲ್ಲಯ್ಯನ ಭಕ್ತರಾದ (ವಗ್ಗಯ್ಯಗಳು), ಚಿಂಚನಸೂರು ಮಾಪುರಿಯ ಎಲ್ಲಮ್ಮನ ಭಕ್ತರಾದ ಜೋಗತಿಯರು, ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದ ಹಲಿಗೆ ಬಾರಿಸುವವರು, ದುಮ್ಮಾಲಿ ಮೇಳದವರು,ಇದೇ ತಾಲೂಕಿನ ಕುದುಮುಡ ಹಾಗೂ ಕೆರೂರ ಗ್ರಾಮಗಳ ಕರಡಿ ಸಾಕುವವರು, ಯಾದಗೀರ ತಾಲೂಕಿನ ಕೋತಿ ಆಡಿಸುವವರು, ಆಳಂದದ ತಡಕಲ್ ಗ್ರಾಮದ ಕುದರೆ ಆಡಿಸುವವು, ಸುರಪುರ ತಾಲೂಕಿನ ಕೋಳಿಕಾಳಗ ಹಾಗೂ ಕೋಣನ ಕುಸ್ತಿ ಇಂತಹ ಹಲವಾರು ಜನಪದ ಪ್ರದರ್ಶನ ಕಲೆಗಳನ್ನು ಜಿಲ್ಲೆಯಲ್ಲಿ ಕಾಣಬಹುದು. ದಿ|| ಮರತೂರ ಲಕ್ಷ್ಮಿಬಾಯಿ ನೂರಾರು ಜನಪದ ಗೀತೆಗಳನ್ನು ಹಾಡುತ್ತಿದ್ದರಲ್ಲದೆ ರಮಾಬಾಯಿ ಮಹಿಳಾ ಮಂಡಲ ಸ್ಥಾಪಿಸಿ ಹಾಡುಗಳ ಮೂಲಕ ಜನಜಾಗ್ರತಿ ಮಾಡಲು ಪ್ರಯತ್ನಿಸಿದರು. ಶರಣ ಬಸವೇಶ್ವರ ಜಾತ್ರೆಯಲ್ಲಿ ೩೦ ಕ್ಕೂ ಹೆಚ್ಚು ಗೀಗೀ ಮೇಳಗಳು ಪಾಲುಗೊಂಡು ಮೂರು ದಿನಗಳ ಕಾಲ ಹಾಡುವುದುಂಟು. ಸೈದಪುರದ ಸಿದ್ದಪ್ಪ ಮೇಟಿ ಅವರು ಹಾಲುಮತ ಮಹಾಕಾವ್ಯವನ್ನು ಇಡಿಯಾಗಿ ಹಾಡುತ್ತಾರಲ್ಲದೆ ಒಂದು ನೂರು ತಾಸು ಹಾಡುವಷ್ಟು ಜನಪದಗೀತೆಗಳು ಅವರ ನೆನಪಿನಲ್ಲಿದೆ.

**ಜನಪದ ಕವಿಗಳು : ಕಲಾವಿದರು** : ಜಾನಪದ ಕಥೆ, ಗೀತೆ ಇತ್ಯಾದಿ ಸಾಹಿತ್ಯ ಪ್ರಕಾರಗಳು ಬರಹ ರೂಪದಲ್ಲಿ ಇರದೆ ತೋಂಡಿಯಾಗಿಯೇ ಈಚಿನವರೆಗೂ ಉಳಿದಿತ್ತಾದರೂ ಗೀತ ರಚನೆ ಮಾಡುವ ಕೆಲವು ಕವಿಗಳ ಹೆಸರುಗಳು ದೊರೆಯುತ್ತವೆ. ಧಾರವಾಡದ ನಲವಡಿ ಶ್ರೀಕಂಠಶಾಸ್ತ್ರಿಗಳ ಹೈದರಾಬಾದ್ ರಜಾಕರ ಲಾವಣಿ, ಕಮಲಾಪುರದ ವಿರೂಪಾಕ್ಷ ಸ್ವಾಮಿಗಳ ಭುಲಾಯಿಪದ, ಮುಚಳಂಬಿ ರಾಮಲಿಂಗಪ್ಪ ಅಂಬಲಗೆಯವರ ರಜಾಕರ ಭುಲಾಯಿ ಪದಗಳು ಗಮನಾರ್ಹ ದಾಖಲೆಗಳಾಗಿವೆ. ಮುಸ್ಲಿಂ ಕವಿಗಳು ಕನ್ನಡದಲ್ಲಿಯೂ ರಚನೆ ಮಾಡಿದ್ದು ಅವರಲ್ಲಿ ಗುಲಬರ್ಗಾ ತಾಲೂಕು ಮಹಾಗಾಂವದ ಮೀರಸಾಹೇಬ, ಬೇನೂರಿನ ಖಾಕಿಗುರು, ಸಾವಳಗಿಯ ಮಹಮ್ಮದಸಾಬ, ದೇಗಾಂವಿಯ ಹಜರತ್ ಸಾಬ್, ನರೋಣದ ಹೈದರಾಲಿ, ಕಾಳಗಿಯ ಮಶಾಕಸಾಬ, ಭೈರಾಮಡಗಿಯ ಹೈದರಾಸಾಬ ಮುಂತಾದವರನ್ನು ಜಿಲ್ಲೆಯಲ್ಲಿ ಗುರುತಿಸಲಾಗಿದೆ. ಜಿಲ್ಲೆಯಾದ್ಯಂತ ಬೇರೆ ಬೇರೆ ಪ್ರಕಾರಗಳಿಗೆ ಸೇರಿದ ಜಾನಪದ ಕಲಾವಿದರಿದ್ದು ಅವರ ಸಂಕ್ಷಿಪ್ತವಾದ ಪಟ್ಟಿಯೊಂದನ್ನು ಇಲ್ಲಿ ನೀಡಿದೆ.

ಅಫಜಲಪುರ ತಾಲೂಕು ಗೀಗೀಪದಗಳನ್ನು ಅಂದಾನಪ್ಪ ಬಸಪ್ಪ ಹರಿಜನ, ಅಂಬಣ್ಣ ಹರಿಜನ, ಶ್ರೀಮಂತ ಹರಿಜನ, ಗೋವಿಂದಪ್ಪ ಅಲದಿಹಾಳ ಪಾಪಣ್ಣ ಮಕ್ತಂ ಆಲಿ, ಹಣಮಂತಪ್ಪ ಅಲದಿಹಾಳ, ಶರಣಯ್ಯ ಸ್ವಾಮಿ ಸಂಗಡಿಗರು, ಕಾಶಿನಾಥ ಚವಾಣ ಸಂಗಡಿಗರು, ಗಿರಿಜಾಬಾಯಿ ಅಲದಿಹಾಳ, ತುಕಾರಾಮ ತಳವಾರ, ಹೈದರ್ ಸಾಬ ಠಾಣಾ ಅವರುಗಳು, ಮೋನಪ್ಪ ಚಿಂಚೋಳಿ ಸಂಗಡಿಗರ ಪುರವಂತ ಮೇಳ, ಮುರುಗಪ್ಪಾ ಮಾಲಿಗೆ ಅವರ ಸನಾದಿಮೇಳ, ಶರಣಪ್ಪ ದೊಡ್ಡಮನಿ ಮತ್ತು ಸಂಗಡಿಗರ ಬಯಲಾಟ, ತುಕರಾಂ, ನೀಲಪ್ಪ ಭಜಂತ್ರಿ ಮತ್ತು ಸಂಗಡಿಗರ ಚಟ್ಟಹಲಗೆ, ಶಂಕರ ಕಟಬರ್ ಸಂಗಡಿಗರ ತೊಗಲ ಗೊಂಬೆಯಾಟ, ಶಿವಣ್ಣ ಸಿದ್ದಪ್ಪ ಈಶ್ವರಗೊಂಡ ಸಂಗಡಿಗರ ಕೋಲಾಟ, ಶಂಕರಬಾಯಿ ಪೂಜಾರ್ ಸಂಗಡಿಗರ ಹಾಗೂ ಅಂಬವ್ವ ಭೀಮಣ್ಣ ಪಟ್ಟಣ ಅವರ ಸಾಂಪ್ರದಾಯ ಪದಗಳು, ಲಕ್ಷ್ಮಣ ಸಂತಪ್ಪ ಕಲಕಂಡೆ ಇತರರಿಂದ ಹಲಗೆ ಕುಣಿತ ಶ್ರೀಮಂತ ಮರೆಪ್ಪ ಭಜಂತ್ರಿ ಅವರ ಶಹನಾಯಿ, ದೇವರಾಯ ಆನಂದರಾಯರ ಗೊಂದಳಿ ಮೇಳ, ಸೋಪನ್ ಸಾಬ ಮಹಬೂಬ ಸಾಬ್ ಸದಾಫ್ ಸಂಗಡಿಗರ ಗೆಜ್ಜೆ ಮೇಳ, ಹುಸನಯ್ಯ ಗುತ್ತೇದಾರ ಅವರ ಮೊಹರಂ ಹಾಡು, ಸಾತಲಿಂಗಪ್ಪ ಪೂಜಾರಿ ಬಸಪ್ಪ ಲಕ್ಕಪ್ಪ ಪೂಜಾರಿ ಸಂಗಡಿಗರ ಡೊಳ್ಳಿನ ಹಾಡು ಶಾಂತಾಬಾಯಿ ಹೊನ್ನಪ್ಪ ಮ್ಯಾಕೇರಿ ಸಂಗಡಿಗರ ಸೋಬಾನೆ ದೊಡ್ಡಪ್ಪ ದೇವರ್ ಸಂಗಡಿಗರ ಹಂತಿ ಹಾಡು, ಶಂಕರ ಕಾಳಪ್ಪ ಬ್ಯಾಡಗ್ಯಾಳರ ಚವಡಿಕಿ ಹಾಡು, ಬಸಪ್ಪ ಕಲ್ಬಂಡೆ ಸಂಗಡಿಗರ ಕರಡಿ ಕುಣಿತ ಮಹದೇವ ಗೋವಿಂದ ವಾಗ್ಮೋರೆ ಅವರ ಬುಡುಬುಡಿಕೆ ಶಿವಲಿಂಗಯ್ಯ ನಾಯಕರ ದೊಡ್ಡಾಟ ರಾವುತಪ್ಪ ಲಕ್ಕಪ್ಪಸಿಂಗೆ ಅವರ ವಗ್ಗೇರಿ ಕುಣಿತ ಸಾತಲಿಂಗಯ್ಯ ಹಿರೇಮಠ ಸಂಗಡಿಗರ ಸಣ್ಣಾಟ, ಸೋಫನ್ ಶಹಾ ಮುಕನ್‌ದಾರ ಸಂಗಡಿಗರ

ಪಾರಿಜಾತ ಆಳಂದ ತಾಲೂಕು ಧೊಂಡೀಬಾ ಎಸ್ ಧೋತ್ರೆ ಅವರ ಧುಮ್ಮಾಲಿ ಮೇಳ, ಗುರಣ್ಣ ಹಣಮಂತ ಓರಾ ಅವರ ಪಾರಿಜಾತ, ಶಂಕರಪ್ಪ ಬೋದನ ಸಂಗಡಿಗರ ಡಪ್ಪಿನಾಟ ಮಾಲಪ್ಪ ಚಂದಪ್ಪ ಸಿಂಗ ಅವರ ಕಹಳೆ.

ಚಿಂಚೋಳಿ ತಾಲೂಕು ತುಕಾರಾಂ ತಳವಾರ ಸಂಗಡಿಗರ ಗೀಗೀ ಮೇಳ, ಸುಭಾಷ ಚಂದ್ರರ ಪುರವಂತಿಕೆ, ಮಡುಸಬರ ಕೋಲಾಟದ ತಂಡ, ಭೀಮಶ್ಯ ಕೂಳ್ಳೂರರ ಮೊಹರಂ ಕುಣಿತ, ದೊಡ್ಡಾಟದ ಮಾಸ್ತರುಗಳಾದ ರಾಮಪ್ಪ ಶರಣಪ್ಪ ಚನ್ನಬಸಪ್ಪ ಚಂದ್ರಶೆಟ್ಟಿ ಬೀಮರವ ಅವರೂ ಸಣ್ಣಾಟದ ಮಾಸ್ತರಾದ ಸಯಪ್ಪ ಅಗಸರ ಜನಪದ ಹಾಡುಗಾರರಾದ ಈರಣ್ಣ ಅರಳಿ ವೀರಯ್ಯಸ್ವಾಮಿ ಅಯಪ್ಪ ಮಾಸ್ತರ, ನರಸಪ್ಪ ಚಿನ್ನರಟ್ಟಿ,ಮಹತೇಶ ಕಟ್ಟಿಮನಿ, ದೇವೇಂದ್ರ ಕಟ್ಟಿಮನಿ ಬಸವರಾಜ ಲೋಡ್ಡನೂರ, ಚಿತ್ತಾಪುರ ತಾಲೂಕು ಗಿರಿಜಾಬಾಯಿ ಅಲದಿಹಾಳರ ಗೀಗೀಪದ, ಸುಧಾ ಕುಲಕರ್ಣಿ, ರಾಮಾಬಾಯಿ ರಮಾಚಾರ ಜಾಲಿಹಾಳರ ಜನಪದ ಹಾಡುಗಳು, ಸಿದ್ದಲಿಂಗೇಶ ತರುಣ ಸಂಘದ ಬಯಲಾಟ, ಶರಣಪ್ಪ ಯುವಕ ಮಂಡಳಿಯ ಜನಪದ ನೃತ್ಯ.

ಗುಲಬರ್ಗಾ ತಾಲೂಕು ಡಿ. ವಿ. ಪಾಟೀಲ ಮತ್ತು ಸಂಘಟಿಕರ ಡಪ್ಪಿನಾಟ ದೇವೇಂದ್ರಪ್ಪ ಕಟಗರಪುರ ಪುರವಂತಿಕೆ, ದೇವಾನಂದ ಠಾಕೂರ್ ಸಂಗಡಿಗರ ಕೋಲಾಟ, ಹಿರಿಗೆಪ್ಪ ಬರಗಲಿ ಸಂಗಡಿಗರು ಶರಣಪ್ಪ ಶಾಂತಪ್ಪ ಪೂಜಾರಿ ಸಂಗಡಿಗರು, ಮಾಳಪ್ಪ ಮುತ್ಯಾ ಒಡೆಯರ್ ಅವರುಗಳ ಡೊಳ್ಳಿನ ಕುಣಿತ, ಗುಂಡಪ್ಪ ಫುಲಾರಿ, ಮೀರಸಾಬ, ಶಕುಂತಲ ದೇವುಲನಾಯಕ, ಅವರುಗಳ ಗೀಗೀಪದ, ಶಾಂತಪ್ಪ ಸಿಂಗೆ ಅವರ ಕಹಳೆ, ಪ್ರಭು ಮಾಂಗೆ ಅವರ ಸನಾದಿ ಮೇಳ, ಕಾಶಪ್ಪ ಹಾಗೂ ಸಂಗಡಿಗರ ಡಪ್ಪಿನಾಟ, ಕುಸನೂರಿನ ಮೊಳೆಪ್ಪ ಹುಲೆಪ್ಪಗೋಳ ಅವರ ಸಣ್ಣಾಟದ ಮಾಸ್ತರಿಕೆ.

ಜೇವರ್ಗಿ ತಾಲೂಕು ಬಸವರಾಜ ಧಮೇತಿ ಸಂಗಡಿಗರ ಕೋಲಾಟ, ಶಿವಪ್ಪಾ ಬಸಪ್ಪಾಕಾರಿ ಸಂಗಡಿಗರ ಭಜನೆ, ಶರಣಪ್ಪ ಪುಸ್ಪದತ್ತರ ಕೋಲಾಟ ತಂಡ.

ಸೇಡಂ ತಾಲೂಕು ಪ್ರೇಮಸಿಂಗ ರಾಥೋಡ್ ಸಂಗಡಿಗರ ಹಲಗೆ ನೃತ್ಯ ಹಾಗೂ ಲಮಾಣಿ ಕುಣಿತ, ಪ್ರಭುರಾಜ ಅರುಣಕಲ್ ಅವರ ಜನಪದ ಗೀತೆ, ಬಾನುಮಿಯ್ಯ ಅವರ ಮೊಹರಂ ಪದಗಳು, ನಬಿಸಾಬ ಅವರ ಅಲಾವಿ ಪದಗಳು, ವೀರಣ್ಣ ಅವರ ಡಪ್ಪಿನಾಟ, ದೊಡ್ಡಾಟದ ಮಾಸ್ತರುಗಳಾದ ಸಾಬಣ್ಣ ಹಜಾಮೂರ ಹಾಗೂ ಮಾಣಿಕಪ್ಪ ಹೂಗಾರ.

ಶಹಪುರ ತಾಲೂಕು ಚಂದಪ್ಪ ತರಕೋರಿ ಸಂಗಡಿಗರ ದೊಡ್ಡ ಹಲಗೆ ವಾದ್ಯ, ಶಿವಣ್ಣ ಸಂಗಡಿಗರ ಮೊಹರಂ ಹಾಡು,ಬಾಲ ಶಾಸ್ತ್ರಿ ರಾಜ ಜೋಷಿ ಅವರಿಂದ ಜನಪದ ಗೀತೆಗಳು. ಸುರಪುರ ತಾಲೂಕು ರಾಮಚಂದ್ರ ಸಂಗಡಿಗರ ಮೊಹರಂ ಹಾಡು ಅಜೀಜ ಟೇಲರ್ ಅವರಿಂದ ಜಾನಪದ ಗೀತೆ. ಯಾದಗಿರಿ ತಾಲೂಕು ಈರಪ್ಪ ಹಣಮಂತಪ್ಪ ಸಂಗಡಿಗರಿಂದ ದೊಡ್ಡಾಟ ಎನ್. ಜಿ. ವೇಂಕಟೇಶ್ ಗೀಗೀ ಪದ, ಖಾಜಾಹುಸೇನರ ಕೋಲಾಟ, ಬಸವಲಿಂಗಪ್ಪ ಅವರ ಡೊಳ್ಳು ಕುಣಿತ, ಪಾಂಡುರಂಗವಾರದ ಅವರ ಸುಗ್ಗಿ ಕುಣಿತ, ಕರಬಸಯ್ಯ ಸ್ವಾಮಿ ಅವರ ವೀರಗಾಸೆ, ಆರ್. ಕಡಬೂರ ಅವರ ಲಾವಣಿ ಪದ, ಬಸಯ್ಯ ಸ್ವಾಮಿ, ಜಿ. ಕೃಷ್ಣಾ ಸಂಗಡಿಗರು ಹಾಗೂ ಹಿಮಾಮ್ ಹುಸೇನರ ಜನಪದ ನೃತ್ಯ ಇತ್ಯಾದಿ ಉದಾಹರಿಸಬಹುದು.

**ಆಧಾರ** : ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗುಲಬರ್ಗಾ.

**ಜನಪದ ಸಮ್ಮೇಳನ** : ಬಿ. ಬಿ. ಹೆಂಡಿ ಅವರು ೧೯೭೦ರಲ್ಲಿ ಬೆಟಗೇರಿ ಕೃಷ್ಣ ಶರ್ಮ ಅವರಿಂದ ಜನಪದಕ್ಕೆ ಸಂಬಂಧಿಸಿದಂತೆ ಮೂರು ದಿನಗಳ ಕಾಲ ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಿದ್ದರು. ೧೯೭೫ರಲ್ಲಿ ಗುಲಬರ್ಗಾದಲ್ಲಿ ರಾಜ್ಯ ಮಟ್ಟದ ಲಾವಣಿ ಹಾಗೂ ಗೀಗೀ ಸಮ್ಮೇಳನವೊಂದನ್ನು ಸಂಘಟಿಸಲಾಗಿತ್ತು.

ಕರ್ನಾಟಕ ವಿಶ್ವವಿದ್ಯಾಲಯ ಪ್ರತಿ ವರ್ಷ ಅಖಿಲ ಕರ್ನಾಟಕ ಜನಪದ ಸಮ್ಮೇಳನ ನಡೆಸುತ್ತಿದ್ದು, ೧೯೭೮ರಲ್ಲಿ ಐದನೇ ಸಮ್ಮೇಳನ ಗುಲಬರ್ಗಾದಲ್ಲಿ ನಡೆಯಿತು. ಇದರಲ್ಲಿ ಹೈದರಾಬಾದ್ ಪ್ರದೇಶ ಜನಪದ ಕಲೆಯ ಪ್ರದರ್ಶನವೂ ನಡೆಯಿತು. ೧೯೮೩ರಲ್ಲಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಸಣ್ಣಾಟಗಳ ವಿಚಾರಗೋಷ್ಠಿ ನೆರವೇರಿತು.

ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡಮಿ ಆರಂಭವಾದ ಮೇಲೆ ಜಿಲ್ಲೆಯಲ್ಲಿ ಜನಪದ ಕುರಿತ ವಿಚಾರಗೋಷ್ಠಿ ಕಲಾಪ್ರದರ್ಶನ ಪ್ರಶಸ್ತಿ ವಿತರಣೆ ಇತ್ಯಾದಿ ಹಲವಾರು ಕಾರ್ಯಕ್ರಮಗಳು ಅಕಾಡಮಿಯಿಂದ ನೇರವಾಗಿ ಇಲ್ಲವೆ ಅನುದಾನ ನೀಡುವ ಮೂಲಕ ನೇರವೇರುತ್ತಿವೆ. ಅಲ್ಲದೆ ವಿಶ್ವವಿದ್ಯಾಲಯ ಅಥವಾ ಸ್ಥಳೀಯ ಸಂಘ ಸಂಸ್ಥೆಗಳು ವಿದ್ಯಾ ಶಾಲೆಗಳು ಮಠಮಾನ್ಯಗಳು ಸಹ ಜನಪದ ವಿಚಾರ, ಕಲೆಗಳಿಗೆ ಆಗಿಂದಾಗ್ಗೆ ಪ್ರೋತ್ಸಾಹ ನೀಡುತ್ತಿವೆ.

## ಸಂಘ-ಸಂಸ್ಥೆಗಳು

ಜಿಲ್ಲೆಯ ಸಂಘ ಸಂಸ್ಥೆಗಳು ಸಾಂಸ್ಕೃತಿಕ ಕ್ಷೇತ್ರಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಿವೆ. ತವಗ ಭೀಮಸೇನರಾಯರು ೧೯೪೧ ರಲ್ಲಿ ಗುಲಬರ್ಗಾಗೆ ಬಂದ ನಂತರ ಅಶ್ವತ್ಥರಾವ್ ವಕೀಲ, ಮಾಜೇಂದ್ರರಾವ್, ದತ್ತಾತ್ರೇಯರಾವ ಅವರಾದಿ ಮುಂತಾದವರು ಕೂಡಿಕೊಂಡು ಆ ವರ್ಷ ಕನ್ನಡ ಸಾಹಿತ್ಯ ಸಂಘವೊಂದನ್ನು ಆರಂಭಿಸಿದರು. ನಿವೇಶನವನ್ನು ಕೊಂಡು ಸಂಘಕ್ಕೆ ಹೊಸ ಕಟ್ಟಡ ಮಾಡಿಕೊಂಡರು. ಈ ಸಂಘದ ಸ್ಥಾಪನೆಗೂ ಮೊದಲು ಹೇರೂರ್ ದತ್ತಾತ್ರಯರಾವ್ ಅವರ ನೇತೃತ್ವದಲ್ಲಿ 'ತರುಣರ ತಂಡ'ವೊಂದು ಇದ್ದು ಅಲ್ಲಿಂದಲೂ ನಾಡಹಬ್ಬ ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕನ್ನಡ ಸಾಹಿತ್ಯ ಸಂಘದಲ್ಲಿ ಉತ್ತಮ ಗ್ರಂಥ ಭಂಡಾರವಿದೆ. ನಾಡಹಬ್ಬ ಇತ್ಯಾದಿ ಕಾರ್ಯಕ್ರಮಗಳಲ್ಲಿ ಹಲವಾರು ಸ್ಪರ್ಧೆಗಳನ್ನು ಉಪನ್ಯಾಸಗಳನ್ನು ಹಮ್ಮಿಕ್ಕೊಳ್ಳುತ್ತದೆ. ಈ ಐವತ್ತು ವರ್ಷಗಳಲ್ಲಿ ಬಿ. ಎಂ. ಶ್ರೀ, ಬೇಂದ್ರೆ, ಮಾಸ್ತಿ ಮೊದಲುಗೊಂಡು ಕನ್ನಡ ನಾಡಿನ ಅನೇಕ ಪ್ರಮುಖ ಸಾಹಿತಿಗಳು ಇಲ್ಲಿ ತಮ್ಮ ಉಪನ್ಯಾಸ ಕಾರ್ಯಕ್ರಮ ನೀಡಿದ್ದಾರೆ ಸಂಘದ ವತಿಯಿಂದ ಹಲವಾರು ಪುಸ್ತಕಗಳೂ ಪ್ರಕಟವಾಗಿವೆ.

ಸುರಪುರದ ಬಳಿಯ ರಂಗಂಪೇಟೆಯ ಕನ್ನಡ ಸಾಹಿತ್ಯ ಸಂಘವು ೧೯೪೩ರಲ್ಲಿ ಎಂ. ಆರ್. ಬುದ್ಧಿವಂತ ಶೆಟ್ಟರು ಹಾಗೂ ಸಗರ ಕೃಷ್ಣಾಚಾರ್ ಮುಂತಾದವರಿಂದ ಆರಂಭವಾಯಿತು. ಆರಂಭದಲ್ಲಿ 'ಅರುಣ' ಎಂಬ ಕೈಬರಹದ ಪತ್ರಿಕೆ ಹೊರತರುತ್ತಿತ್ತು. ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳಿಗೆ ತರಗತಿಗಳನ್ನು ನಡೆಸುತ್ತಿತ್ತು. ಸಂಘದ ಮುಖ್ಯ ಕಾರ್ಯಕ್ರಮಗಳು ನಾಡಹಬ್ಬ, ವಾರ್ಷಿಕೋತ್ಸವ, ವಸಂತ ಸಾಹಿತ್ಯೋತ್ಸವ, ಸ್ಮಾರಕ ಉಪನ್ಯಾಸ ಮಾಲೆ ಇತ್ಯಾದಿಗಳಾಗಿದ್ದು ನಾಡಿನ ಅನೇಕ ಗಣ್ಯರು ಇವುಗಳಲ್ಲಿ ಭಾಗವಹಿಸಿದ್ದಾರೆ. ಸಂಘದಲ್ಲಿ ಉತ್ತಮ ಗ್ರಂಥ ಭಂಡಾರವಿದ್ದು ಹಲವಾರು ಪುಸ್ತಕಗಳನ್ನು ಪ್ರಕಾಶಪಡಿಸಿದೆ. ಏಪ್ರಿಲ್ ೧೯೯೭ರಲ್ಲಿ ಸಂಘ ಚಿನ್ನದ ಹಬ್ಬವನ್ನು ಆಚರಿಸಿತು. ರಂಗಂಪೇಟೆಯಲ್ಲಿ ೧೯೫೯ರಲ್ಲಿ ಸಾರ್ವಜನಿಕ ಸಾಹಿತ್ಯ ಮಂದಿರವೊಂದು ಆರಂಭವಾಗಿ ಹಲವಾರು ಪುಸ್ತಕ ಪ್ರಕಾಶಿಕೆ ಇತ್ಯಾದಿ ಕಾರ್ಯಗಳನ್ನು ಕೈಗೊಂಡಿತು. ಭಾಗ್ಯೋದಯ ಗ್ರಂಥ ಮಾಲೆ ಎಂಬ ಒಂದು ಗ್ರಂಥ ಪ್ರಕಾಶನವೂ ಅಲ್ಲಿತ್ತು. ಶಹಾಬಾದ್‌ನಲ್ಲಿ ೧೯೪೭ರಲ್ಲಿ ಗೋಪಾಲರಾವ್ ಕಟ್ಟಿ, ತಮ್ಮಣ್ಣಾಚಾರ್ಯ ಅರೇಕಲ್ ಮುಂತಾದ ಗಣ್ಯರು ಕನ್ನಡ ಸಂಘವನ್ನು ಸ್ಥಾಪಿಸಿ ಉಪನ್ಯಾಸ, ನಾಡಹಬ್ಬ ಇತ್ಯಾದಿ ಕನ್ನಡ ಪರ ಕೆಲಸದಲ್ಲಿ ತೊಡಗಿಸಿಕೊಂಡರು.

**ಕನ್ನಡ ಸಾಹಿತ್ಯ ಪರಿಷತ್** : ಕನ್ನಡ ಸಾಹಿತ್ಯ ಪರಿಷತ್ತಿನ ೧೪ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ೧೯೨೮ರಲ್ಲಿ ಬಿ. ಎಂ. ಶ್ರೀ ಅವರ ಅಧ್ಯಕ್ಷತೆಯಲ್ಲಿ ಗುಲಬರ್ಗಾದಲ್ಲಿ ನೆರವೇರಿತ್ತು. ಕಾರಣಾಂತರದಿಂದ ಸುರಪುರದಲ್ಲಿ ನೆಲೆ ನಿಂತ ರೆವರೆಂಡ್ ನಾನಪ್ಪದೇಸಾಯಿ (ಮೂಲತಃ ಇವರು ಕಾಕತಿಯ ದೇಸಾಯಿ ರಾಜಮನೆತನದವರು) ಅವರು ೧೯೩೯ರ ವೇಳೆಯಲ್ಲಿ ಪರಿಷತ್ತಿನೊಂದಿಗೆ ಸಂಬಂಧವಿರಿಸಿಕೊಂಡಿದ್ದು ಅದರ ವತಿಯಿಂದ ವಸಂತ ಸಾಹಿತ್ಯೋತ್ಸವ ಇತ್ಯಾದಿ ಹಲವಾರು ಕಾರ್ಯಕ್ರಮ ರೂಪಿಸಿದರು. ಮತ್ತೆ ೧೯೪೯ರಲ್ಲಿ ಚನ್ನಪ್ಪ ಉತ್ತಂಗಿ ಅವರ ಅದ್ಯಕ್ಷತೆಯಲ್ಲಿ ೩೨ ನೇಯ ಹಾಗೂ ೧೯೮೭ರಲ್ಲಿ ಸಿದ್ದಯ್ಯ ಪುರಾಣಿಕ ಅವರ ಅಧ್ಯಕ್ಷತೆಯಲ್ಲಿ ೫೮ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಗುಲಬರ್ಗಾದಲ್ಲಿ ನಡೆದವು.

ಈವರೆಗೆ (೧೯೯೭) ನಾಲ್ಕು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ನೆರವೇರಿವೆ. ಮೊದಲ ಮೂರು ಸಮ್ಮೇಳನಗಳು ಕ್ರಮವಾಗಿ ಚ.ಜ.ನಿ, ಭೀಮಸೇನರಾವ್ ತವಗ, ಶೈಲಜ ಉಡುಚಣ ಅವರ ಅಧ್ಯಕ್ಷತೆಯಲ್ಲಿ ಗುಲಬರ್ಗಾದಲ್ಲಿ ನಡೆಯಿತು. ನಾಲ್ಕನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನ ಯಾದಗಿರಿಯಲ್ಲಿ ಬಿ. ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್ ೧೯೯೫ರಲ್ಲಿ ನೆರವೇರಿತು. ಇವಲ್ಲದೆ ತಾಲೂಕು ಮಟ್ಟದಲ್ಲಿಯೂ ಸಾಹಿತ್ಯ ಸಮ್ಮೇಳನ ನಡೆದಿದ್ದು ಸೇಡಂನಲ್ಲಿ ೧೯೮೧ ಹಾಗೂ

೧೯೯೫ರಲ್ಲಿ ಎರಡು ಬಾರಿ ಸಂಘಟಿತವಾಗಿತ್ತು. ೧೯೯೫ರ ಸಮ್ಮೇಳನಕ್ಕೆ ಕೆರಳಿ ಗುರುನಾಥ ರೆಡ್ಡಿ ಅವರು ಅಧ್ಯಕ್ಷರಾಗಿದ್ದರು. ೧೯೯೬ರಲ್ಲಿ ಡಾ. ಕೆ. ಮುದ್ದಣ್ಣ ಅವರ ಅಧ್ಯಕ್ಷತೆಯಲ್ಲಿ ಸುರಪುರ ತಾಲೂಕಿನ ಪ್ರಥಮ ಸಾಹಿತ್ಯ ಸಮ್ಮೇಳನ ನಡೆಯಿತು.

ಭೀಮಸೇನರಾವ್‌ತವಗ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳನ್ನು ಜಿಲ್ಲೆಯಲ್ಲಿ ನಡೆಸುತ್ತಿದ್ದು ೧೯೬೩ರ ವೇಳೆಯಲ್ಲಿ ಜಿಲ್ಲಾ ಸಮಿತಿಯ ಅಧ್ಯಕ್ಷರೂ ಆಗಿದ್ದು ಜಿಲ್ಲಾ ಸಾಹಿತ್ಯ ಸಮ್ಮೇಳನ, ಜನಪದ ಮೇಳ, ಮಹಿಳಾ ವರ್ಷ, ಪುಸ್ತಕ ವರ್ಷ ಇತ್ಯಾದಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಂಡಿದ್ದರು. ೧೯೮೨ರಲ್ಲಿ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್‌ನ ವತಿಯಿಂದ ಗುಲಬರ್ಗಾದಲ್ಲಿ ನೆರವೇರಿತು. ಗುಲಬರ್ಗಾ ಶಹರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಕ್ಕೆ ವಿಶಾಲವಾದ ಸ್ಥಳ ಲಭ್ಯವಾಗಿದ್ದು ಜುಲೈ ೧೯೯೫ರಲ್ಲಿ ಅವರದೇ ಆದ ಸ್ವಂತ ಕಟ್ಟಡವಾದ 'ಕನ್ನಡ ಭವನ' ರೂಪುಗೊಂಡಿತು. ಹತ್ತು ತಾಲೂಕುಗಳಲ್ಲಿ ತಾಲೂಕು ಘಟಕಗಳು ಇದ್ದು ಇವು ಕನ್ನಡ ಪರ ಕಾರ್ಯಕ್ರಮಗಳು, ನಾಮಫಲಕ ಅಂದೋಲನ, ಗಾಂಧೀಜಯಂತಿ, ಶ್ರಾವಣ ಸಂಜೆ ಕಾರ್ಯಕ್ರಮ, ಕವಿ-ಕಾವ್ಯಗೋಷ್ಠಿ, ಸನ್ಮಾನ, ಕನ್ನಡೇತರರಿಗೆ ಕನ್ನಡ ಕಲಿಕೆ, ಚಿತ್ರ, ಸಂಗೀತ, ನಾಟಕಗಳ ಪ್ರದರ್ಶನ ಇತ್ಯಾದಿ ಹಲವಾರು ಕಾರ್ಯಕ್ರಮ ನಡೆಸುತ್ತಿವೆ. ಜನವರಿ ೧೯೯೬ರಲ್ಲಿ ರಾಜ್ಯಮಟ್ಟದ ಪುಸ್ತಕ ಪ್ರದರ್ಶನವನ್ನು ಪುಸ್ತಕ ಪ್ರಾಧಿಕಾರದವರು ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ನೆರೆವೇರಿಸಿದರು. ಪ್ರಸ್ತುತ ಪಿ. ಎಂ. ಮಣ್ಣೂರ್ ಅವರು ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದಾರೆ.

ಹೈದರಾಬಾದ್ ಕರ್ನಾಟಕ ಸಾಹಿತ್ಯ ಪರಿಷತ್‌ನ ವತಿಯಿಂದ ಈ ಹಿಂದೆ ಬೀದರ್, ರಾಯಚೂರುಗಳಲ್ಲದೆ, ಯಾದಗಿರಿಯಲ್ಲಿ ಸಿದ್ದಯ್ಯ ಪುರಾಣಿಕರ ಅಧ್ಯಕ್ಷತೆ ಯಲ್ಲಿಯೂ, ಯಾಳಗಿಯಲ್ಲಿ ಮಾನ್ವಿ ನರಸಿಂಹರಾಯರ ಅಧ್ಯಕ್ಷತೆಯಲ್ಲಿಯೂ ಸಮ್ಮೇಳನಗಳು ನಡೆದಿದ್ದವು. ನಿಜಾಂ ಕರ್ನಾಟಕ ಪರಿಷತ್ತಿನ ಮೂರನೆ ಅಧಿವೇಶನ ಸುರಪುರದಲ್ಲಿ ಅಣ್ಣಾರಾವ್ ಗಣಮುಖಿ ಅದರ ಅಧ್ಯಕ್ಷತೆಯಲ್ಲಿ ೧೯೪೨ರಲ್ಲಿ ನಡೆಯಿತು.

ಇದಲ್ಲದೆ ಜಿಲ್ಲೆಯಾದ್ಯಂತ ಅನೇಕ ಸಂಘ - ಸಂಸ್ಥೆಗಳು ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪರವಾದ ಕಾರ್ಯ ನಿರ್ವಹಿಸುತ್ತಿವೆ. ಗುಲಬರ್ಗಾದ ಉದಯೋನ್ಮುಖ ಯುವ ಬರಹಗಾರರ ಬಳಗದವರು ಸಾಹಿತಿಗಳಿಗೆ ಸನ್ಮಾನ, ಚಿತ್ರ-ಕಾವ್ಯ ಗೋಷ್ಠಿ ಇಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುತ್ತಾರೆ. ಪ್ರಮುಖರ ನೆನಪಿನ ಕೆಲವು ಸಾಹಿತ್ಯ ಪ್ರಶಸ್ತಿಗಳನ್ನು ಬಳಗದ ಮೂಲಕ ನೀಡಲಾಗುತ್ತಿತ್ತು. ಅಂತೆಯೇ ಸಂಧ್ಯಾ ಸಾಹಿತ್ಯ ವೇದಿಕೆ ಕಥಾ ಶಿಬಿರ, ಸಾಹಿತ್ಯ ವಿಮರ್ಶಾ ಗೋಷ್ಠಿ ಕಾವ್ಯಾವಾಚನ ಗೋಷ್ಠಿ ಇತ್ಯಾದಿ ಏರ್ಪಡಿಸುತ್ತಿವೆ. ಸುಲೇಮಾನ್ ಖತೀಬ್ ಸ್ಮಾರಕ ಶೈಕ್ಷಣಿಕ ಸಾಂಸ್ಕೃತಿಕ ಸಂಸ್ಥೆ ಪ್ರತಿ ವರ್ಷ ರಾಜ್ಯ ಮಟ್ಟದಲ್ಲಿ ಉರ್ದು ಸಾಹಿತ್ಯಕ್ಕೆ ಪ್ರಶಸ್ತಿ ನೀಡುತ್ತಿದೆ. ೧೯೯೬ರಲ್ಲಿ ಎಸ್. ಆರ್. ಪಾಟೀಲ ಫೌಂಡೇಶನ್‌ನಿಂದ ಸಾಂಸ್ಕೃತಿಕ ಸಂಶೋಧನೆ ಪುಸ್ತಕ ಪ್ರಕಟಣೆ ಇತ್ಯಾದಿ ಕಾರ್ಯಕ್ರಮಗಳು ನಡೆದವು. 'ವಚನೋತ್ಸವ' ಸಂಘಟಿಕರು ವಾರದಲ್ಲಿ ಒಂದು ದಿನ ವಚನವಾಚನ ಗೋಷ್ಠಿ ಏರ್ಪಡಿಸುತ್ತಾರೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಇಲ್ಲಿ ಆರಂಭವಾದಾಗಲೇ 'ಕನ್ನಡ ಸಾಹಿತ್ಯ ಸಂಘ'ವೊಂದು ಜನ್ಮತಳೆದಿದ್ದು, ಹಲವಾರು ಸಾಹಿತ್ಯಪರ ಕಾರ್ಯಕ್ರಮ ನೆರವೇರಿಸುತ್ತಿದ್ದು ೧೯೯೫ರಲ್ಲಿ ತನ್ನ ಇಪ್ಪತ್ತ ಐದನೇ ವರ್ಷದ ಬೆಳ್ಳಿಹಬ್ಬ ಆಚರಿಸಿ 'ಕನ್ನಡ ಬಳ್ಳಿ' ಎಂಬ ನೆನಪಿನ ಹೊತ್ತಿಗೆ ಪ್ರಕಟಿಸಿತು. ವಿಶ್ವವಿದ್ಯಾಲಯದಲ್ಲಿಯೇ 'ಸೂರ್ಯ' ಎಂಬ ವಿದ್ಯಾರ್ಥಿಗಳ ಕ್ರಿಯಾಶೀಲತೆ ಹೆಚ್ಚಿಸುವ ರಾಷ್ಟ್ರಮಟ್ಟದ ಸಂಸ್ಥೆಯೊಂದಿದ್ದು ಆಕ್ಟೋಬರ್ ೧೯೯೬ರಲ್ಲಿ ಮೂರು ದಿನಗಳ ಕಾಲದ ರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿ ಸಮ್ಮೇಳನ ಪ್ರತಿಭಾ ಪ್ರದರ್ಶನ ಇತ್ಯಾದಿ ಏರ್ಪಡಿಸಿತ್ತು. ಉಳಿದಂತೆ ಜಿಲ್ಲೆಯಲ್ಲಿ 'ಕಲ್ಬುರ್ಗಿಯ ಸಮುದಾಯ' 'ಜನವಾದಿ ಮಹಿಳಾ ಸಂಘಟನೆ' 'ಸ್ನೇಹ ಸಾಹಿತ್ಯ' ಮತ್ತು 'ಸಾಂಸ್ಕೃತಿಕ ಬಳಗ' 'ಜ್ಞಾನ ವಿಜ್ಞಾನ ಸಮಿತಿ' 'ಅಮರ ಕಲಾವೃಂದ' 'ರಚನಾ ವೇದಿಕೆ' ಮುಂತಾದ ಸಂಘಟನೆಗಳು ಗುಲಬರ್ಗಾ ಊರಲ್ಲೂ ಸೇಡಂನ 'ನೃಪತುಂಗ ಅಧ್ಯಯನ ಸಂಸ್ಥೆ' ಆಳಂದದ 'ವಿಶ್ವರಂಗ ಕಲಾಬಳಗ ಸುರಪುರದ ಮಹಾಕವಿ ಲಕ್ಷ್ಮೀಶ ವಾಚನಾ ಸಂಘ' ಹಾಗೂ 'ಕನ್ನಡ ಗೆಳೆಯರ ಬಳಗ' ಶಹಾಪುರದ 'ಹೈದರಾಬಾದ್ ಕರ್ನಾಟಕ ಯುವಬರಹಗಾರರ ಬಳಗ' ಶಹಾಬಾದ್ 'ಕನ್ನಡ ಗೆಳೆಯರ ಬಳಗ' ಮುಂತಾದ ಹಲವಾರು ಸಂಘ ಸಂಸ್ಥೆಗಳನ್ನು ಉದಾಹರಿಸಬಹುದು. ಇವರುಗಳು ಸಂಸ್ಕೃತಿ ಮತ್ತು ಸಾಹಿತ್ಯ ಪರವಾದ ಹಾಗೂ ಜನಜಾಗೃತಿ ಮಾಡುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುವುದುಂಟು.

ಈಚೆಗೆ ಗುಲಬರ್ಗಾದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕ ಆರಂಭವಾಯಿತು. (ಇದರ ಮೂಲ ಮೈಸೂರಿನ ಸುತ್ತೂರು ಮಠ), ಕರ್ನಾಟಕ ಸಂಘರ್ಷ ಸೇನಾ ಜಿಲ್ಲಾ ಶಾಖೆಯೂ ಗುಲಬರ್ಗಾದಲ್ಲಿದ್ದು ಕವಿಗೋಷ್ಠಿ ಇತ್ಯಾದಿ ಕಾರ್ಯಕ್ರಮ ನಡೆಸುತ್ತಿದೆ. ಉದಯೋನ್ಮುಖ ಬರಹಗಾರರ ಬಳಗದ ಶಾಖೆಗಳು ತಾಲೂಕುಗಳಲ್ಲಿ ಇದ್ದು ತನ್ನ ಕಾರ್ಯಕ್ರಮಗಳನ್ನು ಅಲ್ಲಿಗೂ ವಿಸ್ತರಿಸಿದೆ. ಗುಲಬರ್ಗಾ ಜಿಲ್ಲಾ ದಲಿತ ಕಲಾವಿದರ ಸಂಘವೊಂದಿದ್ದು ಜಿಲ್ಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತದೆ.

ಗುಲಬರ್ಗಾ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯ ಕೆಲ ಬೋಧಕ ವರ್ಗದವರು ಪುಸ್ತಕ ಅಕಾಡಮಿ ಯೊಂದನ್ನು ಸ್ಥಾಪಿಸಿ ಪುಸ್ತಕ ಪ್ರಕಟಣೆ, ಸಂವಾದ, ವಿಚಾರ ಸಂಕಿರಣ, ಕಮ್ಮಟ ಇತ್ಯಾದಿ ಚಟುವಟಿಕೆಯಲ್ಲಿ ತೊಡಿಸಿಕೊಂಡಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದ ಆಸುಪಾಸಿನಲ್ಲಿ ಹೈದರಬಾದ್ ಕರ್ನಾಟಕದಲ್ಲಿ ಅನೇಕ ವಾಚನಾಲಯಗಳು ಆರಂಭಗೊಂಡು ಜನರಿಗೆ ಓದುವ ಅಭಿರುಚಿ ಬೆಳೆಸುವುದೊಂದಿಗೆ ಪ್ರತಿಷ್ಠಿತ ವ್ಯಕ್ತಿಗಳಿಂದ, ಸಾಹಿತಿ ವಿದ್ವಾಂಸರುಗಳಿಂದ ಆಗಿಂದಾಗ್ಗೆ ಪ್ರವಚನ, ಉಪನ್ಯಾಸ, ಕಾವ್ಯ-ನಾಟಕ ವಾಚನ ಇತ್ಯಾದಿ ಏರ್ಪಡಿಸಿ ಕನ್ನಡ ಸಾಹಿತ್ಯ ಕಲೆಗಳನ್ನು ಪರಿಚಯಿಸುವ ಕಾರ್ಯ ಮಾಡತೊಡಗಿದ್ದವು. ಅವುಗಳಲ್ಲಿ ಜಿಲ್ಲೆಯ ವೀರಶೈವ ಬಂಧು ಸಮಾಜ ವಾಚನಾಲಯ, ಚಿಂಚೋಳಿಯ ಭಾರತ ವಾಚನಾಲಯ, ಸುಲಹಾಪೇಟೆ ಕರ್ನಾಟಕ ವಾಚನಾಲಯ, ಶಹಾಪುರ ವೇಣುಗೋಪಾಲ ವಾಚನಾಲಯ ಇತ್ಯಾದಿ ಉದಾಹರಿಸಬಹುದು.

## ಸಿನಿಮಾ

ಜಿಲ್ಲೆಯಲ್ಲಿ ಸಿನಿಮಾ ಉದ್ಯಮ ೧೯೭೫ರಿಂದ ಈಚೆಗೆ ಕಂಡುಬರುತ್ತದೆ. ವರ್ಗೀಸ್ ಅವರು ಮಾನಿನಿ, ಮಾನಸಸರೋವರ, ಧರಣಿ ಮಂಡಲ, ನೆನಪಿನ ದೋಣಿ, ಶಿವಕೊಟ್ಟ ಸೌಭಾಗ್ಯ, ಪ್ರೇಮಾಗ್ನಿ ಇತ್ಯಾದಿ ಕನ್ನಡ ಚಿತ್ರಗಳಲ್ಲದೆ ಮೂರು ಮಲಯಾಳಿ ಚಿತ್ರಗಳನ್ನೂ ನಿರ್ಮಿಸಿದ್ದಾರೆ. ಅವರು ನಿರ್ಮಿಸಿದ ಆಸ್ಫೋಟ ಸಿನಿಮಾಗೆ ಪ್ರಶಸ್ತಿ ಸಂದಾಯವಾಗಿದೆ. ಅದರ ನಿರ್ಮಾಪಕತ್ವದ ಇನ್ನೊಂದು ಚಿತ್ರ 'ಪರಿವರ್ತನೆಗೆ' ವೈದ್ಯರಾಗಿದ್ದ ಚಿಟುಗುಪ್ಪಿ ಅವರು ನಿರ್ದೇಶಕರಾಗಿದ್ದರು. ಈ ಚಿತ್ರದಲ್ಲಿ ಜಿಲ್ಲೆಯವರೇ ಆದ ಆರ್. ಎನ್. ರಾವ್ ಹಾಗೂ ವೈಶಾಲಿ ಚಿಟಗುಪ್ಪಿ (ಈಗ ವೈಶಾಲಿ ಕಾಸರವಳ್ಳಿ) ಅವರುಗಳು ಪ್ರಮುಖ ಪಾತ್ರದಲ್ಲಿದ್ದರು. ಚಿತ್ರದ ದೃಶ್ಯವೊಂದರಲ್ಲಿ ಗುಲಬರ್ಗಾದ ಪ್ರಮುಖ ವ್ಯಕ್ತಿಗಳ ಚಿತ್ರಣ ಸಹ ಒಂದು ವಿಶೇಷವೆನಿಸಿತ್ತು. ಜಿಲ್ಲೆಯವರಾದ ಕಮಲಾಕರ ಅವರು 'ಸೀಳು ನಕ್ಷತ್ರ' ಎಂಬ ಸಿನಿಮಾ ತೆಗೆದಿದ್ದು ಕಿಶೋರ್ ಕುಮಾರ್ ಎಂಬ ಯುವಕರು ಮುಖ್ಯ ಪಾತ್ರದಲ್ಲಿದ್ದರಲ್ಲದೆ ಕಮಲಾಕರ ಅವರೂ ಅಭಿನಯಿಸಿದ್ದರು. ೧೯೬೧ರಲ್ಲಿ ರಾಜಶೇಖರ ನಾಡಗೌಡ ಅವರು ಮಹಾದಾಸೋಹಿ ಶರಣ ಬಸವೇಶ್ವರ ಚಿತ್ರದ ನಿರ್ಮಾಪಕರಾಗಿದ್ದು ಸ್ಥಳೀಯ ಕಲಾವಿದರೆ ಇದರಲ್ಲಿ ಅಭಿನಯಿಸಿದ್ದರು. ಅಮರ ಹಿರೇಮಠ (ಅಮರ ಪ್ರಿಯ) ಅವರು ಗೀತರಚನೆ ಹಾಗೂ ಸಂಗೀತ ಸಂಯೋಜನಾಕಾರರೂ ಆಗಿದ್ದು ಶಂಕರಲಿಂಗ ಸುಗ್ನಳ್ಳಿ ಅವರ 'ಏಳು ಕೋಟಿ ಮಾರ್ತಾಂಡ ಭೈರವ' ಹಾಗೂ 'ವಿಜಯ ಕಂಕಣ'ಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ.

ಗುಲಬರ್ಗಾದ ಚಿತ್ರಕಲಾವಿದ ಚಂದ್ರಶೇಖರರು ವಿ. ಶಾಂತಾರಾಂ ಅವರ 'ನವರಂಗ್' ಚಿತ್ರಕ್ಕೆ ಸಹಾಯಕ ನಿರ್ದೇಶಕರಾಗಿದ್ದರು. ಗೂಗುವಾಡ ಎಂಬುವವರು ಹಿಂದಿಯ ಆಲಂ ಆರ, ಅಲಿಬಾಬ ಚಾಲೀಸ್ ಚೋರ್ ಚಿತ್ರಗಳಿಗೆ ಸೆಟ್ಟಿಂಗ್ ಕಾರ್ಯ ಮಾಡಿರುವರು. ಅಫಜಲಪುರದ ಉಮೇಶ್ ಕುಲಕರ್ಣಿ ಅವರು ಚಲನಚಿತ್ರ ಸಂಕಲನಕಾರರಾಗಿದ್ದು 'ಶಂಖನಾದ' ಚಿತ್ರದ ಸಂಕಲನಕ್ಕೆ ಪ್ರಶಸ್ತಿಯನ್ನು ಪಡೆದಿದ್ದಾರೆ.

ಜಿಲ್ಲೆಯಿಂದ ಸಿನಿಮಾ ಕ್ಷೇತ್ರಕ್ಕೆ ಕಾಲಿರಿಸಿದ ಪ್ರಮುಖ ಕಲಾವಿದರಲ್ಲಿ ವೈಶಾಲಿ ಕಾಸರವಳ್ಳಿಯೂ ಸೇರಿದಂತೆ ಪ್ರಭಾಕರ ಸಾತಖೇಡ, ಹೇಮಂತ ಕೊಲ್ಲಾಪುರ್, ಈರಣ್ಣ ನವಲಿ ಈಶ್ವರಪ್ಪ ಪರ್ವತಾಬಾದ್, ವನಿತಾ ಮಾನ್ವಿಕರ್, ಶೋಭ ರಂಜೋಳಕರ್, ಶಾಂತ ವೆಂಕಟೇಶ್ ದೇಸಾಯಿ, ಅನಂತ ಹರಸೂರ್, ಸ್ವಾಮಿರಾವ್ ಕುಲಕರ್ಣಿ, ಹೇಮಂತ ಕೊಲ್ಲಾಪುರ್, ಹನುಮಣ್ಣ ನಾಯಕ ದೊರೆ ಮುಂತಾದ ಅನೇಕರನ್ನು ಹೆಸರಿಸಬಹುದು. ಇವರಲ್ಲಿ ಕೆಲವರು ದೂರದರ್ಶನದಲ್ಲಿಯೂ ಪಾಲುಗೊಂಡಿದ್ದಾರೆ.

ಗುಲಬರ್ಗಾದಲ್ಲಿ ಮೊದಲಿಗೆ 'ಪ್ರೇಮ' ಎಂಬ ಟೆಂಟ್ ಸಿನಿಮಾ ಮಂದಿರವಿದ್ದು ನಂತರ 'ಲಕ್ಷ್ಮಿ' ಹಾಗೂ 'ಮದನ್' ಎಂಬ ಚಲನ ಚಿತ್ರ ಮಂದಿರಗಳು ಸ್ಥಾಪಿತವಾದವು. ಯಾದಗಿರಿಯಲ್ಲಿ 'ಶಾರದ' ಒಂದು ಹಳೆಯ ಚಿತ್ರ ಮಂದಿರ. ಜಿಲ್ಲೆಯಲ್ಲಿ ೧೯೯೨ರಲ್ಲಿ ಗುಲಬರ್ಗಾದಲ್ಲಿ ಆರು, ಸುರಪುರ ಹಾಗೂ ಚಿತ್ತಾಪುರಗಳಲ್ಲಿ ತಲಾ ನಾಲ್ಕು, ಶಹಾಪುರ ಮತ್ತು ಯಾದಗಿರಿಯಲ್ಲಿ ತಲಾ ಮೂರು, ಜೇವರ್ಗಿಯಲ್ಲಿ ಎರಡು ಹಾಗೂ ಅಫಜಲಪುರ, ಆಳಂದ, ಚಿಂಚೋಳಿ ಮತ್ತು ಸೇಡಂಗಳಲ್ಲಿ ತಲಾ ಒಂದು ಚಲನ ಚಿತ್ರ ಮಂದಿರಗಳಿದ್ದವು.

x x x x x

ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಯ ಹಲವಾರು ಮುಖಗಳನ್ನು ಒಂದೆಡೆಯಲ್ಲಿ ಇಲ್ಲಿ ಪರಿಚಯಿಸಲಾಗಿದೆ. ಇಲ್ಲಿಯ ಉಪ ಅಧ್ಯಾಯಗಳಲ್ಲಿ ಹಲವಾರು ವ್ಯಕ್ತಿಗಳು, ಕಲಾವಿದರು ಸಂಸ್ಥೆಗಳನ್ನು ಹೆಸರಿಸಲಾಗಿದೆ. ಹೀಗೆ ಪಟ್ಟಿ ಮಾಡುವಲ್ಲಿ ಯಾವುದೇ ಹಿರಿತನವನ್ನಾಗಲೀ, ಪ್ರಶಸ್ತಿ ಪ್ರಾಪ್ತರನ್ನಾಗಲೀ ಅನುಸರಿಸಿಲ್ಲ. ಆಯಾ ಕ್ಷೇತ್ರದಲ್ಲಿ ಕ್ರಿಯಾಶೀಲ, ಸೃಜನಶೀಲರಾಗಿರುವ ಇನ್ನೂ ಅನೇಕ ಕಲಾವಿದರಿದ್ದಾರೆ. ಸಮಯಾಭಾವ, ಮಾಹಿತಿಯ ಅಭಾವ ಇತ್ಯಾದಿಯಿಂದಾಗಿ ಉದಾಹರಿಸಲು ಸಾಧ್ಯವಾಗಿರುವುದಿಲ್ಲ. ಜಿಲ್ಲೆಯ ಸಾಂಸ್ಕೃತಿಕ ಮುಖಗಳನ್ನು ಅವುಗಳ ರೂಪ, ಬೆಳವಣಿಗೆಯ ಹಾದಿಯನ್ನು ಸ್ಥೂಲವಾಗಿ ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.